# ಆರೋಗ್ಯ ಸಂಗಮ

## ಅನುಷ್ಠಾನದ ರೂಪುರೇಷೆ

ಆರೋಗ್ಯ ಮತ್ತು ಆರೋಗ್ಯದ ಸಾಮಾಜಿಕ ನಿರ್ಧಾರಕ ಅಂಶಗಳಿಗಾಗಿ ಸಮುದಾಯ, ಗ್ರಾಮ ಪಂಚಾಯಿತಿಗಳು ಮತ್ತು ಸೇವಾ ಪೂರೈಕೆದಾರರ ನಡುವೆ ಪಾಲುದಾರಿಕೆಯನ್ನು ನಿರ್ಮಿಸುವಲ್ಲಿ ಕರ್ನಾಟಕ ಸರ್ಕಾರದ ಉಪಕ್ರಮ



ತಾಂತ್ರಿಕ ಬೆಂಬಲ: KHPT engage, innovate, empower
JOHNS HOPKINS BLOOMBERG SCHOOL of PUBLIC HEALTH

# ಆರೋಗ್ಯ ಸಂಗಮ

## ಅನುಷ್ಠಾನದ ರೂಪುರೇಷೆ

**ಆರೋಗ್ಯ ಮತ್ತು ಆರೋಗ್ಯದ ಸಾಮಾಜಿಕ ನಿರ್ಧಾರಕ ಅಂಶಗಳಿಗಾಗಿ ಸಮುದಾಯ, ಗ್ರಾಮ ಪಂಚಾಯಿತಿಗಳು ಮತ್ತು ಸೇವಾ ಪೂರೈಕೆದಾರರ ನಡುವೆ ಪಾಲುದಾರಿಕೆಯನ್ನು ನಿರ್ಮಿಸುವಲ್ಲಿ ಕರ್ನಾಟಕ ಸರ್ಕಾರದ ಉಪಕ್ರಮ**


# ಕೃತಜ್ಞತೆಗಳು

ಗ್ರಾಮೀಣ ಪ್ರದೇಶಗಳ ತಳಮಟ್ಟದಲ್ಲಿ ಸಮುದಾಯ, ಪಂಚಾಯಿತಿಗಳು ಮತ್ತು ಆರೋಗ್ಯ ಸೇವಾ ಪೂರೈಕೆದಾರರನ್ನು ಒಳಗೊಂಡಂತೆ ಸಮನ್ವಯ ಮತ್ತು ಸಮುದಾಯದ ಮಾಲೀಕತ್ವವನ್ನು ಹೆಚ್ಚಿಸುವುದು ಮತ್ತು ಒಗ್ಗೂಡಿಸುವಿಕೆಯ ಸುಸ್ಥಿರ ಮಾದರಿಯನ್ನು ಅಭಿವೃದ್ಧಿಪಡಿಸುವ ಮೂಲಕ ಸಾಮರ್ಥ್ಯ ನಿರ್ಮಾಣ ಮಾಡುವುದು 'ಆರೋಗ್ಯ ಸಂಗಮ' ಯೋಜನೆಯ ಉದ್ದೇಶವಾಗಿದೆ.

ಈ ಮಹತ್ವಾಕಾಂಕ್ಷಿ ಪ್ರಯತ್ನದಲ್ಲಿ ಹಲವಾರು ಭಾಗೀದಾರರು ಪ್ರಾಯೋಗಿಕ ಯೋಜನೆಗೆ ಬೆಂಬಲ ನೀಡಿದ್ದಾರೆ. ಇವರ ಸಹಕಾರದಿಂದ 'ಆರೋಗ್ಯ ಸಂಗಮ–ಅನುಷ್ಠಾನ ರೂಪುರೇಷೆಯ' ವಿನ್ಯಾಸ ಹೊರಬಿದ್ದಿದೆ. ಇಂತಹ ಎಲ್ಲರ ಶ್ರಮಕ್ಕೆ ನಾವು ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ಈ ರೂಪುರೇಷೆಯ ತಯಾರಿ ಮತ್ತು ಜಾರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗ ತಾಂತ್ರಿಕ ಮಾರ್ಗದರ್ಶನ ಹಾಗೂ ಬೆಂಬಲವನ್ನು ನೀಡಿ ಈ ಕೈಂಕರ್ಯಕ್ಕೆ ಸಹಕರಿಸಿದ್ದಾರೆ.

ಜಾನ್ಸ್ ಹಾಪ್ಕಿನ್ಸ್ ಬ್ಲೂಮ್‌ಬರ್ಗ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್ (ಜೆಹೆಚ್‌ಯು) ಮತ್ತು ಕೆಹೆಚ್‌ಪಿಟಿ ಈ ಕಾರ್ಯಕ್ರಮ ಯಶಸ್ವಿಯಾಗಿ ರೂಪುಗೊಳ್ಳಲು ಆಪ್ತ ಹಾಗೂ ಸೂಕ್ತ ಬೆಂಬಲ ನೀಡಿ, ಪೋಷಿಸಿದ್ದಾರೆ. ಇವರಿಗೂ ನಮ್ಮ ಆತ್ಮೀಯ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಈ ರೂಪುರೇಷೆಯ ಪ್ರಸ್ತುತತೆಯನ್ನು ಪರೀಕ್ಷಿಸಲು ತರಬೇತಿಯಲ್ಲಿ ಭಾಗವಹಿಸಿದ ಗ್ರಾಮ ಪಂಚಾಯತಿಯ ಕಾರ್ಯಪಡೆಯ ಸದಸ್ಯರು, ಸಮುದಾಯ ಸದಸ್ಯರು (ವಿಶೇಷವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಮಹಿಳೆಯರನ್ನು ಒಳಗೊಂಡಂತೆ), ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರ/ಆಯುಷ್ಮಾನ್ ಆರೋಗ್ಯ ಮಂದಿರದ ಪ್ರಾಥಮಿಕ ಆರೋಗ್ಯ ಆರೈಕೆ ಸೇವಾ ಪೂರೈಕೆದಾರರು, ಆಶಾ ಕಾರ್ಯಕರ್ತೆಯರು, ಸರ್ಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಶಾಲಾ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು, ಸ್ವ–ಸಹಾಯ ಸಂಘಗಳ ಸದಸ್ಯರು, ಹಾಗೂ ಸಮಾಜಕಲ್ಯಾಣ ಇಲಾಖೆ ಪ್ರತಿನಿಧಿಗಳಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು. ಇವರ ಪ್ರಮುಖ ಅಭಿಪ್ರಾಯಗಳು ರೂಪುರೇಷೆಯನ್ನು ಹೆಚ್ಚು ಉಪಯೋಗೋಚಿತವಾಗಿ ರೂಪಿಸುವಲ್ಲಿ ಸಹಾಯಮಾಡಿವೆ.

ಈ ಅನುಷ್ಠಾನ ರೂಪುರೇಷೆ ಪರಿಪೂರ್ಣವಾಗಲು ತಮ್ಮ ಅಮೂಲ್ಯ ಕೊಡುಗೆ ನೀಡಿದ ಕರ್ನಾಟಕದ ಚಾಮರಾಜನಗರ ಮತ್ತು ರಾಯಚೂರು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದ ಸಿಬ್ಬಂದಿವರ್ಗಗಳಿಗೆ ಕೆಹೆಚ್‌ಪಿಟಿ ಪರವಾಗಿ ಅನಂತ ವಂದನೆಗಳನ್ನು ಸಲ್ಲಿಸುತ್ತೇವೆ.



### ಕೊಡುಗೆ ಮತ್ತು ಸಂಪಾದಕರ ವೃಂದ

**ಕೆಹೆಚ್‌ಪಿಟಿ**

ಮೋಹನ್ ಹೆಚ್.ಎಲ್
ಡಾ. ಸ್ವರೂಪ್ ಎನ್
ಪೂರ್ಣಿಮಾ ಬಿ.ಎಸ್
ಅಂಬುಜಾ ಕೌಲಗಿ
ವಿದ್ಯಾಚರಣ್ ಮಾಳ್ವೆ
ಅರಿನ್ ಕರ್
ಜ್ಯೋತಿ ಎಂ.ಕೆ

**ಜೆಹೆಚ್‌ಯು**

ಪ್ರೊ. ಸ್ವಿಯಾ ಕ್ಲೋಸರ್
ಡಾ. ಶಾಲಿನಿ ಸಿಂಗ್
ದೀಕ್ಷಾ ಖುರಾನಾ
ಎಮಿಲಿ ಮಿಲ್ಲರ್

### ಸಲಹೆ ಮತ್ತು ಸಹಕಾರ

**ಶ್ರೀಮತಿ ಉಮಾ ಮಹಾದೇವನ್,** ಐಎಎಸ್., ಅಭಿವೃದ್ಧಿ ಆಯುಕ್ತರು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ
**ಡಾ. ಅರುಂಧತಿ ಚಂದ್ರಶೇಖರ್,** ಐಎಎಸ್., ಆಯುಕ್ತರು
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ
**ಡಾ. ವಸುಂಧರಾ ದೇವಿ,** ಸಲಹೆಗಾರರು
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ–ಗ್ರಾಮ್ ಸ್ವರಾಜ್ ಅಭಿಯಾನ
**ಶ್ರೀಮತಿ ನಾಗವೇಣಿ,** ಉಪ ನಿರ್ದೇಶಕರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ

### ವಿನ್ಯಾಸ

ಅನಿಲಕುಮಾರ ರಾಂಪೂರ

### ಛಾಯಾಚಿತ್ರಗಳು

ಜ್ಯೋತಿ ಎಂ.ಕೆ



©KHPT, 2025



Publisher:
**KHPT**
IT Park, 5th floor
1-4, Rajajinagar Industrial Area
behind KSSIDC Admin office
Rajajinagar, Bengaluru
Karnataka 560044

Ph: +91 80 4040 0200
Fax: +91 80 4040 0300
Website: www.khpt.org
Email: khptblr@khpt.org



All photographs used in the report have been taken with the consent of the person(s) featured/the community

# ಆರೋಗ್ಯ ಸಂಗಮ

## ಅನುಷ್ಠಾನದ ರೂಪುರೇಷೆ

ಆರೋಗ್ಯ ಮತ್ತು ಆರೋಗ್ಯದ ಸಾಮಾಜಿಕ ನಿರ್ಧಾರಕ ಅಂಶಗಳಿಗಾಗಿ ಸಮುದಾಯ, ಗ್ರಾಮ ಪಂಚಾಯಿತಿಗಳು ಮತ್ತು ಸೇವಾ ಪೂರೈಕೆದಾರರ ನಡುವೆ ಪಾಲುದಾರಿಕೆಯನ್ನು ನಿರ್ಮಿಸುವಲ್ಲಿ ಕರ್ನಾಟಕ ಸರ್ಕಾರದ ಉಪಕ್ರಮ



ತಾಂತ್ರಿಕ ಬೆಂಬಲ: KHPT engage, innovate, empower  JOHNS HOPKINS BLOOMBERG SCHOOL of PUBLIC HEALTH


ಕರ್ನಾಟಕ ಸರ್ಕಾರ
ಪ್ರಾಥಮಿಕ ಆರೋಗ್ಯ ಕೇಂದ್ರ
ಮಧುವನಹಳ್ಳಿ
ಕೊಳ್ಳೇಗಾಲ ತಾ॥, ಚಾಮರಾಜನಗರ ಜಿಲ್ಲೆ

# ವಿಷಯಸೂಚಿ


## ಭಾಗ 1 | ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಮತ್ತು ಆರೋಗ್ಯ ಸಂಗಮ ಯೋಜನೆ ಆರಂಭ — 7/12

1.1 ಆರೋಗ್ಯ ಮತ್ತು ಆರೋಗ್ಯದ ಸಾಮಾಜಿಕ ನಿರ್ಧಾರಕ ಅಂಶಗಳನ್ನು ಪರಿಹರಿಸುವಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರ
1.2 ಗ್ರಾಮ ಪಂಚಾಯಿತಿ ಕಾರ್ಯಪಡೆಗಳು
1.3 ಆರೋಗ್ಯ ಸಂಗಮ ಪ್ರಾಯೋಗಿಕ ಯೋಜನೆ
1.4 ಸಾಂದರ್ಭಿಕ ವಿಶ್ಲೇಷಣೆ ಮತ್ತು ಪರಿಶೋಧನಾತ್ಮಕ ಹಂತದ ಪ್ರಮುಖ ಕಲಿಕಾಂಶಗಳು
1.5 ಆರೋಗ್ಯ ಸಂಗಮ ಅನುಷ್ಠಾನ ರೂಪುರೇಷೆಯ ವಿನ್ಯಾಸದ ಒಳನೋಟಗಳು

## ಭಾಗ 2 | ಆರೋಗ್ಯ ಸಂಗಮ ಯಶಸ್ಸಿಗಾಗಿ ದೂರದೃಷ್ಟಿ, ಗುರಿ ಮತ್ತು ಉದ್ದೇಶಗಳು — 13/15

2.1 ಆರೋಗ್ಯ ಸಂಗಮ ಯಶಸ್ಸಿಗೆ ದೂರದೃಷ್ಟಿ
2.2 ಆರೋಗ್ಯ ಸಂಗಮ ಯೋಜನೆಯ ಗುರಿಗಳು
2.3 ಆರೋಗ್ಯ ಸಂಗಮ ಕಾರ್ಯಕ್ರಮದ ಸಮಗ್ರ ನೋಟ
2.4 ಆರೋಗ್ಯ ಸಂಗಮ ಪ್ರಭಾವದ ಮಾದರಿ

## ಭಾಗ 3 | ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸಂಯೋಜನೆ ಮತ್ತು ಪುನರ್‌ರಚನೆಯ ಪ್ರಕ್ರಿಯೆಗಳು — 16/21

3.1 ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಪುನರ್‌ರಚನೆಯ ಅಗತ್ಯತೆ
3.2 ಆರೋಗ್ಯ ಸಂಗಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸಂಯೋಜನೆ
3.3 ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರ ಆಯ್ಕೆಯ ಮಾನದಂಡಗಳು
3.4 ಪುನರ್‌ರಚನೆಯ ಪ್ರಕ್ರಿಯೆಗಳು

## ಭಾಗ 4 | ಗ್ರಾಮ ಪಂಚಾಯಿತಿ ಕಾರ್ಯಪಡೆ ಪಾತ್ರ ಮತ್ತು ಜವಾಬ್ದಾರಿಗಳು — 22/23

4.1 ಪಾತ್ರ ಮತ್ತು ಜವಾಬ್ದಾರಿಗಳು

## ಭಾಗ 5 | ಆರೋಗ್ಯ ಸಂಗಮ ದೃಷ್ಟಿಕೋನ ರಚನಾ ಕಾರ್ಯಾಗಾರ ಮತ್ತು ತರಬೇತಿ — 24/27

5.1 ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಕಾರ್ಯನಿರ್ವಹಣೆಯಲ್ಲಿ ಅಗತ್ಯವಿರುವ ಬದಲಾವಣೆಗಳು
5.2 ಕಾರ್ಯಕ್ರಮದ ರೂಪುರೇಷೆ ರಚನೆಯ ಕಾರ್ಯಾಗಾರಗಳು
5.3 ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಕಾರ್ಯನಿರ್ವಹಣಾ ಅವಧಿಯ ತರಬೇತಿ ಮತ್ತು ಕಲಿಕಾ ಕ್ರಿಯೆಗಳು

ಭಾಗ 6 ಆರೋಗ್ಯ ಸಂಗಮ ಕಾರ್ಯಕ್ರಮದ ಸಭೆಗಳು 28/32

6.1 ಸಭೆಯ ವಿವರಗಳು
6.2 ಗ್ರಾಮ ಪಂಚಾಯಿತಿ ಕಾರ್ಯಪಡೆ ಸಭೆಗಳಲ್ಲಿ ಕೈಗೊಳ್ಳಬಹುದಾದ ಪ್ರಮುಖ ಚಟುವಟಿಕೆಗಳು
6.3 ಹಿಂದಿನ ಸಭೆಯ ಅನುಸರಣಾ ಕ್ರಮ
6.4 ಮುಂದಿನ ಹೆಜ್ಜೆಗಳು
6.5 ದಾಖಲಾತಿ ಕುರಿತು ಚರ್ಚೆ
6.6 ಸಭೆಯ ಸಮಾಪ್ತಿ

ಭಾಗ 7 ಆರೋಗ್ಯ ಸಂಗಮ ಕಾರ್ಯಕ್ರಮದ ನಿರ್ವಹಣೆ 33/37

7.1 ಆರೋಗ್ಯ ಸಂಗಮ ರಾಜ್ಯ ಮಟ್ಟದ ಸಂಚಾಲನಾ ಸಮಿತಿ
7.2 ಆರೋಗ್ಯ ಸಂಗಮ ಜಿಲ್ಲಾ ಮಟ್ಟದ ಸಂಚಾಲನಾ ಸಮಿತಿ
7.3 ಕಾರ್ಯಕ್ರಮ ನಿರ್ವಹಣೆಯ ನೋಡಲ್ ಅಧಿಕಾರಿಗಳು
7.4 ಆರೋಗ್ಯ ಸಂಗಮದ ರಾಜ್ಯ ಮಟ್ಟದ ಕಾರ್ಯಕ್ರಮ ನಿರ್ವಹಣೆ
7.5 ಗ್ರಾಮ ಪಂಚಾಯಿತಿ ಕಾರ್ಯಪಡೆಯ ಸಮನ್ವಯಕ್ಕಾಗಿ ಸಂಪರ್ಕಗಳ ವ್ಯವಸ್ಥೆ

ಭಾಗ 8 ಆರೋಗ್ಯ ಸಂಗಮದ ಹಣಕಾಸು ನಿರ್ವಹಣೆ 38

ಭಾಗ 9 ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಅತ್ಯುತ್ತಮ ಕಾರ್ಯನಿರ್ವಹಣೆಗಾಗಿ ಬಹುಮಾನಗಳ 39

ಭಾಗ 10 ತಾಂತ್ರಿಕ ನೆರವು ಮತ್ತು ಪಾಲುದಾರರ ಪಾತ್ರ 40

ಅನುಬಂಧಗಳು 41/54

ಅನುಬಂಧ 1: ಸಕ್ರಿಯ ಪಾಲ್ಗೊಳ್ಳುವಿಕೆ ಕಾರ್ಯಾಗಾರಗಳು ಮತ್ತು ಪರಿಕಲ್ಪನೆ ವಿನ್ಯಾಸ ಚರ್ಚೆಯಲ್ಲಿ ಭಾಗವಹಿಸಿದವರ ವಿವರಗಳು

ಅನುಬಂಧ 2: ಗ್ರಾಮ ಪಂಚಾಯಿತಿಗಳಿಗಾಗಿ ಆರೋಗ್ಯ ಸಂಗಮ ಯೋಜನೆಯ ಕೈಪಿಡಿ (Toolkit)

ಭಾಗ 1 – ಆರೋಗ್ಯ ಸಂಗಮ ಪ್ರಗತಿ ಗುರುತಿಸುವಿಕೆ ಪರಿಕರಗಳು
ಭಾಗ 2 – ಆರೋಗ್ಯ ಸಂಗಮ ಕ್ರಿಯಾಯೋಜನೆ ಪರಿಕರಗಳು
ಭಾಗ 3 – ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಪರಿಶೀಲನೆ ಮತ್ತು ಅಳವಡಿಕೆ

ಅನುಬಂಧ 3: ಆರೋಗ್ಯ ಸಂಗಮ ಕಾರ್ಯಕ್ರಮಕ್ಕಾಗಿ ವಿವರಣಾತ್ಮಕ ಆಯವ್ಯಯ

ಅನುಬಂಧ 4: ಆರೋಗ್ಯ ಸಂಗಮ ಕಾರ್ಯಕ್ರಮದ ವಿವಿಧ ಹಂತಗಳ ತರಬೇತಿ

# ಅಧ್ಯಾಯ 1 | ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಮತ್ತು ಆರೋಗ್ಯ ಸಂಗಮ ಯೋಜನೆ ಆರಂಭ

## 1.1 ಆರೋಗ್ಯ ಮತ್ತು ಆರೋಗ್ಯದ ಸಾಮಾಜಿಕ ನಿರ್ಧಾರಕ ಅಂಶಗಳನ್ನು ಪರಿಹರಿಸುವಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರ

ಸಮುದಾಯಗಳ ಸಬಲೀಕರಣವು ಪ್ರಾಥಮಿಕ ಆರೋಗ್ಯ ಆರೈಕೆಯ ಮೂಲಭೂತ ಕಾರ್ಯವಾಗಿದೆ. ಭಾರತದಲ್ಲಿ ಪ್ರಾಥಮಿಕ ಆರೋಗ್ಯ ಆರೈಕೆಯಲ್ಲಿ ಗ್ರಾಮ ಪಂಚಾಯಿತಿಗಳನ್ನು ಸೇರಿಸಿಕೊಳ್ಳಲು ಹಲವಾರು ನೀತಿನಿಯಮಗಳನ್ನು ರೂಪಿಸಲಾಗಿದೆ. ಜೊತೆಗೆ ಆರೋಗ್ಯದ ಸಾಮಾಜಿಕ ನಿರ್ಧಾರಕಗಳನ್ನು ನಿಭಾಯಿಸುವ ಮತ್ತು ಸಮುದಾಯವನ್ನು ತೊಡಗಿಸಿಕೊಳ್ಳಲು ಉತ್ತೇಜಿಸುವ ಅಂಶಗಳು ಇದರಲ್ಲಿವೆ.

ಇತ್ತೀಚಿಗೆ ರಾಷ್ಟ್ರವ್ಯಾಪ್ತಿಯಾಗಿ ನಡೆದ ಮೌಲ್ಯಮಾಪನಗಳಿಂದ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳ (HWCs) ಮೂಲಕ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ನೀಡುವಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಇಲ್ಲದಿರುವುದು ಒಂದು ಲೋಪವಾಗಿ ಕಂಡುಬಂದಿದೆ. ಈ ಸಮಸ್ಯೆಯನ್ನು ಪರಿಹರಿಸಲು, ರಾಜ್ಯ ಸರ್ಕಾರದಲ್ಲಿ ನಿರ್ದಿಷ್ಟವಾದ ದೃಢ ಕಾರ್ಯತಂತ್ರಗಳ ಅವಶ್ಯಕತೆ ಇದೆ.

## 1.2 ಗ್ರಾಮ ಪಂಚಾಯಿತಿ ಕಾರ್ಯಪಡೆಗಳು

ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು 2020 ರಲ್ಲಿ, ಕೋವಿಡ್-19 ಸಾಂಕ್ರಾಮಿಕ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಗ್ರಾಮ ಪಂಚಾಯಿತಿ ಕಾರ್ಯಪಡೆಗಳನ್ನು (GPTFs) ರಚಿಸಿತು. ಈ ಸಾಂಕ್ರಾಮಿಕ ರೋಗದ ನಿಯಂತ್ರಣಕ್ಕಾಗಿ ವಿಕೇಂದ್ರಿತ ವಿಧಾನವನ್ನು ಅನುಸರಿಸಿ, ಗ್ರಾಮ ಪಂಚಾಯಿತಿಗಳು, ಆರೋಗ್ಯ ಸೇವಾ ಪೂರೈಕೆದಾರರು ಮತ್ತು ಸಮುದಾಯ ಸದಸ್ಯರ ಸಮನ್ವಯದೊಂದಿಗೆ ಪಾಲುದಾರಿಕೆಯನ್ನು ಬೆಳೆಸಲು ಈ ಕಾರ್ಯಪಡೆಗಳನ್ನು ವಿನ್ಯಾಸಗೊಳಿಸಲಾಗಿತ್ತು.

ಈ ಕಾರ್ಯಪಡೆಯಲ್ಲಿ ಗ್ರಾಮ ಪಂಚಾಯಿತಿ ಪ್ರತಿನಿಧಿಗಳು, ಸಮುದಾಯ ಸದಸ್ಯರು (ವಿಶೇಷವಾಗಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಮಹಿಳೆಯರನ್ನು ಒಳಗೊಂಡಂತೆ), ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರ (HWCs)/ಆಯುಷ್ಮಾನ್ ಆರೋಗ್ಯ ಮಂದಿರದ ಪ್ರಾಥಮಿಕ ಆರೋಗ್ಯ ಆರೈಕೆ ಸೇವಾ ಪೂರೈಕೆದಾರರು, ಆಶಾ ಕಾರ್ಯಕರ್ತೆಯರು, ಸರ್ಕಾರೇತರ ಸಂಘ ಸಂಸ್ಥೆಗಳ (NGO) ಪ್ರತಿನಿಧಿಗಳು, ಶಾಲಾ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು, ಸ್ವ-ಸಹಾಯ ಸಂಘಗಳ ಸದಸ್ಯರು, ಹಾಗೂ ಸಮಾಜಕಲ್ಯಾಣ ಇಲಾಖೆ ಪ್ರತಿನಿಧಿಗಳು ಸದಸ್ಯರಾಗಿದ್ದರು.


ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಕೋವಿಡ್-19 ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ತಳಹಂತದಲ್ಲಿ ಸಾರ್ವಜನಿಕ ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಮಾನವೀಯ ಬೆಂಬಲವನ್ನು ನೀಡಿದವು. ಸಾಮಾಜಿಕ ಅಂತರವನ್ನು ಖಚಿತಪಡಿಸಿಕೊಳ್ಳುವುದು, ಕೋವಿಡ್-19 ಜಾಗೃತಿ ಆಂದೋಲನಗಳನ್ನು ನಡೆಸುವುದು, ನಿರ್ದಿಷ್ಟ ಆರೋಗ್ಯ ತಪಾಸಣೆ ನಡೆಸುವುದು, ಕ್ವಾರಂಟೈನ್ (quarantine) ಸೌಲಭ್ಯಗಳನ್ನು ಒದಗಿಸುವುದು, ಮನೆಗೆ ಪಡಿತರ ವಿತರಿಸುವುದು, ಬಿಸಿ ಊಟ ಒದಗಿಸುವುದು ಹಾಗೂ ವಲಸೆ ಬಂದವರಿಗೆ ಬೆಂಬಲ ನೀಡುವುದು ಇತ್ಯಾದಿ ಮಹತ್ವದ ಕಾರ್ಯಗಳನ್ನು ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಮಾಡಿದವು. ತದನಂತರ ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಪ್ರಾಥಮಿಕ ಆರೋಗ್ಯ ಸೇವೆಗಾಗಿ ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನ (GPAAA) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದವು. ಇದನ್ನು ಗ್ರಾಮ ಆರೋಗ್ಯ (GA) ಎಂದೂ ಸಹ ಕರೆಯುತ್ತಾರೆ. ಈ ಕಾರ್ಯಕ್ರಮದ ಅಡಿಯಲ್ಲಿ ಪರಿಣಾಮಕಾರಿ ಕಾರ್ಯವಿಧಾನವನ್ನು ಅನುಸರಿಸಲಾಯಿತು. ಕರ್ನಾಟಕ ರಾಜ್ಯದ **31** ಜಿಲ್ಲೆಗಳಲ್ಲಿ ಈ ಗ್ರಾಮ ಆರೋಗ್ಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ಜಾರಿಗೆ ತರಲಾಗಿದೆ. ಈ ಯೋಜನೆಯಲ್ಲಿ ಅಸಾಂಕ್ರಾಮಿಕ ರೋಗಗಳ (NCDs) ತಪಾಸಣೆ ಮತ್ತು ಅನಿಮಿಯಾ (ರಕ್ತಹೀನತೆ) ಮುಕ್ತ ಪೌಷ್ಟಿಕ ಕರ್ನಾಟಕ (AMPK) ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಯಿತು. ಪ್ರಸ್ತುತ ಕೆಲವು ಗ್ರಾಮ ಪಂಚಾಯಿತಿ ಕಾರ್ಯಪಡೆಗಳಿಗೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (NRLM) ಕೌಶಲ್ಯಾಭಿವೃದ್ಧಿ ಚಟುವಟಿಕೆಗಳ ಭಾಗವಾಗಿ ಉಪಶಮನಕಾರಿ ಆರೈಕೆ ಮತ್ತು ಆರೋಗ್ಯ ಕಾಳಜಿಯನ್ನು (Palliative Care) ಒದಗಿಸಲು ತರಬೇತಿ ನೀಡಲಾಗುತ್ತಿದೆ.

## 1.3 ಆರೋಗ್ಯ ಸಂಗಮ ಪ್ರಾಯೋಗಿಕ ಯೋಜನೆ

ಕೆಲವು ಜಿಲ್ಲೆಗಳಲ್ಲಿ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಮೂಲಕ ಆರೋಗ್ಯ ಉಪಕ್ರಮಗಳನ್ನು ವ್ಯವಸ್ಥಿತವಾಗಿ ಮತ್ತು ಪುರಾವೆ–ಸಾಕ್ಷ್ಯಾಧಾರಿತ ವಿಧಾನಗಳನ್ನು ಅಳವಡಿಸಿಕೊಂಡು ಸಮರ್ಥವಾಗಿ ಅನುಷ್ಠಾನಗೊಳಿಸಿರುವುದನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಗುರುತಿಸಿದೆ. ಈ ನಿಟ್ಟಿನಲ್ಲಿ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳನ್ನು ಬಲಪಡಿಸುವುದು, ಒಗ್ಗೂಡಿಸುವುದು, ಸಮುದಾಯದವನ್ನು ತೊಡಗಿಸಿಕೊಳ್ಳುವುದರ ಮೂಲಕ ಪ್ರಾಥಮಿಕ ಆರೋಗ್ಯ ಆರೈಕೆ ಬಗ್ಗೆ ಮುನ್ನೆಚ್ಚರಿಕೆ ವಹಿಸಿ, ವಿಶೇಷವಾಗಿ ಇದುವರೆಗೆ ತಲುಪದ ತಳಮಟ್ಟದ ಸಮುದಾಯಗಳಿಗೆ ಪರಿಣಾಮಕಾರಿಯಾಗಿ ಉತ್ತೇಜಕ ಆರೋಗ್ಯ ಸೇವೆಗಳನ್ನು ನೀಡುವಂತೆ ಗ್ರಾಮ ಪಂಚಾಯಿತಿ ಕಾರ್ಯಪಡೆಗಳನ್ನು ಪರಿವರ್ತಿಸಲು ಅಗತ್ಯವಾದ ಕೌಶಲ್ಯ ಮತ್ತು ಸಾಧನಗಳೊಂದಿಗೆ ಸಜ್ಜುಗೊಳಿಸುವ ಅವಶ್ಯಕತೆ ಇದೆ.

ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಇಲ್ಲಿಯವರೆಗಿನ ಕಾರ್ಯನಿರ್ವಹಣೆ ವೈಖರಿಯನ್ನು ಆಧರಿಸಿ, "ಆರೋಗ್ಯ ಸಂಗಮ" ಎಂಬ ಪ್ರಾಯೋಗಿಕ ಯೋಜನೆಯನ್ನು 2023ರಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (RDPR), ಜಾನ್ಸ್ ಹಾಪ್ಕಿನ್ಸ್ ಬ್ಲೂಮ್‌ಬರ್ಗ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್ (JHU) ಮತ್ತು ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ (ಕೆಹೆಚ್‌ಪಿಟಿ) ಅವರ ಸಹಯೋಗದಲ್ಲಿ ಆರಂಭಿಸಲಾಗಿದೆ. ಈ ಯೋಜನೆ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸಾಮರ್ಥ್ಯವನ್ನು ವೃದ್ಧಿಸಿ "ತ್ರಿಮುಖ ಪಾಲುದಾರಿಕೆಯ ವೇದಿಕೆ" (3-way partnership platform) ಯಾಗಿ, ಅಂದರೆ ಸಮುದಾಯ, ಪಂಚಾಯಿತಿಗಳು ಮತ್ತು ಆರೋಗ್ಯ ಸೇವಾ ಪೂರೈಕೆದಾರರನ್ನು ಒಳಗೊಂಡಂತೆ ಕಾರ್ಯನಿರ್ವಹಿಸಲು ಸಹಾಯ ಮಾಡಲಿದೆ. ಈ ಯೋಜನೆ ವಿಶೇಷವಾಗಿ ಕರ್ನಾಟಕದ ರಾಯಚೂರು ಜಿಲ್ಲೆಯ ದೇವದುರ್ಗ ಮತ್ತು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ/ಹನೂರು ತಾಲ್ಲೂಕುಗಳಲ್ಲಿ ಕಾರ್ಯಾಚರಿಸುತ್ತಿದ್ದು, ಪ್ರಾಥಮಿಕ ಆರೋಗ್ಯ ಸೇವಾ ಪೂರೈಕೆದಾರರನ್ನು ಒಳಗೊಂಡು, ಸಮುದಾಯದ ಮಾಲೀಕತ್ವವನ್ನು ಹೆಚ್ಚಿಸುವುದು ಮತ್ತು ತಳಮಟ್ಟದಲ್ಲಿ ಒಗ್ಗೂಡಿಸುವಿಕೆಯ ಪ್ರಮಾಣವನ್ನು ವೃದ್ಧಿಸುವ ಮೂಲಕ ಸಾಮರ್ಥ್ಯ ನಿರ್ಮಾಣ ಮಾಡುವುದು ಇದರ ಉದ್ದೇಶವಾಗಿದೆ.

### ಭೌಗೋಳಿಕ ವಿಸ್ತೀರ್ಣ




ಚಾಮರಾಜನಗರ ಮತ್ತು ರಾಯಚೂರು ಜಿಲ್ಲೆಗಳಲ್ಲಿ, ಈ ಯೋಜನೆಗಾಗಿ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರ–ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರ (PHC-HWC) ಗಳನ್ನು ಗುರುತಿಸಲಾಗಿದೆ. ಇದರಲ್ಲಿ ಎರಡು ನಿಗದಿತ (Controls) ಹಾಗೂ ಎರಡು ಅಂಗೀಕೃತ (interventional) ಸೇರಿವೆ.

**ಚಾಮರಾಜನಗರ ಜಿಲ್ಲೆಯಲ್ಲಿ:**

- **ಮಧುವನಹಳ್ಳಿ ಪಿ.ಎಚ್.ಸಿ. ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯಿತಿಗಳು:** ಕುಣಗಳ್ಳಿ, ಸಿದ್ದಯ್ಯನಪುರ ಮತ್ತು ಮಧುವನಹಳ್ಳಿ.
- **ರಾಮಾಪುರ ಪಿ.ಎಚ್.ಸಿ. ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯಿತಿಗಳು:** ಅಜ್ಜಿಪುರ, ದೊಡ್ಡಾಲತ್ತೂರು, ದಿನ್ನಳ್ಳಿ, ಸೂಳೇರಿ ಪಾಳ್ಯ ಮತ್ತು ರಾಮಾಪುರ.

**ರಾಯಚೂರು ಜಿಲ್ಲೆಯಲ್ಲಿ:**

- **ಚಿಂಚೋಡಿ ಪಿ.ಎಚ್.ಸಿ. ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯಿತಿಗಳು:** ಅಮರಾಪುರ, ಜಾಲಹಳ್ಳಿ, ಕರಡಿಗುಡ್ಡ ಮತ್ತು ಚಿಂಚೋಡಿ.
- **ಕೊಪ್ಪರ ಪಿ.ಎಚ್.ಸಿ. ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯಿತಿಗಳು:** ದೊಡ್ಡಂಬಳ್ಳಿ, ಕರಿಗುಡ್ಡ ಮತ್ತು ಕೊಪ್ಪರ.

## 1.4 ಸಾಂದರ್ಭಿಕ ವಿಶ್ಲೇಷಣೆ ಮತ್ತು ಪರಿಶೋಧನಾತ್ಮಕ ಹಂತದ ಪ್ರಮುಖ ಕಲಿಕಾಂಶಗಳು

ಈ ಯೋಜನೆಯ ಮೊದಲ ಹಂತದಲ್ಲಿ (ಜೂನ್ 2023 ರಿಂದ ಸೆಪ್ಟೆಂಬರ್ 2024 ರವರೆಗೆ) ನಡೆದ ಪರಿಶೋಧನಾತ್ಮಕ ಸಂಶೋಧನೆ ಮತ್ತು ಮೂಲ ಮೌಲ್ಯಮಾಪನವು ಆರೋಗ್ಯ ಸಂಗಮ ಪ್ರಾಯೋಗಿಕ ಯೋಜನೆಯ ಬಲಿಷ್ಠ ಅಡಿಪಾಯವಾಗಿ ಕಾರ್ಯನಿರ್ವಹಿಸಿತು. ಪರಿಶೋಧನಾತ್ಮಕ ಶೋಧನೆಯ ಹಂತದಲ್ಲಿ ಸನ್ನಿವೇಶ ವಿಶ್ಲೇಷಣೆಯಿಂದ ಕಲಿತ ಪ್ರಮುಖ ಅಂಶಗಳನ್ನು ಈ ಕೆಳಗೆ ವಿವರವಾಗಿ ನೀಡಲಾಗಿದೆ.

### ಎ) ಸಾಮಾಜಿಕ–ರಾಜಕೀಯ ಸಂದರ್ಭ, ಪಾಲುದಾರರ ನಡುವಿನ ಸಂಬಂಧಗಳು, ಆರೋಗ್ಯ ಸಂಬಂಧಿತ ಆದ್ಯತೆಗಳು ಮತ್ತು ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ನಿರೀಕ್ಷೆಗಳು

'ಆರೋಗ್ಯ ಸಂಗಮ' ಯೋಜನೆ ಸ್ಥಳೀಯ ವಾಸ್ತವಗಳಿಗೆ ಸ್ಪಂದಿಸುವ ಮತ್ತು ತ್ರಿಮುಖ ಪಾಲುದಾರಿಕೆಯ ವೇದಿಕೆಯಾಗಿ ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳಲು, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಮತ್ತು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕುಗಳಲ್ಲಿ ಪ್ರಾದೇಶಿಕ ಸ್ಥಳೀಯ ಪರಿಸ್ಥಿತಿಗಳ ಬಗ್ಗೆ ಸಂಪೂರ್ಣ ತಿಳುವಳಿಕೆಯನ್ನು ಪಡೆಯುವುದು ಅತ್ಯಗತ್ಯವಾಯಿತು. ಇದರ ಅಂಗವಾಗಿ ಪ್ರಸ್ತುತ ಅಸ್ತಿತ್ವದಲ್ಲಿರುವ ಸಮುದಾಯ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಆರೋಗ್ಯ ಸೇವಾ ಪೂರೈಕೆದಾರರ ನಡುವಿನ ಸಂಬಂಧಗಳನ್ನು ವಿಶ್ಲೇಷಿಸಲಾಯಿತು. ಪಾಲುದಾರರು ಮಹತ್ವದ್ದು ಎಂದು ಪರಿಗಣಿಸಿರುವ ಆರೋಗ್ಯ ಅಥವಾ ಆರೋಗ್ಯ ಸಂಬಂಧಿತ ಆದ್ಯತೆಗಳನ್ನು ಗುರುತಿಸಲಾಯಿತು. ಅಲ್ಲದೇ ಸಮುದಾಯ ಮತ್ತು ಪಾಲುದಾರರ ಪರಸ್ಪರ ನಿರೀಕ್ಷೆಗಳನ್ನು ಈಡೇರಿಸಲು ಹಾಗೂ ಅವುಗಳನ್ನು ಪರಿಹರಿಸಲು ಸೂಕ್ಷ್ಮವಾಗಿ ಪ್ರತಿಕ್ರಿಯಿಸಲಾಯಿತು.

ಈ ಪ್ರಕ್ರಿಯೆಯು ಸ್ಥಳೀಯ ಪಾಲುದಾರರೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸಲು ಪ್ರೇರೇಪಿಸಿತು ಮತ್ತು ಯೋಜನೆ ಅನುಷ್ಠಾನದ ಕಾರ್ಯಪದ್ಧತಿಗಳನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವಹಿಸಿತು. **ಚಿತ್ರ 1** ರಲ್ಲಿ ಈ ಸಂಶೋಧನೆಯ ಪ್ರಮುಖ ಫಲಿತಾಂಶಗಳನ್ನು ವಿವರಿಸಲಾಗಿದೆ.

**ಸಂದರ್ಭ**

- ಚಾಮರಾಜನಗರ ಮತ್ತು ರಾಯಚೂರು ಜಿಲ್ಲೆಗಳಲ್ಲಿ ವಿಭಿನ್ನ ಸನ್ನಿವೇಶಗಳು, ಆದರೆ ಒಂದೇ ರೀತಿಯ ಸವಾಲುಗಳು.
- ಸಾಮಾಜಿಕ–ಆರ್ಥಿಕ ಸಮಸ್ಯೆಗಳು: ಬಡತನ, ವಲಸೆ, ಅಭಿವೃದ್ಧಿಯಾಗದ ಮೂಲಸೌಕರ್ಯ, ಸಂಪನ್ಮೂಲವಿಲ್ಲದ ಪ್ರಾಥಮಿಕ ಆರೈಕೆ ಸೌಲಭ್ಯಗಳು ಮತ್ತು ಶಾಲೆಗಳ ಅವ್ಯವಸ್ಥಿತ ಸ್ಥಿತಿ.
- ಸ್ಥಳೀಯ ಆಡಳಿತದಲ್ಲಿ ಮಹಿಳೆಯರ ಭಾಗವಹಿಸುವಿಕೆ ಸೀಮಿತ, ಪ್ರೌಢಶಾಲಾ ಹೆಣ್ಣುಮಕ್ಕಳ ಶಾಲಾ ಬಿಡುವ ಪ್ರಮಾಣ ಹೆಚ್ಚಾಗಿದೆ.
- ಸಮುದಾಯವು ಆರೋಗ್ಯವನ್ನು ಕ್ರಿಯಾತ್ಮಕ ಯೋಗಕ್ಷೇಮವೆಂದು ಪರಿಗಣಿಸುತ್ತದೆ.
- ಸಾಂಪ್ರದಾಯಿಕ ನಂಬಿಕೆಗಳು ಮತ್ತು ಸಾಂಸ್ಕೃತಿಕ ಅಡೆತಡೆಗಳು ಆರೋಗ್ಯಕ್ಕೆ ಸಂಬಂಧಿಸಿದ ನಡವಳಿಕೆಯನ್ನು ಪ್ರಭಾವಿತಗೊಳಿಸುತ್ತವೆ.
- ಸಂಪನ್ಮೂಲದ ಮಿತಿಗಳು ಮತ್ತು ಕಡಿಮೆ ತೆರಿಗೆಯ ಆದಾಯ ಮಿತಿಯಾಗಿರುವುದರಿಂದ ಪ್ರಾಥಮಿಕ ಆರೋಗ್ಯ ಸೇವೆಗಳಿಗೆ ಗ್ರಾಮ ಪಂಚಾಯಿತಿ ನೆರವನ್ನು ನಿರ್ಬಂಧಿಸುತ್ತದೆ.

**ಸಂಬಂಧಗಳು**

- ಸಮುದಾಯ, ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಆರೋಗ್ಯ ಸೇವಾ ಪೂರೈಕೆದಾರರ ನಡುವೆ ಪರಸ್ಪರ ವಿಶ್ವಾಸದ/ನಂಬಿಕೆಯ ಕೊರತೆ.
- ಭಾಗೀದಾರರ ನಡುವೆ ಲಿಂಗ, ಜಾತಿ ಮತ್ತು ಶಿಕ್ಷಣದ ಅಸಮಾನತೆಗಳಿಂದಾಗಿ ಶಕ್ತಿ ಸಮೀಕ್ಷೆಯಲ್ಲಿ ಅಸ್ಥಿರತೆ ಉಂಟಾಗಿದೆ.
- ಸಮುದಾಯದ ಬದಲಾವಣೆಯತ್ತ ಹಿಂಜರಿಕೆ: ಗ್ರಾಮ ಪಂಚಾಯಿತಿ ಮತ್ತು ಆರೋಗ್ಯ ಸೇವಾ ಪೂರೈಕೆದಾರರು, ಸಮುದಾಯವು ಬದಲಾವಣೆಗೆ ಹಿಂಜರಿಯುತ್ತಿದ್ದು, ಆರೋಗ್ಯಕ್ಕಿಂತ ವೈಯಕ್ತಿಕ ಪ್ರಯೋಜನಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಿದೆ ಎಂದು ಭಾವಿಸುತ್ತಾರೆ.
- ಎನ್‌ಟೈಟಲ್‌ಮೆಂಟ್ ಸಿಂಡ್ರೋಮ್‌ನ ಪರಿಣಾಮ: ಸಮುದಾಯವು ತಮ್ಮ ಭಾವನಾತ್ಮಕ ಕ್ಷೇಮಾಭಿವೃದ್ಧಿಗೆ ಇತರರ ಮೇಲೆ ಅತಿಯಾಗಿ ಅವಲಂಬಿತರಾಗಿರುತ್ತಿದ್ದು, ಸರ್ಕಾರಿ ಸೇವೆಗಳನ್ನು ಸುಧಾರಿಸುವಲ್ಲಿ ತಮ್ಮ ಪಾತ್ರವನ್ನು ಗಮನಿಸುವುದಿಲ್ಲ ಅಥವಾ ಗೌರವಿಸುವುದಿಲ್ಲ.
- ಆರೋಗ್ಯ ಸೇವಾ ಪೂರೈಕೆದಾರರು ಮತ್ತು ಪಂಚಾಯಿತಿ ಸದಸ್ಯರು ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಸಮುದಾಯದ ಜವಾಬ್ದಾರಿಯನ್ನು ಅತಿಯಾಗಿ ಒತ್ತಿ ಹೇಳುವ ಪ್ರವೃತ್ತಿ ಹೊಂದಿದ್ದಾರೆ.
- ಅಧಿಕಾರಿಗಳು ಮತ್ತು ಚುನಾಯಿತ ಗ್ರಾಮ ಪಂಚಾಯತಿ ಸದಸ್ಯರ ನಡುವಿನ ಅಧಿಕಾರದ ಒತ್ತಡ ನಿರ್ಧಾರ ತೆಗೆದುಕೊಳ್ಳುವಲ್ಲಿ ವಿಳಂಬಕ್ಕೆ ಕಾರಣವಾಗುತ್ತದೆ ಮತ್ತು ಗ್ರಾಮ ಪಂಚಾಯಿತಿಗಳ ಒಳಗಿನ ತಂಡಗಳಲ್ಲಿ ಸಂಘರ್ಷಗಳಿಗೆ ಕಾರಣವಾಗುತ್ತದೆ.

### ಆರೋಗ್ಯ ಸಂಬಂಧಿತ ಆದ್ಯತೆಗಳು

- ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH) ಕೊರತೆ
- ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳು (HWC) ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ; ಸೇವೆಗಳ ಸೀಮಿತ ಲಭ್ಯತೆ
- ಗರ್ಭಿಣಿ ತಾಯಂದಿರು ಮತ್ತು ಮಕ್ಕಳನ್ನು ಮೀರಿದ ಜನರ ಗುಂಪುಗಳ ಮೇಲೆ ಕೇಂದ್ರೀಕರಿಸುವುದು ಅಗತ್ಯ
- ಬಾಲ್ಯ ವಿವಾಹ
- ಅಪೌಷ್ಟಿಕತೆ
- ಹಾನಿಕಾರಕವಾಗಿ ಮದ್ಯದ ಬಳಕೆ
- ಶಾಲಾ ಮಕ್ಕಳು ಮತ್ತು ಯುವಜನರಲ್ಲಿ ಧೂಮಪಾನ
- ಅಸಾಂಕ್ರಾಮಿಕ ರೋಗಗಳು – ಮಧುಮೇಹ/ಅಧಿಕ ರಕ್ತದೊತ್ತಡ
- ಅಸಾಂಕ್ರಾಮಿಕ ರೋಗಗಳಿಗೆ ಔಷಧಿಗಳ ಸೀಮಿತ ಪೂರೈಕೆ
- ಹಿರಿಯರ ಆರೈಕೆ
- ವಲಸೆಯು ಹಿರಿಯರ ಆರೈಕೆಯ ಮೇಲೆ ಪರಿಣಾಮ ಬೀರುತ್ತದೆ

### ನಿರೀಕ್ಷೆಗಳು

- ಸಮುದಾಯ ಮತ್ತು ಆರೋಗ್ಯ ಸೇವೆ ಒದಗಿಸುವವರು ಗ್ರಾಮ ಪಂಚಾಯಿತಿಯಿಂದ ತ್ವರಿತ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತಾರೆ.
- ಆರೋಗ್ಯ ಸೇವೆ ಒದಗಿಸುವವರು ಗ್ರಾಮ ಪಂಚಾಯಿತಿ ಆರೋಗ್ಯ ಮೂಲಸೌಕರ್ಯದಲ್ಲಿನ ಅಂತರವನ್ನು ಸರಿಪಡಿಸಿ ಜಾಗೃತಿ ಮೂಡಿಸಲು ಬೆಂಬಲ ನೀಡಬೇಕೆಂದು ಬಯಸುತ್ತಾರೆ. ಆದರೆ ಗ್ರಾಮ ಪಂಚಾಯಿತಿ ಅವರನ್ನು ಮೇಲ್ವಿಚಾರಣೆ ಮಾಡುವುದು ಬೇಡವೆಂದು ಅಭಿಪ್ರಾಯಪಡುತ್ತಾರೆ.
- ಗ್ರಾಮ ಪಂಚಾಯಿತಿ ಆರೋಗ್ಯ ಕ್ಷೇತ್ರದಲ್ಲಿ ತನ್ನ ಪಾತ್ರವನ್ನು ಮೂಲಸೌಕರ್ಯದ ನೆರವು, ತ್ವರಿತ ನಿರ್ವಹಣೆಗೆ ಸೀಮಿತವೆಂದು ಪರಿಗಣಿಸುತ್ತದೆ. ಆದರೆ ಅಗತ್ಯವಿದ್ದಾಗ ಆರೋಗ್ಯ ಸೇವಾ ಪೂರೈಕೆದಾರರು ತಮ್ಮನ್ನು ಅಗತ್ಯವಿದ್ದಾಗ ಮಾತ್ರ ಸಂಪರ್ಕಿಸಲು ಬಯಸುತ್ತಾರೆ.

### ಬಿ) ಇತರೆ ಅವಲೋಕನ ಅಂಶಗಳು ಮತ್ತು ಗ್ರಾಮ ಪಂಚಾಯಿತಿ ಕಾರ್ಯಪಡೆಗಳಿಗೆ ಸಂಬಂಧಿಸಿದ ದೃಷ್ಟಿಕೋನಗಳು

- ಎಲ್ಲಾ ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಪ್ರಾಥಮಿಕ ಆರೋಗ್ಯ ಆರೈಕೆಗೆ ಸಕ್ರಿಯವಾಗಿ ಬೆಂಬಲಿಸುವುದಿಲ್ಲ.
- **ಪಾತ್ರ ಸ್ಪಷ್ಟತೆ ಕೊರತೆ:** ಅನೇಕ ಸದಸ್ಯರು ತಮ್ಮ ಪಾತ್ರವನ್ನು ತುರ್ತು ಆರೋಗ್ಯ ಪರಿಸ್ಥಿತಿಗಳು ಅಥವಾ ತಕ್ಷಣದ ನಿರ್ವಹಣೆಗೆ ಸೀಮಿತವೆಂದು ಗ್ರಹಿಸುತ್ತಿದ್ದಾರೆ.
- **ಸಮುದಾಯ ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಕನಿಷ್ಠ ಭಾಗವಹಿಸುವಿಕೆ:** ಸಡಿಲಗತಿಯ ಸಂಯೋಜಿತ ಗುಂಪಾಗಿ ಕಾರ್ಯನಿರ್ವಹಿಸುವುದು, ಹೆಚ್ಚಿನ ಮಟ್ಟದಲ್ಲಿ ಉನ್ನತ ನಿರ್ದೇಶನಗಳಿಗೆ ಮಾತ್ರ ಪ್ರತಿಕ್ರಿಯೆ ತೋರಿಸುವುದು, ಸಮುದಾಯದ ಆರೋಗ್ಯವನ್ನು ಹೆಚ್ಚಿಸಲು ತಂಡದಲ್ಲಿ ಒಗ್ಗಟ್ಟು ಮತ್ತು ಪ್ರೇರಣೆ ಸೀಮಿತವಾಗಿದೆ.
- ಆರೋಗ್ಯ ಸಮಿತಿಗಳಾದ 'ಗ್ರಾಮ ಆರೋಗ್ಯ ನೈರ್ಮಲ್ಯ ಮತ್ತು ಪೋಷಣಾ ಸಮಿತಿಗಳು' (VHSNCs) ಮತ್ತು 'ಆಸ್ಪತ್ರೆ ನಿರ್ವಹಣಾ ಸಮಿತಿಗಳ' (HMCs) ಪರಿಣಾಮಕಾರಿಯಲ್ಲದ ಮತ್ತು ನಿಷ್ಕ್ರಿಯ ಕಾರ್ಯಗಳಿಂದ ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಸುಸ್ಥಿರತೆಯ ಬಗ್ಗೆ ಸಂದೇಹ ಉಂಟುಮಾಡಿದೆ.
- ಸುಸ್ಥಿರ ಕೆಲಸವನ್ನು ಖಚಿತಪಡಿಸಿಕೊಳ್ಳಲು ಸ್ಪಷ್ಟ ಮಾರ್ಗದರ್ಶನ, ಪಾತ್ರ ಸ್ಪಷ್ಟತೆ ಮತ್ತು ಸಾಂಸ್ಥಿಕ ಬೆಂಬಲವನ್ನು ಸದಸ್ಯರು ಬಯಸುತ್ತಾರೆ.

### ಸಿ) ಆರೋಗ್ಯ ಸಂಗಮ ಯೋಜನೆಯ ಗ್ರಾಮಗಳು/ಗ್ರಾಮ ಪಂಚಾಯಿತಿಗಳ ಸಮುದಾಯದ ಆರೋಗ್ಯ ಸ್ಥಿತಿ

ಆರೋಗ್ಯ ಸಂಗಮ ಯೋಜನೆಯ ಅನುಷ್ಠಾನ ಗ್ರಾಮ ಪಂಚಾಯಿತಿಗಳ ಸಮುದಾಯ ಆರೋಗ್ಯ ಪರಿಸ್ಥಿತಿಯನ್ನು ಅರ್ಥೈಸಲು ಸಂಯೋಜಿತ ಬೇಸ್‌ಲೈನ್ ಮ್ಯಾಪಿಂಗ್ ಆಧಾರದ ಮೇಲೆ ಮಾಡಲಾಗಿದೆ. ಜನವರಿ–ಸೆಪ್ಟೆಂಬರ್ 2024 ಅವಧಿಯಲ್ಲಿ ಕೆಹೆಚ್‌ಪಿಟಿ ತಂಡವು ಚಾಮರಾಜನಗರ (ಕೊಳ್ಳೇಗಾಲ/ಹನೂರು ತಾಲ್ಲೂಕು) ಮತ್ತು ರಾಯಚೂರು (ದೇವದುರ್ಗ ತಾಲ್ಲೂಕು) ತಾಲೂಕುಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಸಮೀಕ್ಷೆ ಕೈಗೊಂಡಿತು.

**ಸಮೀಕ್ಷೆಯ ವ್ಯಾಪ್ತಿಗಳು**

| ಚಾಮರಾಜನಗರ ಜಿಲ್ಲೆ | ರಾಯಚೂರು ಜಿಲ್ಲೆ |
|---|---|
| **451** ಕುಟುಂಬಗಳು | **1162** ಕುಟುಂಬಗಳು |

### ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH)

- ಕುಡಿಯುವ ನೀರಿನ ಸುರಕ್ಷಿತ ಮೂಲ >90 ಕುಟುಂಬಗಳು (ಮನೆಗಳು)
- ಶೌಚಾಲಯಗಳು **70%**

### ಶಿಕ್ಷಣ

- ಶಾಲಾ ಶಿಕ್ಷಣ ಇಲ್ಲದಿರುವುದು **27%**

### ತಾಯಿಯ ಆರೋಗ್ಯ

- ಆರಂಭಿಕ ನೋಂದಣಿ, 4 ಪ್ರಸವಪೂರ್ವ ಆರೈಕೆ (ANC) ಮತ್ತು ಸಾಂಸ್ಥಿಕ ಹೆರಿಗೆ **>90%**
- ಮುಂಚೂಣಿ ಕಾರ್ಯಕರ್ತರಿಂದ (FLW) ಪ್ರಸವಪೂರ್ವ ಆರೈಕೆ **57%**

### ಅಸಾಂಕ್ರಾಮಿಕ ರೋಗಗಳು (NCDs)

- 30 ವರ್ಷಕ್ಕಿಂತ ಮೇಲ್ಪಟ್ಟ ಜನಸಂಖ್ಯೆಯಲ್ಲಿ ಸಾಂಕ್ರಾಮಿಕವಲ್ಲದ ಕಾಯಿಲೆಗಳ ತಪಾಸಣೆ **74%**



### ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕಾಂಶ

- ಒಂದು ವರ್ಷದಲ್ಲಿ ರೋಗನಿರೋಧಕ ಲಸಿಕೆ **85–90%**
- ಎದೆ ಹಾಲುಣಿಸುವಿಕೆ ಮಾತ್ರ **33%**
- ಪೂರಕ ಆಹಾರ **85%**
- ಅಂಗನವಾಡಿ ಕೇಂದ್ರದಿಂದ (AWC) ಪೂರಕ ಪೌಷ್ಟಿಕಾಂಶ **67%**

### ಆರೋಗ್ಯ ಹಕ್ಕುಗಳು ಮತ್ತು ಆರ್ಥಿಕ ಭದ್ರತೆ

- ಜನನಿ ಸುರಕ್ಷಾ ಯೋಜನೆ (JSY) ಬಗ್ಗೆ ಅರಿವು; ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ **<40%**
- ಆಯುಷ್ಮಾನ್ ಭಾರತ್–ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (AB-PMJAY), ಆರೋಗ್ಯ ಕರ್ನಾಟಕ (ABArK) ಬಗ್ಗೆ ಅರಿವು **17%**
- ವೈದ್ಯಕೀಯ ವೆಚ್ಚ ಹೊರತುಪಡಿಸಿ ತನ್ನ ಸ್ವಂತ ವೆಚ್ಚ (Out-of-Pocket Expenditure-OOPE) ಪ್ರತಿ ANC **ರೂ.15000,** ತಪಾಸಣೆಗೆ ಅತ್ಯಧಿಕ **(46.0%),** ನಂತರದ ಔಷಧಗಳು **(32.0%)** ಮತ್ತು ಪ್ರಯಾಣ ವೆಚ್ಚ **(8.5%),** ಆಸ್ಪತ್ರೆ ವೆಚ್ಚ **(13.5%).**

**ಚಿತ್ರ 1 ಸಮೀಕ್ಷೆಯ ಪ್ರಮುಖ ಶೋಧನೆಗಳು/ಅಂಶಗಳು**

**ಸೂಚನೆ:** ಮೇಲಿನ ಮಾಹಿತಿ ಬೇಸ್‌ಲೈನ್ ಕೌಟುಂಬಿಕ ಸಮೀಕ್ಷೆ ಆಧಾರಿತವಾಗಿದೆ. ಸಮೀಕ್ಷೆಯನ್ನು ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ತಾಲ್ಲೂಕಿನ ಮಧುವಿನಹಳ್ಳಿ ಮತ್ತು ರಾಮಪುರ ಗ್ರಾಮ ಪಂಚಾಯಿತಿಗಳು ಹಾಗೂ ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಚಿಂಚೋಡಿ ಮತ್ತು ಕೊಪ್ಪರ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಡಿಯಲ್ಲಿ ಕೈಗೊಳ್ಳಲಾಯಿತು. ಆರೋಗ್ಯ ಸಂಗಮ ಕಾರ್ಯಕ್ರಮಕ್ಕಾಗಿ ಈ ಪ್ರದೇಶಗಳನ್ನು ಆಯ್ಕೆ ಮಾಡುವಾಗ ನಿರ್ದಿಷ್ಟ ಅಂಶಗಳನ್ನು ಪರಿಗಣಿಸಲಾಯಿತು. ಅವುಗಳಲ್ಲಿ ಆರೋಗ್ಯದ ಕಳಪೆ ಸ್ಥಿತಿ, ಸಾಮಾಜಿಕ–ಆರ್ಥಿಕ ಸವಾಲಿನ ಪರಿಸ್ಥಿತಿಗಳು, ಅಭಿವೃದ್ಧಿಯ ಕುಂಠಿತಗತೆ, ಹಾಗೂ ಈ ಪ್ರದೇಶದಲ್ಲಿ ದುರ್ಬಲ ವರ್ಗದ ಜನಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿರುವುದು ಮುಖ್ಯವಾದವುಗಳು. ಈ ಮಾಹಿತಿ ಚಿತ್ರದಲ್ಲಿ ಅಭಿವ್ಯಕ್ತವಾಗಿರುವ ವಿಶಿಷ್ಟ ಗುಣಲಕ್ಷಣಗಳು, ಆಯಾ ತಾಲ್ಲೂಕುಗಳು ಅಥವಾ ಜಿಲ್ಲೆಗಳ ಒಟ್ಟಾರೆ ಸ್ಥಿತಿಯನ್ನು ಪ್ರತಿಬಿಂಬಿಸುವುದಿಲ್ಲ. ಇದು ಆಯ್ದ ಪ್ರದೇಶಗಳಲ್ಲಿ ನಡೆದ ಸಮೀಕ್ಷೆಯ ಆಧಾರದ ಮೇಲೆ ನಿರ್ಧಾರಗಳಿಗೆ ಸಹಾಯಕವಾಗುವ ಮಾಹಿತಿಯಾಗಿದೆ.

## 1.5 ಆರೋಗ್ಯ ಸಂಗಮ ಅನುಷ್ಠಾನ ರೂಪುರೇಷೆಯ ವಿನ್ಯಾಸದ ಒಳನೋಟಗಳು

ಆರೋಗ್ಯ ಸಂಗಮ ಅನುಷ್ಠಾನ ರೂಪುರೇಷೆಯ ವಿನ್ಯಾಸವು ಪರಿಶೋಧನಾತ್ಮಕ ಸಂಶೋಧನೆಯ ಸಂಯೋಜಿತ ಒಳನೋಟಗಳು ಮತ್ತು ಭಾಗೀದಾರರ ವೈವಿಧ್ಯಮಯ ಪ್ರತಿಕ್ರಿಯೆಯನ್ನು (N=219) ಒಳಗೊಂಡಿತ್ತು. ಇದರಲ್ಲಿ ರಾಜ್ಯ, ಜಿಲ್ಲೆ, ತಾಲೂಕು, ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಪ್ರತಿನಿಧಿಗಳು, ಮುಂಚೂಣಿ ಕಾರ್ಯಕರ್ತರು ಮತ್ತು ಸಮುದಾಯ ಸದಸ್ಯರ ಪ್ರತಿನಿಧಿತ್ವ ಹೊಂದಿತ್ತು. ಯೋಜನೆಯ ಎರಡನೇ ಹಂತದಲ್ಲಿ, ಎರಡೂ ತಾಲೂಕುಗಳಲ್ಲಿ ಪಾಲ್ಗೊಳ್ಳುವಿಕೆ ಕಾರ್ಯಾಗಾರಗಳ ಮೂಲಕ ಪ್ರತಿಕ್ರಿಯೆ ಮತ್ತು ಒಳನೋಟಗಳನ್ನು ಸಂಗ್ರಹಿಸಲಾಯಿತು.

ಸಂಶೋಧನೆ ಮತ್ತು ಕಾರ್ಯಾಗಾರಗಳು ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಕಾರ್ಯನಿರ್ವಹಣೆಯ ಬಗ್ಗೆ ಅಮೂಲ್ಯವಾದ ಒಳನೋಟಗಳನ್ನು ಒದಗಿಸಿದವು. ಸಮುದಾಯದ ಸದಸ್ಯರು, ಗ್ರಾಮ ಪಂಚಾಯಿತಿ ಪ್ರತಿನಿಧಿಗಳು ಮತ್ತು ಆರೋಗ್ಯ ಸೇವೆ ಪೂರೈಕೆದಾರರ ನಡುವಿನ ವಿಶಾಲವಾದ ಸಾಮಾಜಿಕ–ಸಾಂಸ್ಕೃತಿಕ ಸನ್ನಿವೇಶ, ಸಂಬಂಧಗಳು, ನಿರೀಕ್ಷೆಗಳು ಮತ್ತು ಸವಾಲುಗಳು

ಬೆಳಕಿಗೆ ಬಂದವು. ಇದರಿಂದ ಸಮಾಜದ ನಿರ್ಧಾರಕಗಳನ್ನು ಗುರುತಿಸಲು ಮತ್ತು ಸಹಯೋಗದ ಮಾರ್ಗಗಳನ್ನು ಬಲಪಡಿಸಲು ಸಾಧ್ಯವಾಯಿತು. ಈ ಕಾರ್ಯಾಗಾರಗಳು ಭಾಗೀದಾರರಿಗೆ ನೀಡಲಾದ ವೇದಿಕೆಯಾಗಿತ್ತು. ಅವರ ದೃಷ್ಟಿಕೋನ, ಪರಿಕಲ್ಪನೆಯ ಆಳ ಮತ್ತು ಅವರ ಧ್ವನಿಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಈ ಅಂಶಗಳನ್ನು ಕಾರ್ಯಕ್ರಮ ವಿನ್ಯಾಸದಲ್ಲಿ ಅಳವಡಿಸಲಾಯಿತು.

ಗ್ರಾಮ ಪಂಚಾಯಿತಿಗಳು, ಆರೋಗ್ಯ ಸೇವಾ ಪೂರೈಕೆದಾರರು ಮತ್ತು ಸಮುದಾಯ ಸದಸ್ಯರು ತಮ್ಮ ಕ್ಷೇತ್ರ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಸಾಮೂಹಿಕವಾಗಿ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಲು ಅನುಕೂಲವಾಯಿತು. ಈ ಪಾಲ್ಗೊಳ್ಳುವಿಕೆ ಕಾರ್ಯಾಗಾರಗಳಲ್ಲಿ ಗ್ರಾಮ ಪಂಚಾಯಿತಿಗಳು, ಸಮುದಾಯ ಸದಸ್ಯರು, ಮತ್ತು ಆರೋಗ್ಯ ಸೇವಾ ಪೂರೈಕೆದಾರರು ತಮ್ಮ ತಮ್ಮ ಪಾತ್ರ ಮತ್ತು ಬದ್ಧತೆಯನ್ನು ಸ್ಪಷ್ಟವಾಗಿ ಗುರುತಿಸಲು ನೆರವಾಯಿತು. ಸಾಮೂಹಿಕ ಚರ್ಚೆಯ ಮೂಲಕ ಗ್ರಾಮ ಪಂಚಾಯಿತಿ ಕಾರ್ಯಪಡೆ ಆಯ್ಕೆ ಪ್ರಕ್ರಿಯೆ ಮತ್ತು ಅದರ ಸವಾಲುಗಳನ್ನು ಗುರುತಿಸಲಾಯಿತು. ಇದರಿಂದ ಸಂಭಾವ್ಯ ಸವಾಲುಗಳನ್ನು ಸಾಮೂಹಿಕ ಸಂಯೋಜನೆ ಮೂಲಕ ಎದುರಿಸಲು, ವಿಭಿನ್ನ ಪಾಲುದಾರರ ಸಂಭಾವ್ಯ ಪಾತ್ರಗಳನ್ನು ಸ್ಪಷ್ಟವಾಗಿ ವಿವರಿಸಲು ನೆರವಾಯಿತು ಮತ್ತು ನಿರ್ಧಾರಕ ಸಮಸ್ಯೆಗಳನ್ನು ಪರಿಹರಿಸಲು ಪ್ರಾಯೋಗಿಕ ಪರಿಹಾರಗಳನ್ನು ಸೂಚಿಸಲು ಸಹಾಯಕವಾಯಿತು.

ಪ್ರಮುಖ ನಿರ್ಧಾರ ತೆಗೆದುಕೊಳ್ಳುವವರು ಮತ್ತು ತಜ್ಞರೊಂದಿಗೆ ಹಲವಾರು ಸುತ್ತಿನ ವಿಚಾರ ವಿನಿಮಯ ನಡೆಯಿತು.

ಈ ಪ್ರಕ್ರಿಯೆಯು ಆರೋಗ್ಯ ಸಂಗಮ ಪ್ರಾಯೋಗಿಕ ಯೋಜನೆಯ ಪರಿಕಲ್ಪನೆಯನ್ನು ರೂಪಿಸುವತ್ತ ಮುನ್ನಡೆಸಿತು. ಈ ಪ್ರಕ್ರಿಯೆಯಲ್ಲಿ ಕರ್ನಾಟಕ ಸರ್ಕಾರದ ಅಭಿವೃದ್ಧಿ ಆಯುಕ್ತರು, ಪಂಚಾಯತ್‌ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಮತ್ತು ಆಯುಕ್ತರು ಸೇರಿದ್ದರು. ಚಾಮರಾಜನಗರ ಮತ್ತು ರಾಯಚೂರು ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಪಂಚಾಯತ್ ರಾಜ್ ಇಲಾಖೆಯ ತಾಂತ್ರಿಕ ತಜ್ಞರು, ಕೆಹೆಚ್‌ಪಿಟಿ ಮತ್ತು ಜಾನ್ಸ್ ಹಾಪ್ಕಿನ್ಸ್ ಬ್ಲೂಮ್‌ಬರ್ಗ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್‌ನ (JHSPH) ಪ್ರತಿನಿಧಿಗಳು ಭಾಗವಹಿಸಿದ್ದರು. ಪಾಲ್ಗೊಳ್ಳುವಿಕೆ ಕಾರ್ಯಾಗಾರಗಳು, ಮತ್ತು ಪರಿಕಲ್ಪನೆ ವಿನ್ಯಾಸ ಚರ್ಚೆಯಲ್ಲಿ ಭಾಗವಹಿಸಿದವರ ವಿವರಗಳನ್ನು **ಅನುಬಂಧ–1** ರಲ್ಲಿ ನೀಡಲಾಗಿದೆ.

ಈ ಸಂಯೋಜಿತ ಪ್ರಯತ್ನಗಳಿಂದ ಆರೋಗ್ಯ ಸಂಗಮ ಅನುಷ್ಠಾನಕ್ಕೆ ರೂಪುರೇಷೆಯನ್ನು ಅಭಿವೃದ್ಧಿಪಡಿಸಲಾಗಿದೆ. ಜೊತೆಗೆ, ಕಾರ್ಯಕ್ರಮ ಯೋಜನಾ ಪ್ರಕ್ರಿಯೆಯಲ್ಲಿ ಸುಸಂಗತವಾದ ಮೇಲಿನಿಂದ ತಳಹಂತಕ್ಕೆ ತಲುಪುವ ಕಾರ್ಯತಂತ್ರದ ದೂರದೃಷ್ಟಿಯು ರೂಪಿಸಲ್ಪಟ್ಟಿದೆ. ಇದನ್ನು ಪೂರೈಸಲು ತಳಹಂತದಿಂದ ಮೇಲಿನ ಹಂತಕ್ಕೆ ಪ್ರತಿಕ್ರಿಯೆ ನೀಡುವ ವ್ಯವಸ್ಥೆಯೂ ರೂಪುಗೊಂಡಿದೆ. ಈ ಪ್ರಕ್ರಿಯೆಯು ಪುರಾವೆ ಆಧಾರಿತವಾಗಿದ್ದು, ಪ್ರಮುಖ ಭಾಗೀದಾರರ ದೃಷ್ಟಿಕೋನಗಳ ಜೊತೆಗೆ ಸಮುದಾಯ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಆರೋಗ್ಯ ಸೇವಾ ಪೂರೈಕೆದಾರರ ಅಗತ್ಯತೆಗಳ ಆಳ ಅಗಲಕ್ಕೆ ಸ್ಪಂದಿಸುವ ರೀತಿಯಲ್ಲಿ ವಿನ್ಯಾಸಗೊಳಿಸಲಾಯಿತು.



# ಭಾಗ 2 ಆರೋಗ್ಯ ಸಂಗಮ ಯಶಸ್ಸಿಗಾಗಿ ದೂರದೃಷ್ಟಿ, ಗುರಿ ಮತ್ತು ಉದ್ದೇಶಗಳು

## 2.1 ಆರೋಗ್ಯ ಸಂಗಮ ಯಶಸ್ಸಿಗೆ ದೂರದೃಷ್ಟಿ

**ಈ ಯೋಜನೆಯು ಗ್ರಾಮ ಪಂಚಾಯಿತಿ ಕಾರ್ಯಪಡೆಗಳನ್ನು ಸಮುದಾಯ ಮತ್ತು ಆರೋಗ್ಯ ಸೇವಾ ಪೂರೈಕೆದಾರರೊಂದಿಗೆ ಸಾಮಾನ್ಯ ಆದ್ಯತೆಗಳು ಮತ್ತು ಹಂಚಿಕೆಯ ಆಸಕ್ತಿಗಳನ್ನು ಗುರುತಿಸಲು, ವ್ಯಕ್ತಿ, ಕುಟುಂಬ, ಸಮುದಾಯ ಮತ್ತು ಸಾಮಾಜಿಕ ಮಟ್ಟದಲ್ಲಿ ಪರಿವರ್ತನಾತ್ಮಕ ಆರೋಗ್ಯ, ಅಭಿವೃದ್ಧಿ ಮತ್ತು ಸಾಮಾಜಿಕ ಬದಲಾವಣೆಯನ್ನು ಹೆಚ್ಚಿಸಲು, ಜಂಟಿ ಯೋಜನೆ ಮತ್ತು ಕ್ರಮಗಳನ್ನು ಉತ್ತೇಜಿಸಲು ಗ್ರಾಮ ಪಂಚಾಯಿತಿ ನೇತೃತ್ವದ ಸಹಯೋಗದ ವೇದಿಕೆಗಳನ್ನಾಗಿ ರೂಪುಗೊಳಿಸುತ್ತದೆ.**

ಆರೋಗ್ಯ ಸಂಗಮ ಯೋಜನೆಯ ದೂರದೃಷ್ಟಿ ಭಾಗೀದಾರರೆಂದರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಸಮುದಾಯ. ಈ ಯೋಜನೆ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಕುರಿತು ಅವರು ನೀಡಿದ ಒಳನೋಟಗಳ ಆಧಾರದ ಮೇಲೆ ರೂಪುಗೊಂಡಿದೆ. ಆರೋಗ್ಯ ಸಂಗಮ ಯೋಜನೆ ಪರಿಕಲ್ಪನೆಯ ಕೇಂದ್ರ ಬಿಂದು ಎಂದರೆ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ನಿರ್ದಿಷ್ಟ ಸಮಯದೊಳಗೆ ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳ ದೃಷ್ಟಿಕೋನಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸುವುದು. ಇದನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ವ್ಯಕ್ತಪಡಿಸಿದಂತೆ, ರಾಜ್ಯ ಮತ್ತು ಸ್ಥಳೀಯ ಆಡಳಿತ ಮತ್ತು ಸಮುದಾಯ ಗುರುತಿಸಿದ ನಿರ್ದಿಷ್ಟ ಕೊಡುಗೆ ಮತ್ತು ಆದ್ಯತೆಗಳೊಂದಿಗೆ ಪರಿಣಾಮಕಾರಿಯಾಗಿ ರೂಪಿಸಲು ಯೋಜಿಸಲಾಗಿದೆ.

### ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳ ಮಾರ್ಗಸೂಚಿಯ ಪ್ರಕಾರ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಪ್ರಮುಖ ಕಾರ್ಯಗಳು

ಸಮುದಾಯದ ಸಹಯೋಗದೊಂದಿಗೆ ಕಾರ್ಯನಿರ್ವಹಿಸುವುದು → ಎಲ್ಲರನ್ನೂ ಒಗ್ಗೂಡಿಸಿ ಸ್ಥಳೀಯ ಮಟ್ಟದಲ್ಲಿ ಕ್ರಮವಹಿಸುವುದು → ಸಾರ್ವಜನಿಕ ಆರೋಗ್ಯ ಸವಾಲುಗಳು ಮತ್ತು ಆರೋಗ್ಯದ ಸಾಮಾಜಿಕ ನಿರ್ಧಾರಕ ಅಂಶಗಳನ್ನು ಪರಿಹರಿಸುವ ಮೂಲಕ ಸಮುದಾಯಗಳನ್ನು ಸ್ವಾವಲಂಬಿಯನ್ನಾಗಿ ಮಾಡುವುದು ಹಾಗೂ ಜನರ ಸಮಗ್ರ ಯೋಗಕ್ಷೇಮವನ್ನು ಸುಧಾರಿಸುವುದು

### ಸ್ಥಳೀಯ ಗ್ರಾಮ ಪಂಚಾಯಿತಿಯ ಪ್ರಕಾರ, ಆರೋಗ್ಯ ಸೇವಾ ಪೂರೈಕೆದಾರರು, ಸಮುದಾಯ ಸದಸ್ಯರು ಮತ್ತು ಗ್ರಾಮ ಪಂಚಾಯಿತಿ ಕಾರ್ಯಪಡೆಗಳು

**ಬದಲಾವಣೆಗೆ ಸ್ಪಂದಿಸುವುದು** → ವ್ಯಕ್ತಿ, ಕುಟುಂಬ ಮತ್ತು ಸಮುದಾಯ ಮಟ್ಟದಲ್ಲಿ ಸಾಮಾಜಿಕ ಕ್ಷೇತ್ರದ ಪರಿವರ್ತನಾತ್ಮಕ ಬದಲಾವಣೆಗೆ ಚಾಲನೆ ನೀಡುವುದು → ಸಾಮಾಜಿಕ ಜವಾಬ್ದಾರಿ ನಿರ್ವಹಣೆಗಾಗಿ ತಮ್ಮ ಮಾಲೀಕತ್ವ ತೆಗೆದುಕೊಳ್ಳುವುದು

**ಜ್ವಲಂತ ಆರೋಗ್ಯ ಸಮಸ್ಯೆಗಳನ್ನು ಪರಿಹರಿಸುವುದು** → ಅಪೌಷ್ಟಿಕತೆ, ಹದಿಹರೆಯದ ಗರ್ಭಧಾರಣೆ ಮತ್ತು ಬಾಲ್ಯ ವಿವಾಹವನ್ನು ತಡೆಯುವುದು → ಮದ್ಯ ಸೇವನೆ ಮತ್ತು ಹಾನಿಕಾರಕ ಮಾದಕ ವಸ್ತುಗಳ ಬಳಕೆ ನಿಲ್ಲಿಸುವುದು

**ಅಭಿವೃದ್ಧಿಪರ ಕಾರ್ಯಕ್ರಮಗಳಿಗೆ ಮುತುವರ್ಜಿ** → ಜನರು, ಗ್ರಾಮ ಪಂಚಾಯಿತಿಗಳು ಮತ್ತು ಆರೋಗ್ಯ ವ್ಯವಸ್ಥೆಗಳ ನಡುವೆ ಕೊಂಡಿಯಾಗಿ ಸೇವೆ ಸಲ್ಲಿಸುವುದು → ಸಮಸ್ಯೆ ಪರಿಹಾರಕ್ಕೆ ಜಂಟಿ ಮಾಲೀಕತ್ವ, ಬೆಂಬಲ ಮತ್ತು ತರಬೇತಿಯ ಮೂಲಕ ಹೊಣೆಗಾರರನ್ನಾಗಿ ಮಾಡುವುದು

## 2.2 ಆರೋಗ್ಯ ಸಂಗಮ ಯೋಜನೆಯ ಗುರಿಗಳು

ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಆರೋಗ್ಯಕರವಾಗಿ ಬದುಕುವ ಪರಿಸರ ಸೃಷ್ಟಿಸಿ ಆ ಮೂಲಕ ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH) ಸಂಬಂಧಿತ ವಿಷಯಗಳಿಗೆ ಆದ್ಯತೆ ನೀಡುವುದರೊಂದಿಗೆ, ಸಾಮಾಜಿಕ ಸವಾಲುಗಳಾದ ಬಾಲ್ಯವಿವಾಹ ಮತ್ತು ಮಾದಕ ವಸ್ತು ಬಳಕೆ ಮುಂತಾದ ಸಮಸ್ಯೆಗಳನ್ನು ನಿಭಾಯಿಸುವುದು ಯೋಜನೆಯ ಮುಖ್ಯ ಗುರಿಯಾಗಿದೆ. ಜೊತೆಗೆ ಸರ್ಕಾರಿ ಸೌಲಭ್ಯಗಳು ಮತ್ತು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಬಗ್ಗೆ ಸಮುದಾಯದಲ್ಲಿ ಅರಿವು ಮೂಡಿಸುವುದು ಮತ್ತು ತಾಯಂದಿರು, ಮಕ್ಕಳು, ಹಿರಿಯರು ಮತ್ತು ಇತರೆ ದುರ್ಬಲ ವರ್ಗದ ಜನರಿಗೆ ಆರೋಗ್ಯ ಸೇವೆಗಳ ಲಭ್ಯತೆಯನ್ನು ಹೆಚ್ಚಿಸುವ ಕ್ರಮವನ್ನು ಕಾರ್ಯಪಡೆಗಳು ಕೈಗೊಳ್ಳುವುದು. ಆರೋಗ್ಯ ವರ್ಧನೆ ಪ್ರಯತ್ನಗಳಿಗೆ ಚಾಲನೆ ನೀಡುವುದು. ಅಂದರೆ, ಅತ್ಯಂತ ದುರ್ಬಲ ವರ್ಗದವರಲ್ಲಿ ಅಪೌಷ್ಟಿಕತೆ ಸಮಸ್ಯೆಯನ್ನು ಕಡಿಮೆ ಮಾಡುವುದು, ಅಸಾಂಕ್ರಾಮಿಕ ಹಾಗೂ ಸಾಂಕ್ರಾಮಿಕವಲ್ಲದ ರೋಗಗಳ ಹೊರೆಯನ್ನು ನಿಯಂತ್ರಿಸುವುದು, ಜೊತೆಗೆ ಸಂಪನ್ಮೂಲಗಳು ಮತ್ತು ಸೌಲಭ್ಯಗಳು ಎಲ್ಲರಿಗೂ ಸಮಾನವಾಗಿ ಲಭ್ಯವಾಗುವಂತೆ ಖಚಿತಪಡಿಸಿಕೊಳ್ಳುವುದು.

## 2.3 ಆರೋಗ್ಯ ಸಂಗಮ ಕಾರ್ಯಕ್ರಮದ ಸಮಗ್ರ ನೋಟ

ಆರೋಗ್ಯ ಸಂಗಮದ ಯೋಜನೆಯ ಸಮಗ್ರ ಗುರಿ ಸಾಧನೆಗಾಗಿ, ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಭಾಗೀದಾರರು ನೀಡಿದ ಮಾಹಿತಿಯ ಆಧಾರದ ಮೇಲೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಮಗ್ರ ಆರೋಗ್ಯ ಸಂಗಮ ಕಾರ್ಯಕ್ರಮದ **(ಚಿತ್ರ 2 ನೋಡಿ)** ರೂಪುರೇಷೆಯನ್ನು ಅಭಿವೃದ್ಧಿಪಡಿಸಿದೆ. ಗ್ರಾಮ ಪಂಚಾಯಿತಿಗಳು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಪ್ರತಿನಿಧಿಗಳ ಮೇಲ್ವಿಚಾರಣೆಯಲ್ಲಿ ಇದರ ಅನುಷ್ಠಾನವನ್ನು ಕೈಗೊಳ್ಳುತ್ತವೆ. ಮುಂದಿನ ವಿಭಾಗಗಳು ಯೋಜನೆಯ ನಾಲ್ಕು ಉಪಕ್ರಮಗಳನ್ನು ವಿವರಿಸುತ್ತವೆ.

**ಆರೋಗ್ಯ ಸಂಗಮ ಕಾರ್ಯಕ್ರಮದ ಸಮಗ್ರ ನೋಟ**




**ಚಿತ್ರ 2 ಆರೋಗ್ಯ ಸಂಗಮ ಯೋಜನೆಯ ಉಪಕ್ರಮಗಳು**

## 2.4 ಆರೋಗ್ಯ ಸಂಗಮ ಪ್ರಭಾವದ ಮಾದರಿ

ಆರೋಗ್ಯ ಸಂಗಮ ಕಾರ್ಯಕ್ರಮದ ಪ್ರಗತಿ ಮತ್ತು ಪ್ರಭಾವವನ್ನು ಟ್ರ್ಯಾಕ್ ಮಾಡಲು **ಚಿತ್ರ 3 ರಲ್ಲಿ** ವಿವರಿಸಿದಂತೆ "ಪ್ರಭಾವದ ಮಾದರಿ" (Impact Model) ಯನ್ನು ಆಧರಿಸಲಾಗಿದೆ. ಈ ಮಾದರಿಯು ಕೊಳ್ಳೇಗಾಲ/ಹನೂರು ಮತ್ತು ದೇವದುರ್ಗ ತಾಲೂಕುಗಳ ಗ್ರಾಮ ಪಂಚಾಯಿತಿಗಳಲ್ಲಿ ಯೋಜನೆಯ ನಿರೀಕ್ಷಿತ ಅನುಷ್ಠಾನದಿಂದ ಉಂಟಾದ ಸಕಾರಾತ್ಮಕ ಬದಲಾವಣೆಗಳನ್ನು ನಿರೂಪಿಸುತ್ತದೆ. ಈ ಮಾದರಿ ಮೂಲಕ ಆರೋಗ್ಯ ಸಂಗಮದ ಚಟುವಟಿಕೆಗಳ ಸರಪಣಿಯು ನೀರಿಕ್ಷಿತ ಫಲಿತಾಂಶಗಳತ್ತ ಸಾಗುತ್ತದೆ ಎಂಬುದನ್ನು ಪ್ರದರ್ಶಿಸಲಾಗುತ್ತದೆ. ರಾಜ್ಯ, ಜಿಲ್ಲೆ ಮತ್ತು ತಾಲೂಕು ತಂಡಗಳಿಗೆ ಆರೋಗ್ಯ ಸಂಗಮ ಯೋಜನೆಯ ಸಂಭಾವ್ಯ ಪ್ರಯೋಜನಗಳನ್ನು ನಿರ್ಧಾರಗೊಳಿಸಲು ಮತ್ತು ಪರಿಣಾಮವನ್ನು ಅಳೆಯಲು ಮಾರ್ಗದರ್ಶನ ಮಾಡುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಒಂದು ವರ್ಷದ ಬಳಿಕ ಯೋಜನೆಯ ಮೇಲ್ವಿಚಾರಣೆಯನ್ನು ನಡೆಸುತ್ತಿದ್ದು, ಈ ಪ್ರಕ್ರಿಯೆಗೆ ಪೂರಕವಾಗಿ, ಕೆಹೆಚ್‌ಪಿಟಿ ಮತ್ತು ಜೆಹೆಚ್‌ಯು ತಂಡವು ಪರಿಣಾಮವನ್ನು ಅಳೆಯಲು ಮಾನದಂಡಗಳನ್ನು ಅಭಿವೃದ್ಧಿಪಡಿಸುತ್ತದೆ.

| ಕಾರ್ಯಚಟುವಟಿಕೆ (Input) | ಪ್ರಕ್ರಿಯೆ (Process) | ಫಲಿತಾಂಶ (Output) | ಪರಿಣಾಮ (Outcomes) |
|---|---|---|---|
| • ಜಿಲ್ಲೆಗಳು/ತಾಲೂಕುಗಳು/ಗ್ರಾಮ ಪಂಚಾಯಿತಿಗಳಿಗೆ ಮಾರ್ಗಸೂಚಿಗಳ ಬಿಡುಗಡೆ<br>• ಮಾರ್ಗಸೂಚಿಗಳ ಆಧಾರದ ಮೇಲೆ ಜಿಲ್ಲೆಗಳು/ತಾಲ್ಲೂಕುಗಳು/ಗ್ರಾಮ ಪಂಚಾಯಿತಿಗಳಿಗೆ ಪರಿಚಯಾತ್ಮಕ ತರಬೇತಿ<br>• ಸ್ಪಷ್ಟ ಆದೇಶಗಳೊಂದಿಗೆ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಪುನರ್ ರಚನೆ<br>• ಆರೋಗ್ಯದ ಸಂಗಮ ತರಬೇತಿದಾರರ/ಸುಗಮಗಾರರ (Facilitators) ಆಯ್ಕೆ<br>• ಆರೋಗ್ಯ ಸಂಗಮ ಕಾರ್ಯಕ್ರಮಕ್ಕಾಗಿ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳಿಗೆ ಅನುದಾನ<br>• ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸದಸ್ಯರು, ಆದೇಶ ಮತ್ತು ಅದರ ಪಾತ್ರಗಳ ಬಗ್ಗೆ ಸಮುದಾಯಕ್ಕೆ ಅರಿವು ಮೂಡಿಸುವುದು. | • ಆರೋಗ್ಯ ಸಂಗಮ ತರಬೇತಿದಾರರ/ಸುಗಮಗಾರರ ಸಾಮರ್ಥ್ಯಾಭಿವೃದ್ಧಿ<br>• ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸದಸ್ಯರಿಗೆ ಪರಿಕಲ್ಪನೆ/ದೃಷ್ಟಿಕೋನ ನಿರ್ಮಾಣ ಮತ್ತು ತರಬೇತಿ ಕಾರ್ಯಾಗಾರಗಳು<br>• ಗ್ರಾಮ ಪಂಚಾಯಿತಿ ಕಾರ್ಯಪಡೆಯ ಆರೋಗ್ಯ ಸಂಗಮ ತ್ರೈಮಾಸಿಕ ಸಭೆಗಳು ಮತ್ತು ಯೋಜನೆ–ಅನುಷ್ಠಾನ–ಪರಿಶೀಲನೆ–ಅಳವಡಿಕೆ (PDCA) ಕ್ರಮ<br>• ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಕಾರ್ಯಚಟುವಟಿಕೆಗಳ ಕಲಿಕೆಗಾಗಿ ಸಮಸ್ಯೆ ಪರಿಹಾರ<br>• ಆರೋಗ್ಯ ಸಂಗಮ ಪೂರ್ಣಗೊಳಿಸುವಿಕೆಯ ಸಾಮೂಹಿಕ ಕ್ರಿಯೆಗಾಗಿ ಆದ್ಯತೆಗಳನ್ನು ಮತ್ತು ಪರಿಶೀಲನಾ ಪರಿಕರಗಳನ್ನು (Tracking Tool) ಗುರುತಿಸುವುದು. | • ಕ್ರಿಯಾಶೀಲ ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಮತ್ತು ನಿರಂತರ ಸಭೆಗಳು<br>• ಜಂಟಿ ಚಟುವಟಿಕೆಗಳಿಗೆ ಆದ್ಯತೆಗಳ ಗುರುತಿಸುವುದು<br>• ಆದ್ಯತೆಯ ಮೇರೆಗೆ ಸಮಸ್ಯೆಗಳನ್ನು ಪರಿಹರಿಸಲು ಕ್ರಿಯಾ ಯೋಜನೆಗಳು<br>• ಆರೋಗ್ಯ ಸಂಗಮ ಕ್ರಿಯಾ ಯೋಜನೆಯ ತ್ರೈಮಾಸಿಕಕ್ಕೊಮ್ಮೆ ಅನುಷ್ಠಾನ<br>• ಪ್ರಮುಖ ಆದ್ಯತೆಯ ಕ್ಷೇತ್ರಗಳಲ್ಲಿ ಸಮುದಾಯ ಅರಿವು ಮತ್ತು ಸಂಪರ್ಕ ಕಾರ್ಯಕ್ರಮಗಳು<br>• ಆರೋಗ್ಯ ಸಂಗಮ ಸುಗಮಗಾರರು/ತಾಲ್ಲೂಕು ಪಂಚಾಯಿತಿಯಿಂದ ಸಮರ್ಥ ಮೇಲ್ವಿಚಾರಣೆ ಮತ್ತು ಪರಿಶೀಲನೆ<br>• ಕ್ರಿಯಾ ಯೋಜನೆ ಅನುಷ್ಠಾನಕ್ಕಾಗಿ ಅನುದಾನ ಬಿಡುಗಡೆ<br>• ಉತ್ತಮವಾಗಿ ಕಾರ್ಯನಿರ್ವಹಿಸಿದ ಗ್ರಾಮ ಪಂಚಾಯಿತಿಗಳಿಗೆ ಪುರಸ್ಕಾರ | • ನೀರು, ಸ್ವಚ್ಛತೆ, ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ (WASH) ಅನುಷ್ಠಾನದಲ್ಲಿ ಸುಧಾರಣೆ<br>• ಜನರಲ್ಲಿ ವರ್ತನಾ ಬದಲಾವಣೆ (ಶೌಚಾಲಯ ಬಳಕೆ, ಘನತ್ಯಾಜ್ಯ ವಿಂಗಡಣೆ ಇತ್ಯಾದಿ)<br>• ತಾಯಿಯ ಮತ್ತು ಮಕ್ಕಳ ಆರೋಗ್ಯ ಸೇವೆಗಳಲ್ಲಿ ಸುಧಾರಣೆ<br>• ಸರ್ಕಾರ ನೀಡುವ ಸಾಮಾಜಿಕ ಭದ್ರತಾ ಪ್ರಯೋಜನಗಳು/ಸೌಲಭ್ಯಗಳ ಬಗ್ಗೆ ಸಮುದಾಯದ ಅರಿವಿನಲ್ಲಿ ಸುಧಾರಣೆ.<br>• ಗರ್ಭಾವಸ್ಥೆಯಲ್ಲಿ ಮತ್ತು ಹೆರಿಗೆಯ ಸಮಯದಲ್ಲಿ ಇನ್ನಿತರ ಖರ್ಚು ಕಡಿಮೆಯಾಗುವಿಕೆ (OOPE)<br>• ಮಧ್ಯದಲ್ಲಿ ಶಾಲೆ ಬಿಡುವ ಹೆಣ್ಣು ಮಕ್ಕಳ ಸಂಖ್ಯೆಯಲ್ಲಿ ಇಳಿಕೆ<br>• ಹಣಕಾಸು ರಕ್ಷಣಾ ಯೋಜನೆಗಳ ಪ್ರಯೋಜನ ಪಡೆಯುವುದರಲ್ಲಿ ಹೆಚ್ಚಳ<br>• ಅಸಾಂಕ್ರಮಿಕ ರೋಗಗಳನ್ನು ತಡೆಗಟ್ಟುವ ಸೇವೆಗಳ ಸುಧಾರಣೆ<br>• HWC ಗಳಲ್ಲಿ ಸೇವೆಗಳ ಗುಣಮಟ್ಟದಲ್ಲಿ ಸುಧಾರಣೆ |

**ಚಿತ್ರ 3 ಆರೋಗ್ಯ ಸಂಗಮ ಪರಿಣಾಮ ಮಾದರಿ**

# ಭಾಗ 3 | ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸಂಯೋಜನೆ ಮತ್ತು ಪುನರ್‌ರಚನೆಯ ಪ್ರಕ್ರಿಯೆಗಳು

## 3.1 ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಪುನರ್‌ರಚನೆಯ ಅಗತ್ಯತೆ

ಕೋವಿಡ್–19 ಸಾಂಕ್ರಾಮಿಕದ ಸಮಯದಲ್ಲಿ ಅನೇಕ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯಪಡೆಗಳನ್ನು ರಚಿಸಲಾಗಿತ್ತು. ಆದರೆ ಹಲವು ಗ್ರಾಮ ಪಂಚಾಯಿತಿಗಳಲ್ಲಿ ಈ ಕಾರ್ಯಪಡೆಗಳು ಕಳೆದ ಎರಡು ಮೂರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿಲ್ಲ. ಇದಕ್ಕೆ ಕಾರಣ ಸದಸ್ಯರ ಕಾಲಾವಧಿ ಮುಗಿದಿರುವುದು, ಕಾಲಕಾಲಕ್ಕೆ ಸಭೆಗಳನ್ನು ನಡೆಸದಿರುವುದು, ಅಸ್ಪಷ್ಟ ನಿರೀಕ್ಷೆಗಳು, ಸದಸ್ಯರ ಪಾತ್ರದ ಬಗ್ಗೆ ಸ್ಪಷ್ಟತೆ ಇಲ್ಲದಿರುವುದು ಕಾರಣ ಎಂದು ಕಂಡುಬಂದಿದೆ. ಜೊತೆಗೆ ಗ್ರಾಮ ಪಂಚಾಯಿತಿ ಮತ್ತು ಸಮುದಾಯದ ಸದಸ್ಯರ ಸಕ್ರಿಯ ಭಾಗವಹಿಸುವಿಕೆ ಇಲ್ಲದಿರುವುದು ಸಹ ಒಂದು ಪ್ರಮುಖ ಸವಾಲಾಗಿದೆ. ಆರೋಗ್ಯ ಸಂಗಮ ಕಾರ್ಯಕ್ರಮದ ಸುಗಮ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು, ಗ್ರಾಮ ಪಂಚಾಯಿತಿ ಕಾರ್ಯಪಡೆಗಳನ್ನು ಪುನರ್ ರಚನೆ ಮಾಡುವ ಮತ್ತು ಸದಸ್ಯರಲ್ಲಿ ಪ್ರೇರಣೆ ತರುವ ಅವಶ್ಯಕತೆ ಇದೆ. ಸಕ್ರಿಯ ಮತ್ತು ಸ್ವಯಂಪ್ರೇರಿತ ಸದಸ್ಯರೊಂದಿಗೆ ಕಾರ್ಯಪಡೆಗಳನ್ನು ಪುನರ್ ರಚನೆ ಮಾಡಿ, ವ್ಯಕ್ತಿ, ಕುಟುಂಬ, ಸಮುದಾಯ ಮತ್ತು ಸಾಮಾಜಿಕ ಮಟ್ಟದಲ್ಲಿ ಪರಿವರ್ತನಾತ್ಮಕ ಆರೋಗ್ಯ ಮತ್ತು ಸಾಮಾಜಿಕ ಬದಲಾವಣೆಯನ್ನು ಚಾಲನೆಗೊಳಿಸಲು ಅನುಕೂಲವಾಗುತ್ತದೆ. ಕಾರ್ಯಕ್ರಮದ ಧ್ಯೇಯೋದ್ದೇಶಗಳನ್ನು ಸಾಧಿಸಲು, ಹೊಸ ಗ್ರಾಮ ಪಂಚಾಯಿತಿ ಕಾರ್ಯಪಡೆಗಳನ್ನು ಕಾರ್ಯ–ಆಧಾರಿತ ಸಂಸ್ಥೆಯಾಗಿ ವಿನ್ಯಾಸಗೊಳಿಸಿ, ತ್ವರಿತ ನಿರ್ಧಾರ ತೆಗೆದುಕೊಳ್ಳುವ, ಇತರೆ ಉಪಸಮಿತಿಗಳಿಗಿಂತ ಭಿನ್ನವಾಗಿ ಸಮಸ್ಯೆ ಬಗೆಹರಿಸಿ ಸೂಕ್ತ ನಿರ್ಧಾರ ತೆಗೆದುಕೊಂಡು ಮತ್ತು ಮೇಲ್ವಿಚಾರಣೆ ಮಾಡುವ ಶಕ್ತಿಯುತ ಮಂಡಳಿಯಾಗಿ ರೂಪಿಸಬೇಕು. ಈ ಪ್ರಕ್ರಿಯೆಯ ಮೂಲಕ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಅಡಿಯಲ್ಲಿ ಅಧಿಕೃತವಾಗಿ ಗ್ರಾಮ ಪಂಚಾಯಿತಿಯ ಆರೋಗ್ಯ ಕಾರ್ಯಪಡೆಯಾಗಿ ಹೊಸ ರೂಪ ಪಡೆಯಲಿವೆ.



## 3.2 ಆರೋಗ್ಯ ಸಂಗಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸಂಯೋಜನೆ

ಚಾಮರಾಜನಗರ ಮತ್ತು ರಾಯಚೂರು ಜಿಲ್ಲೆಗಳಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಆರೋಗ್ಯ ಇಲಾಖೆಯ ಕಾರ್ಯಕ್ರಮ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಪ್ರತಿನಿಧಿಗಳು, ಸಮುದಾಯದ ಸದಸ್ಯರು, ಆರೋಗ್ಯ ಸೇವಾ ಪೂರೈಕೆದಾರರು ಮಾಹಿತಿ ನೀಡಿದ ಆಧಾರದ ಮೇಲೆ ಆರೋಗ್ಯ ಸಂಗಮ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ದೃಷ್ಟಿಯಿಂದ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸಂಯೋಜನೆಯನ್ನು ವಿಸ್ತರಿಸಲು ತೀರ್ಮಾನಿಸಲಾಗಿದೆ. ಹಿಂದಿನ 15–20 ಸದಸ್ಯರಿಂದ ಕಾರ್ಯಪಡೆಯನ್ನು 30–35 ಸದಸ್ಯರಿಗೆ (ಸರ್ಕಾರದ ಪ್ರತಿನಿಧಿಗಳು ಮತ್ತು ನಾಮನಿರ್ದೇಶಿತ ಸದಸ್ಯರು ಸೇರಿದಂತೆ) ವಿಸ್ತರಿಸಲಾಗುತ್ತದೆ. **ಬಾಕ್ಸ್–1 ರಲ್ಲಿ** ಪುನರ್ರಚನೆಗಾಗಿ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ವಿಸ್ತೃತ ಸಂಯೋಜನೆಯನ್ನು ವಿವರಿಸಲಾಗಿದೆ.

**ಬಾಕ್ಸ್ 1: ವಿವಿಧ ಇಲಾಖೆಗಳು ಮತ್ತು ಸಮುದಾಯಗಳಿಂದ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸಂಯೋಜನೆಯನ್ನು ಈ ಕೆಳಕಂಡಂತೆ ಮಾಡಲಾಗಿದೆ.**

**ಕೋರ್ ಸದಸ್ಯರ ಸಂಖ್ಯೆ 20 ರಿಂದ 22 ರವರೆಗೆ ಹೊಂದಿರಬೇಕು, ಇದರಲ್ಲಿ ಕನಿಷ್ಠ 50% ಮಹಿಳೆಯರು ಇರಬೇಕು**

**ಗ್ರಾಮ ಪಂಚಾಯಿತಿ**
- ಗ್ರಾಮ ಪಂಚಾಯಿತಿಯ ಅಧ್ಯಕ್ಷರು– ಅಧ್ಯಕ್ಷರಾಗಿರುತ್ತಾರೆ.
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (PDO)- ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.
- ಗ್ರಾಮ ಪಂಚಾಯಿತಿ ಸದಸ್ಯರು– ನಿರ್ದಿಷ್ಟಪಡಿಸಲಾದ ಮಾನದಂಡಗಳ ಆಧಾರದ ಮೇಲೆ ಆವರ್ತನೀಯ ಕ್ರಮವಾಗಿ ಆಯ್ಕೆ ಮಾಡಲಾಗುತ್ತದೆ. ಪ್ರತಿ ವರ್ಷ ಒಟ್ಟು ಸದಸ್ಯರಲ್ಲಿ ಐದನೇ ಒಂದು ಭಾಗ ಸದಸ್ಯರನ್ನು ಒಳಗೊಂಡಿರುತ್ತದೆ, ಆದ್ದರಿಂದ 5 ವರ್ಷಗಳ ಒಳಗೆ ಎಲ್ಲ ಸದಸ್ಯರು ಅವಕಾಶ ಪಡೆಯುತ್ತಾರೆ.

**ಆರೋಗ್ಯ ಇಲಾಖೆ**
- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಉಪಕೇಂದ್ರಗಳ (SC) ಸಮುದಾಯ ಆರೋಗ್ಯ ಅಧಿಕಾರಿಗಳು–ಆರೋಗ್ಯ ಮತ್ತು ಯೋಗಕ್ಷೇಮ ಕೇಂದ್ರಗಳು (HWCs)
- ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರ (PHC) ಗಳ ಆಶಾ ಕಾರ್ಯಕರ್ತೆಯರು.

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (NRLM)**
- ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳ ಅಧ್ಯಕ್ಷರು
- ಸ್ವಸಹಾಯ ಸಂಘದ ಸದಸ್ಯರು – ಅಧ್ಯಕ್ಷರಿಂದ ನಾಮನಿರ್ದೇಶಿತರಾದ ಇಬ್ಬರು ಸದಸ್ಯರು

**ಸಮಗ್ರ ಶಿಶು ಅಭಿವೃದ್ಧಿ ಸೇವೆಗಳು (ICDS)**
- ಅಂಗನವಾಡಿ ಕಾರ್ಯಕರ್ತೆಯರು (AWW) – ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಂಗನವಾಡಿ ಕೇಂದ್ರ (AWC)– (ಆರಂಭದಲ್ಲಿ ಇಬ್ಬರು ಅಂಗನವಾಡಿ ಕಾರ್ಯಕರ್ತೆಯರು ಆಯ್ಕೆಗೊಳ್ಳುತ್ತಾರೆ, ನಂತರ ಆವರ್ತನ ಆಧಾರದ ಮೇಲೆ ಇತರರು)

**ಕಂದಾಯ ಇಲಾಖೆ**
- ಗ್ರಾಮ ಲೆಕ್ಕಾಧಿಕಾರಿಗಳು

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**
- ಗ್ರಾಮ ಪಂಚಾಯಿತಿಯ ಪ್ರಮುಖ ಶಾಲೆಯ ಮುಖ್ಯೋಪಾಧ್ಯಾಯರು
- ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು (CRP)

**ಸಮುದಾಯ ಸದಸ್ಯರು**
- ತಾಯಿ ಮತ್ತು ಮಕ್ಕಳ ಆರೋಗ್ಯ (MCH) / ಅಸಾಂಕ್ರಾಮಿಕ (NCDs) ಸೇವೆ ಪಡೆದಿರುವ ಎಸ್.ಸಿ./ಎಸ್.ಟಿ. ಫಲಾನುಭವಿಗಳು
- ಮಹಿಳಾ ಮತ್ತು ಬಾಲ ವಿಕಾಸ ಸಮಿತಿ ಅಧ್ಯಕ್ಷರು–ಒಬ್ಬ ಸದಸ್ಯ
- 21 ವರ್ಷಗಳಿಗಿಂತ ಹೆಚ್ಚು ವಯಸ್ಸಿನ ಯುವಕ ಸಂಘದ ಸ್ವಯಂಸೇವಕರು–ಒಬ್ಬ ಸದಸ್ಯ

**ಆಹ್ವಾನಿತ ಸದಸ್ಯರು (22)**

**ಆರೋಗ್ಯ ಇಲಾಖೆ (HFW) ಮತ್ತು ಸಮಗ್ರ ಶಿಶು ಅಭಿವೃದ್ಧಿ ಸೇವೆಗಳು (ICDS)**
- ಪಿ.ಎಚ್.ಸಿ. ವೈದ್ಯಕೀಯ ಅಧಿಕಾರಿ
- ಪಿ.ಎಚ್.ಸಿ. ಆರೋಗ್ಯ ನಿರೀಕ್ಷಕರು
- ಪ್ರಾಥಮಿಕ ಆರೋಗ್ಯ ಆರೈಕೆ ಅಧಿಕಾರಿಗಳು (PHCO): ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ SC-HWC ಗಳಿಂದ ಇಬ್ಬರು. (ಪ್ರತಿ ಆರು ತಿಂಗಳಿಗೊಮ್ಮೆ ಆವರ್ತನ ಕ್ರಮದ ಆಧಾರದ ಮೇಲೆ ಇತರರು ಆಯ್ಕೆ ಆಗುತ್ತಾರೆ.)
- ಆಶಾ ಕಾರ್ಯಕರ್ತೆಯರು–ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಆಶಾ ಕಾರ್ಯಕರ್ತೆಯರು. (ಮಾಹಿತಿ/ ಅನುಸರಣೆ ಕ್ರಿಯೆಗಳು ಆಧಾರದ ಮೇಲೆ–ಒಂದು ವೇಳೆ ಅಗತ್ಯವಿದ್ದರೆ ಸಂಬಂಧಪಟ್ಟ ಗ್ರಾಮಗಳಿಂದ)
- ಐಸಿಡಿಎಸ್/ICDS ವೃತ್ತ ಮೇಲ್ವಿಚಾರಕರು

**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (MNREGA) ಪ್ರತಿನಿಧಿ**
- MNREGA ಮೇಟಿ/ಕಾಯಕಬಂಧು

**ನೀರು ಮತ್ತು ನೈರ್ಮಲ್ಯ**
- ವಾಟರ್ ಮ್ಯಾನ್

**ಅಂಗವಿಕಲ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ**
- ಗ್ರಾಮ ಪುನರ್ವಸತಿ ಕಾರ್ಯಕರ್ತ, ಕಾಯಕಮಿತ್ರ

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**
- ಒಬ್ಬರು ಶಾಲಾ ಶಿಕ್ಷಕರು–ಬೋಧನೆ ಮತ್ತು ಇತರೆ ಶೈಕ್ಷಣಿಕ ಕಾರ್ಯದಲ್ಲಿ ಶ್ರೇಷ್ಠತೆ ಪಡೆದವರು.
- ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣೆ ಸಮಿತಿ (SDMC) ಅಧ್ಯಕ್ಷರು

**ಸರ್ಕಾರೇತರ ಸಂಸ್ಥೆ ಪ್ರತಿನಿಧಿಗಳು**
- ಆರೋಗ್ಯ ಅಥವಾ ಸಾಮಾಜಿಕ ಅಭಿವೃದ್ಧಿ ಕ್ಷೇತ್ರದಲ್ಲಿ ಸಕ್ರಿಯವಾಗಿ ಮತ್ತು ವಿಶ್ವಾಸಾರ್ಹವಾಗಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಯ ಒಬ್ಬ ಪ್ರತಿನಿಧಿ

**ಸ್ಥಳೀಯ ಪೊಲೀಸ್ ಪ್ರತಿನಿಧಿಗಳು**
- ಸ್ಥಳೀಯ ಠಾಣೆಯ ಅಧಿಕಾರಿ (SHO) ಅಥವಾ ಸ್ಥಳೀಯ ಆರಕ್ಷಕ ಠಾಣೆಯ ನಾಮನಿರ್ದೇಶಿತ ಪ್ರತಿನಿಧಿ

ಜಿಲ್ಲೆ ಅಥವಾ ತಾಲ್ಲೂಕಿನ ಆರೋಗ್ಯ ಸಂಗಮ ನೋಡಲ್ ಅಧಿಕಾರಿ ಮತ್ತು ಮೇಲೆ ಪ್ರಸ್ತಾಪಿಸಲಾಗಿರುವ ಇಲಾಖೆಗಳ ಇತರೆ ಕಾರ್ಯಕ್ರಮ ಅಧಿಕಾರಿಗಳು, ಮೇಲ್ವಿಚಾರಣಾ ಭೇಟಿಗಳ ಸಮಯದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸಭೆಗಳಿಗೆ ವಿಶೇಷ ಆಹ್ವಾನಿತರಾಗಿ ಹಾಜರಾಗಲು ಪ್ರೋತ್ಸಾಹಿಸಬೇಕು.

* ಆಯಾ ಸಹಯೋಗ ಇಲಾಖೆಗಳಿಂದ ಎಲ್ಲಾ ದತ್ತಾಂಶ/ಮಾಹಿತಿಯನ್ನು ಸಂಗ್ರಹಿಸುವ ಜವಾಬ್ದಾರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೇಲಿರುತ್ತದೆ. ಗ್ರಾಮ ಪಂಚಾಯಿತಿಯ ಡೇಟಾ ಎಂಟ್ರಿ ಆಪರೇಟರ್ (DEO) ದತ್ತಾಂಶವನ್ನು ಸಂಗ್ರಹಿಸಿ ಕ್ರೋಢೀಕರಣ ಮಾಡುವುದು. ಆರೋಗ್ಯ ಸಂಗಮ ತ್ರೈಮಾಸಿಕ ಸಭೆಗಳು ನಡೆಯುವ 10 ದಿನಗಳ ಮೊದಲು ಮಾಹಿತಿಯನ್ನು ಆರೋಗ್ಯ ಸಂಗಮ ಡಿಜಿಟಲ್ ಉಪಕರಣದಲ್ಲಿ ಅಳವಡಿಸಿ ದತ್ತಾಂಶ-ಆಧಾರಿತ ಚರ್ಚೆಗಳು ನಡೆಯುವಂತೆ ನೋಡಿಕೊಳ್ಳುವುದು.

## 3.3 ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರ ಆಯ್ಕೆಯ ಮಾನದಂಡಗಳು

ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ನಿರ್ದಿಷ್ಟ ಸಂಯೋಜನೆಯಲ್ಲಿ ಹಲವಾರು ಸದಸ್ಯರು ಪದನಿಮಿತ್ತ ಅಥವಾ ಗೊತ್ತುಪಡಿಸಿದ ಸಿಬ್ಬಂದಿಯಾಗಿರುತ್ತಾರೆ. ಇವರನ್ನು ಆಯಾ ಇಲಾಖೆಗಳ ಮೂಲಕ  ನಾಮನಿರ್ದೇಶನ ಮಾಡಲಾಗುತ್ತದೆ. ಇನ್ನು ಕೆಲವು ಸದಸ್ಯರನ್ನು ಅಂದರೆ, ಗ್ರಾಮ ಪಂಚಾಯಿತಿ ಸದಸ್ಯರು, ಸ್ವಸಹಾಯ ಸಂಘದ ಪ್ರತಿನಿಧಿಗಳು, ಶಾಲಾ ಶಿಕ್ಷಕರು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಸಮುದಾಯದ ಸದಸ್ಯರನ್ನು ಸರಿಯಾಗಿ ಗಮನಿಸಿ ಸೇರಿಸಲಾಗಿದೆ. ಈ ಪದನಿಮಿತ್ತವಲ್ಲದ ಪ್ರತಿನಿಧಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ವಸ್ತುನಿಷ್ಠ ಮಾನದಂಡ ಮತ್ತು ಸಮಾಲೋಚನಾ ಪ್ರಕ್ರಿಯೆಯನ್ನು ಅನುಸರಿಸಬೇಕು, ಈ ಮೂಲಕ ಆರೋಗ್ಯ ಮತ್ತು ಅದರ ಸಾಮಾಜಿಕ ನಿರ್ಧಾರಕ ಅಂಶಗಳಲ್ಲಿ ಪರಿವರ್ತನಾತ್ಮಕ ಬದಲಾವಣೆಗಳನ್ನು ತರಲು ಬದ್ಧರಾಗಿರುವ ಪ್ರೇರೇಪಿತ ಸದಸ್ಯರನ್ನು ಗುರುತಿಸಲಾಗುತ್ತದೆ ಮತ್ತು ನಾಮನಿರ್ದೇಶನ ಮಾಡಲಾಗುತ್ತದೆ. ಆಯ್ಕೆ ಮಾನದಂಡಗಳ ವಿವರಗಳನ್ನು **ಟೇಬಲ್-2** ನೀಡುತ್ತದೆ.

**ಟೇಬಲ್ 2 ಪದನಿಮಿತ್ತವಲ್ಲದ ಸದಸ್ಯರ ಆಯ್ಕೆಯ ಮಾನದಂಡಗಳು**

| ಸದಸ್ಯರ ಪ್ರಕಾರ | ಆಯ್ಕೆಯ ಮಾನದಂಡಗಳು |
|---|---|
| **ಗ್ರಾಮ ಪಂಚಾಯಿತಿ ಸದಸ್ಯರು** | ◆ ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH) ಚಟುವಟಿಕೆಗಳಿಗೆ ನಿಗದಿಪಡಿಸಿದ ಅನುದಾನವನ್ನು ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ ಬಳಕೆ ಮಾಡಿರಬೇಕು.<br>◆ ತಮ್ಮ ಕ್ಷೇತ್ರದಲ್ಲಿ ಪರಿಣಾಮಕಾರಿ ತೆರಿಗೆ ಸಂಗ್ರಹವನ್ನು ಸುಗಮಗೊಳಿಸಲು ಮತ್ತು ಖಚಿತಪಡಿಸಲು ಸಾಮರ್ಥ್ಯ ಉಳ್ಳವರಾಗಿರಬೇಕು.<br>◆ ಎಲ್ಲಾ ಗ್ರಾಮ ಪಂಚಾಯಿತಿಯ ಸಭೆಗಳು ಮತ್ತು ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶ ಸಮಿತಿ (VHSNC) ಸಭೆಗಳಲ್ಲಿ ಸಕ್ರಿಯ ಭಾಗವಹಿಸುವಿಕೆ ಇರುವವರು-ಕನಿಷ್ಠ ಶೇ.70 ರಷ್ಟು ಹಾಜರಾತಿ ಹೊಂದಿರಬೇಕು.<br>◆ ಗಾಂಧಿ ಗ್ರಾಮ ಪುರಸ್ಕಾರ ಕಾರ್ಯಕ್ರಮದಡಿಯಲ್ಲಿ ನಡೆಸಲಾದ ದಾಖಲಿತ ಮೌಲ್ಯಮಾಪನಗಳ ಆಧಾರದ ಮೇಲೆ ಹೆಚ್ಚಿನ ಕಾರ್ಯಕ್ಷಮತೆಯನ್ನು ಗುರುತಿಸುವುದು.<br>**ಇತರೆ ಪ್ರಮುಖ ಗುಣಗಳು**<br>◆ ಸಮುದಾಯದ ಸದಸ್ಯರನ್ನು ಪ್ರೇರೇಪಿಸುವ ಮತ್ತು ಸಂಘಟಿಸುವ ಸಾಮರ್ಥ್ಯ ಸೇರಿದಂತೆ ನಾಯಕತ್ವ ಗುಣಗಳು ಇರಬೇಕು.<br>◆ ಮೌಖಿಕ ಮತ್ತು ಬರಹ ರೂಪದ ಪರಿಣಾಮಕಾರಿ ಸಂವಹನ ಕೌಶಲ್ಯಗಳನ್ನು ಹೊಂದಿರಬೇಕು.<br>◆ ವಿವಿಧ ಇಲಾಖೆಗಳು ಮತ್ತು ಅಧಿಕಾರಿಗಳ ಜೊತೆಗೆ ಸಹಭಾಗಿತ್ವ ಮತ್ತು ಸಮನ್ವಯ ಸಾಧಿಸುವ ಸಾಮರ್ಥ್ಯ ಇರಬೇಕು. |
| **ಗ್ರಾಮ ಪಂಚಾಯಿತಿ ಸದಸ್ಯರು** | ◆ ಗ್ರಾಮ ಪಂಚಾಯಿತಿ ಮಟ್ಟದ ಸ್ವಸಹಾಯ ಸಂಘದ ಒಕ್ಕೂಟಗಳ ಅಧ್ಯಕ್ಷರು ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರಾಗಿ ನಾಮನಿರ್ದೇಶನಗೊಳ್ಳಬೇಕು. ನಂತರ ಅಧ್ಯಕ್ಷರು ಇಬ್ಬರು ಸ್ವಸಹಾಯ ಸಂಘದ ಸದಸ್ಯರನ್ನು ನಾಮನಿರ್ದೇಶನ ಮಾಡಬಹುದು.<br>◆ ನಾಯಕತ್ವ ಕೌಶಲ್ಯಗಳನ್ನು ಉಳ್ಳವರಾಗಿರಬೇಕು. ಅವರಲ್ಲಿ ಸಮುದಾಯ ಸದಸ್ಯರನ್ನು ಸಂಘಟಿಸುವ, ಪ್ರೇರೇಪಿಸುವ ಮತ್ತು ಸಜ್ಜುಗೊಳಿಸುವ ಪರಿಣಾಮಕಾರಿ ಮೌಖಿಕ ಮತ್ತು ಲಿಖಿತ ಸಂವಹನ ಕೌಶಲ್ಯಗಳನ್ನು ಹೊಂದಿರಬೇಕು. ಇತರ ಸದಸ್ಯರೊಂದಿಗೆ ಪರಸ್ಪರ ಸಹಕಾರ, ಅನುಭೂತಿವುಳ್ಳವರಾಗಿರಬೇಕು.<br>◆ ಗ್ರಾಮ ಪಂಚಾಯಿತಿಯಲ್ಲಿ ಕನಿಷ್ಠ 5 ವರ್ಷಗಳಿಗಿಂತ ಹೆಚ್ಚು ಕಾಲ ಕಾರ್ಯನಿರ್ವಹಿಸುತ್ತಿರುವ ಸ್ವಸಹಾಯ ಸಂಘದ ಸದಸ್ಯರಾಗಿರಬೇಕು.<br>◆ ಆರೋಗ್ಯ, ಘನತ್ಯಾಜ್ಯ ನಿರ್ವಹಣೆ, ಮಹಿಳಾ ಉದ್ಯಮಶೀಲತೆ, ಜೀವನೋಪಾಯ ಸಂಬಂಧಿತ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಣೆ, ಬಾಲ್ಯವಿವಾಹ, ಕೌಟುಂಬಿಕ ಹಿಂಸೆ ಮತ್ತು ಮದ್ಯಪಾನದಂತಹ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಹೆಚ್ಚಿನ ಕಾರ್ಯಕ್ಷಮತೆ ತೋರಿರಬೇಕು/ಕಾರ್ಯನಿರ್ವಹಣೆ ಅನುಭವವಿರುವವರು. |

| | |
|---|---|
| **ಸಮುದಾಯದ ಸದಸ್ಯರು** | **ಇವುಗಳನ್ನು ಒಳಗೊಳ್ಳುವುದು–**<br>◆ MCH ಮತ್ತು NCD ಸೇವೆ ಪಡೆದ SC/ST ಮಹಿಳಾ ಫಲಾನುಭವಿಗಳು.<br>◆ ಸಮುದಾಯ ಆರೋಗ್ಯ ಮತ್ತು ಅಭಿವೃದ್ಧಿ ವಿಷಯಗಳಲ್ಲಿ ಜ್ಞಾನವಿರುವವರು.<br>◆ ಸಾಮಾಜಿಕ ಅಭಿವೃದ್ಧಿಗೆ ಕೊಡುಗೆ ನೀಡಲು ಮತ್ತು ಬದಲಾವಣೆ ತರಲು ಸ್ವಇಚ್ಛೆಯಿರುವವರು.<br>◆ 21 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಯುವಕ ಸಂಘದ ಮುಖ್ಯಸ್ಥರು.<br>◆ ಒಬ್ಬರು ಹಿರಿಯ ಪುರುಷ ಅಥವಾ ಮಹಿಳೆ |
| **ಸರ್ಕಾರೇತರ ಸಂಸ್ಥೆಯ ಪ್ರತಿನಿಧಿ** | ◆ ಉತ್ತಮ ಸಮುದಾಯ ಸಂಪರ್ಕ ಹೊಂದಿರುವ ಮತ್ತು ದೀರ್ಘಕಾಲ ಸೇವೆ ಸಲ್ಲಿಸಿದವರು (ಕನಿಷ್ಠ 5–10 ವರ್ಷ).<br>◆ ಆರೋಗ್ಯ, ಮಹಿಳಾ ಸಬಲೀಕರಣ, ಅಥವಾ ಮಕ್ಕಳ, SC/ST ಕಲ್ಯಾಣ ಕ್ಷೇತ್ರದಲ್ಲಿ ಕೆಲಸದ ಅನುಭವ ಇರುವವರು.<br>◆ ಸರ್ಕಾರೇತರ ಸಂಸ್ಥೆಯಿಂದ ಮುಖ್ಯ ಕಾರ್ಯನಿರ್ವಹಣಾಧಿಕಾರಿ/ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ ಇವರಿಂದ ಅನುಮೋದಿತ ವ್ಯಕ್ತಿಯಾಗಿರಬೇಕು. |

## 3.4 ಪುನರ್‌ರಚನೆಯ ಪ್ರಕ್ರಿಯೆಗಳು

ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಪುನರ್‌ರಚನೆಯು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ (PDO) ಜವಾಬ್ದಾರಿಯಾಗಿರುತ್ತದೆ. ಈ ಪ್ರಕ್ರಿಯೆ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸಹಾಯಕ ನಿರ್ದೇಶಕರ ನಿಕಟ ಮೇಲ್ವಿಚಾರಣೆಯಲ್ಲಿ ಕೈಗೊಳ್ಳುತ್ತಾರೆ. ಗ್ರಾಮ ಪಂಚಾಯಿತಿ ಕಾರ್ಯಪಡೆಗಳನ್ನು ಯಶಸ್ವಿಯಾಗಿ ಪುನರ್‌ರಚಿಸುವಲ್ಲಿ ಈ ಕೆಳಗಿನ ಪ್ರಮುಖ ಹಂತಗಳು ಗ್ರಾಮ ಪಂಚಾಯಿತಿಗಳಿಗೆ ಮಾರ್ಗದರ್ಶನವಾಗಿರುತ್ತವೆ:

**ಬಾಕ್ಸ್: 2 ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಪುನರ್‌ರಚನೆಗಾಗಿ ಯೋಜನೆಗಳು**

**ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಪ್ರಮುಖ ಅಂಶಗಳು**

- **ಜಾಗರೂಕರಾಗಿ ಆಯ್ಕೆ ಮಾಡಿ:** ಸಮುದಾಯದ ಅಭಿವೃದ್ಧಿಗೆ ಬದ್ಧರಾಗಿರುವ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಸೂಕ್ತ ಸಮಯ ತೆಗೆದುಕೊಳ್ಳಿ. ವೈಯಕ್ತಿಕ ಹಿತಾಸಕ್ತಿಗಳಿಗೆ ಆದ್ಯತೆ ನೀಡುವವರನ್ನು ಕೈಬಿಡಿ.
- **ಸಂಪರ್ಕ ಜಾಲಗಳ ಬಳಸಿಕೊಳ್ಳುವುದು (ಲಿವರೇಜ್ ನೆಟ್‌ವರ್ಕ್):** ಕ್ರಿಯಾಶೀಲ ಮತ್ತು ಪ್ರೇರಿತ ಸ್ವಸಹಾಯ ಸಂಘಗಳು, ಸರ್ಕಾರೇತರ ಸಂಘಗಳ ಪ್ರತಿನಿಧಿಗಳು ಮತ್ತು ಸಮುದಾಯದ ಸದಸ್ಯರನ್ನು ಗುರುತಿಸಲು ಸ್ಥಾಪಿತ ಸಂಪರ್ಕಗಳನ್ನು ಬಳಸಿ. ಉದಾಹರಣೆಗೆ: ಸ್ವಸಹಾಯ ಸಂಘದ ಒಕ್ಕೂಟಗಳು, ಸರ್ಕಾರೇತರ ಸಂಘಗಳು, ಯುವ ಗುಂಪುಗಳು, ಆಶಾ/ಅಂಗನವಾಡಿ ಕಾರ್ಯಕರ್ತೆಯರು, ಎನ್‌ಜಿಒಗಳು, ಎಸ್‌ಸಿ/ಎಸ್‌ಟಿ ಸಂಘಗಳು ಮತ್ತು ಅನೌಪಚಾರಿಕ ವೇದಿಕೆಗಳಾದ ವಾಟ್ಸಾಪ್ ಗುಂಪುಗಳು.
- **ಸ್ಥಳೀಯ ನಾಯಕರನ್ನು ತೊಡಗಿಸಿಕೊಳ್ಳಿ:** ಸ್ವಯಂಸೇವಕರು ಮತ್ತು ಸಮುದಾಯದೊಡನೆ ಬಲವಾದ ಸಂಪರ್ಕವುಳ್ಳ ತಳಮಟ್ಟದ ನಾಯಕರ ಸಹಾಯ ಪಡೆಯಿರಿ. ಅವರು ತಮ್ಮ ಗುಂಪುಗಳನ್ನು ಪರಿಚಯಿಸಬಹುದು ಮತ್ತು ಇತರ ಸಂಬಂಧಿತ ಸಂಪರ್ಕಗಳನ್ನು ಸೂಚಿಸಬಹುದು.
- **ಜಾಗೃತಿ ಮೂಡಿಸುವುದು:** ಗ್ರಾಮದ/ಸಮುದಾಯದ ಸಾಮೂಹಿಕ ಅಭಿವೃದ್ಧಿಗಾಗಿ ಗ್ರಾಮ ಪಂಚಾಯಿತಿ ಕಾರ್ಯಪಡೆಗಳಲ್ಲಿ ಭಾಗವಹಿಸಲು ಸಮರ್ಥ ಸಮುದಾಯದ ಸದಸ್ಯರಿಗೆ ಸಕ್ರಿಯವಾಗಿ ಮಾಹಿತಿ ನೀಡಿ ಮತ್ತು ಪ್ರೋತ್ಸಾಹಿಸಿ.

### ಗ್ರಾಮ ಪಂಚಾಯಿತಿಗಳಿಗಾಗಿ ಗ್ರಾಮ ಪಂಚಾಯಿತಿ ಕಾರ್ಯಪಡೆಗಳನ್ನು ಪುನರ್‌ರಚಿಸುವ ಹಂತಗಳು

**1. ಜಾಗೃತಿ ಕಾರ್ಯಕ್ರಮಗಳ ಆಯೋಜನೆ**

- ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಿ.ಡಿ.ಒ/PDO ಮಾಸಿಕ ಸಾಮಾನ್ಯ ಸಭೆಯಲ್ಲಿ ಎಲ್ಲಾ ಸದಸ್ಯರಿಗೆ ಆರೋಗ್ಯ ಸಂಗಮ ಯೋಜನೆ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಕಾರ್ಯಗಳು ಮತ್ತು ಪುನರ್‌ರಚನೆ ಪ್ರಕ್ರಿಯೆ ಕುರಿತು ಮಾಹಿತಿ ನೀಡುತ್ತಾರೆ.
- ಈ ಸಭೆಯಲ್ಲಿ ಎಲ್ಲಾ ಗ್ರಾಮ ಪಂಚಾಯಿತಿ ಪ್ರತಿನಿಧಿಗಳು ಪುನರ್‌ರಚನೆ ಪ್ರಕ್ರಿಯೆಯ ಅಗತ್ಯತೆ ಮತ್ತು ಪ್ರಕ್ರಿಯೆಯ ಹಂತಗಳು ಕುರಿತು ಮಾಹಿತಿ ಪಡೆಯುತ್ತಾರೆ.

**2. ಗ್ರಾಮ ಪಂಚಾಯಿತಿ ಸದಸ್ಯರ ಆಯ್ಕೆ**

- ಸರಿಸುಮಾರು ನಾಲ್ಕು ಗ್ರಾಮ ಪಂಚಾಯಿತಿ ಸದಸ್ಯರನ್ನು ಆರಂಭದಲ್ಲಿ ಆಯ್ಕೆ ಮಾಡಿ ಪುನರ್‌ರಚಿಸಲಾದ ಕಾರ್ಯಪಡೆಗೆ ಸೇರಿಸುವುದು.
- ಈ ಸದಸ್ಯರ ಆಯ್ಕೆಯು ನಿರ್ದಿಷ್ಟಪಡಿಸಿದ ಮಾನದಂಡಗಳಿಗೆ ಅನುಗುಣವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ.
- ಈ ಸದಸ್ಯರ ಸೇವೆ ಆರು ತಿಂಗಳುಗಳು. ಉಳಿದ ಸದಸ್ಯರ ಮತ್ತೊಂದು ತಂಡವನ್ನು ಆಯ್ಕೆ ಮಾಡಬೇಕಾಗುತ್ತದೆ.

### 3. ಪದನಿಮಿತ್ತ ಸದಸ್ಯರ ಪಟ್ಟಿ ತಯಾರಿಸಿ ಮತ್ತು ಸಂಬಂಧಿಸಿದ ತಾಲ್ಲೂಕು ಅಧಿಕಾರಿಗಳೊಡನೆ ನಾಮನಿರ್ದೇಶನಕ್ಕಾಗಿ ಸಂಯೋಜನೆ ಮಾಡುವುದು

- ಪಿಡಿಒ/PDO ಮಾರ್ಗಸೂಚಿಗಳಲ್ಲಿ ವಿವರಿಸಿರುವಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಪದನಿಮಿತ್ತ ಸದಸ್ಯರ ಮತ್ತು ಮುಂಚೂಣಿ ಕಾರ್ಯಕರ್ತರ ಪಟ್ಟಿಯನ್ನು ತಯಾರಿಸುವುದು.
- ಪ್ರಸ್ತಾಪಿತ ಪಟ್ಟಿಯ ಸದಸ್ಯರನ್ನು ಸಂಬಂಧಿತ ಇಲಾಖೆಗಳ ಅಧಿಕಾರಿಗಳೊಂದಿಗೆ ಅಂದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಖಅಆಖ, ಶಿಕ್ಷಣ ಮತ್ತು ಪೊಲೀಸ್ ಮುಂತಾದ ಇಲಾಖೆಗಳ ತಾಲ್ಲೂಕು ಅಧಿಕಾರಿಗಳನ್ನು ಸಂಪರ್ಕಿಸಿ ಗ್ರಾಮ ಪಂಚಾಯಿತಿ ಕಾರ್ಯಪಡೆಗೆ ಇಲಾಖಾ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡುವ ಕುರಿತು ಚರ್ಚೆ ಮಾಡುವುದು.
- ಈ ನಾಮನಿರ್ದೇಶಿತ ಪ್ರತಿನಿಧಿಗಳು ಗ್ರಾಮ ಪಂಚಾಯಿತಿ ಕಾರ್ಯಪಡೆಗೆ ಸಂಬಂಧಿತ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವರೋ ಎಂಬುದರ ಬಗ್ಗೆ ಖಚಿತಪಡಿಸಿಕೊಳ್ಳುವುದು.

### 4. ಸರ್ಕಾರೇತರ ಸಂಸ್ಥೆ ಪ್ರತಿನಿಧಿ ಪಟ್ಟಿ ಮತ್ತು ನಾಮನಿರ್ದೇಶನ

- ಪಿ.ಡಿ.ಒ/PDO ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರು ಒಳ್ಳೆಯ ವಿಶ್ವಾಸಾರ್ಹತೆಯುಳ್ಳ ಮತ್ತು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯಶಸ್ವಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ ದಾಖಲೆಯೊಂದಿಗೆ ಕನಿಷ್ಠ ಐದು ವರ್ಷಗಳ ಅನುಭವ ಹೊಂದಿದ ಎರಡು ಸರ್ಕಾರೇತರ ಸಂಸ್ಥೆಗಳನ್ನು ಗುರುತಿಸುವುದು.
- ಈ ಸರ್ಕಾರೇತರ ಸಂಸ್ಥೆಗಳಲ್ಲಿ ಕಾರ್ಯಪಡೆಯ ಸಭೆಗಳಲ್ಲಿ ಭಾಗವಹಿಸಲು ಇಚ್ಛಿಸುವ ಪ್ರತಿನಿಧಿ ಮತ್ತು ಸಹಾಯ ಮಾಡುವುದರ ಜೊತೆಗೆ ಸಮುದಾಯ ಸಂಘಟನೆಯಲ್ಲಿ ಭಾಗವಹಿಸುವವರನ್ನು ನಾಮನಿರ್ದೇಶನ ಮಾಡುವುದು.
- ಈ ಆಯ್ಕೆಗೆ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಅವರ ಅನುಮೋದನೆ ಪಡೆಯುವುದು.

### 5. ಸ್ವಸಹಾಯ ಸಂಘ ಪ್ರತಿನಿಧಿಗಳ ಆಯ್ಕೆ

- ಗ್ರಾಮ ಪಂಚಾಯಿತಿ ಮಟ್ಟದ ಸ್ವಸಹಾಯ ಸಂಘ ಒಕ್ಕೂಟದ ಅಧ್ಯಕ್ಷರನ್ನು ಮತ್ತು ಇಬ್ಬರು ಸ್ವಸಹಾಯ ಸಂಘ ಸದಸ್ಯರನ್ನು ಪಿ.ಡಿ.ಒ/PDO ರವರು ನಾಮನಿರ್ದೇಶನ ಮಾಡುತ್ತಾರೆ.
- ಪ್ರತಿನಿಧಿಗಳು ಗ್ರಾಮ ಪಂಚಾಯಿತಿ ಕಾರ್ಯಪಡೆ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ ಎಂದು ಪಿ.ಡಿ.ಒ/PDO ಖಚಿತಪಡಿಸಿಕೊಳ್ಳುತ್ತಾರೆ.

### 6. ಸಮುದಾಯದ ಸದಸ್ಯರ ಆಯ್ಕೆ

- ಪಿ.ಡಿ.ಒ/PDO ಸ್ಥಳೀಯ ಸಮುದಾಯದೊಂದಿಗೆ ತೊಡಗಿಸಿಕೊಳ್ಳುತ್ತಾರೆ. ಏಪ್ರಿಲ್ ತಿಂಗಳಲ್ಲಿ ನಡೆಯುವ ಗ್ರಾಮ ಸಭೆಯ ಅಧಿವೇಶನದಲ್ಲಿ ಆರೋಗ್ಯ ಸಂಗಮ ಯೋಜನೆ ಮತ್ತು ಗ್ರಾಮ ಪಂಚಾಯಿತಿ ಕಾರ್ಯಪಡೆಗಳನ್ನು ಪರಿಚಯಿಸುವುದು. ಈ ಅಧಿವೇಶನದಲ್ಲಿ, ಪಿ.ಡಿ.ಒ/PDOs ಸಮುದಾಯದ ಸದಸ್ಯರನ್ನು ಆಸಕ್ತಿ ಹೊಂದಿರುವ ಸ್ವಯಂಸೇವಕರ ಹೆಸರುಗಳನ್ನು ಸೂಚಿಸಲು ಕೋರುತ್ತಾರೆ/ಆಹ್ವಾನಿಸಲಾಗುತ್ತದೆ. ನಾಯಕತ್ವ ಗುಣಗಳು, ಪರಿಣಾಮಕಾರಿ ಸಂವಹನ, ಆರೋಗ್ಯ ಮತ್ತು ಅಭಿವೃದ್ಧಿಯಲ್ಲಿ ಅನುಭವ ಹೊಂದಿರುವ ಸದಸ್ಯರನ್ನು ಪ್ರಾಥಮ್ಯವಾಗಿ ಗುರುತಿಸುವುದು.
- ಸಮುದಾಯ ಆರೋಗ್ಯ ಮತ್ತು ಅಭಿವೃದ್ಧಿ ವಿಷಯಗಳ ಬಗ್ಗೆ ಜ್ಞಾನವುಳ್ಳ, ಸಮುದಾಯದೊಳಗೆ ಗುರುತಿಸಿಕೊಂಡಿರುವ ಮತ್ತು ಸಾಮಾಜಿಕ ಅಭಿವೃದ್ಧಿಗೆ ಕೊಡುಗೆ ನೀಡಲು ಇಚ್ಛಿಸುವ ಹಿರಿಯ ವ್ಯಕ್ತಿಗಳು ಮತ್ತು MCH/NCD ಪಡೆದ ಫಲಾನುಭವಿಗಳನ್ನು ASHA/PHCOಗಳ ಶಿಫಾರಸುಗಳ ಆಧಾರದ ಮೇಲೆ ನಾಮನಿರ್ದೇಶನ ಮಾಡಬಹುದು.
- ಗ್ರಾಮ ಪಂಚಾಯಿತಿ ಆರೋಗ್ಯ ಕಾರ್ಯಪಡೆಗೆ ಮಹಿಳಾ ಮತ್ತು ಬಾಲ ವಿಕಾಸ ಸಮಿತಿ ಅಧ್ಯಕ್ಷರನ್ನು ನಾಮನಿರ್ದೇಶನ ಮಾಡಲು ವಿವರಗಳನ್ನು ಅಂಗನವಾಡಿ ಕಾರ್ಯಕರ್ತೆಯರು ಒದಗಿಸುವುದು.

### 7. ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಸಂಯೋಜನೆ ಅನುಮೋದನೆ ಮತ್ತು ಸಾಮಾನ್ಯ ಸಭೆ/ಗ್ರಾಮ ಸಭೆಯಲ್ಲಿ ಅದರ ಪ್ರಕಟಣೆ

- ಅಂತಿಮಗೊಳಿಸಿದ ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರ ಹೆಸರುಗಳನ್ನು ಸಿದ್ಧಪಡಿಸಿ ಸಾಮಾನ್ಯ ಸಭೆಯಲ್ಲಿ ಚರ್ಚೆಗಾಗಿ ಪ್ರಸ್ತುತಪಡಿಸಲಾಗುತ್ತದೆ.
- ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ರಚನೆಯ ನಿರ್ಣಯವನ್ನು ಮುಂಬರುವ ಗ್ರಾಮ ಸಭೆಯ ಅಂತಿಮ ಅನುಮೋದನೆಗಾಗಿ ಮಂಡಿಸಲಾಗುವುದು.


### 8. ಗ್ರಾಮ ಪಂಚಾಯಿತಿ ಕಾರ್ಯಪಡೆ ಬಗ್ಗೆ ಸಮುದಾಯದಲ್ಲಿ ಅರಿವು ಮೂಡಿಸುವುದು

- ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಅಸ್ತಿತ್ವ, ಕಾರ್ಯಗಳು ಮತ್ತು ಅನುಷ್ಠಾನ ಚಟುವಟಿಕೆಗಳ ಬಗ್ಗೆ ಸಮುದಾಯದಲ್ಲಿ ಅಲ್ಪ ಅರಿವು ಇದೆ ಎಂಬುದು ಕಂಡುಬಂದಿರುವ ಹಿನ್ನೆಲೆಯಲ್ಲಿ, ಪಿ.ಡಿ.ಒ/PDOs ಹಾಗೂ ಗ್ರಾಮ ಪಂಚಾಯಿತಿ ಪ್ರತಿನಿಧಿಗಳು ಪ್ರಮುಖ ಪಾತ್ರವಹಿಸುತ್ತಾರೆ. ಅವರು ಪಂಚಾಯತ್ ರಾಜ್ ಇಲಾಖೆಯ ಆರೋಗ್ಯ ಸಂಗಮ ಉಪಕ್ರಮ, ಕಾರ್ಯಪಡೆಗಳ ಪ್ರಮುಖ ಕಾರ್ಯಗಳು, ಹಾಗೂ ತಳಮಟ್ಟದಲ್ಲಿ ಕಾರ್ಯಪಡೆಗಳ ನೇತೃತ್ವದಲ್ಲಿ ನಡೆಯುವ ಚಟುವಟಿಕೆಗಳ ಅನುಷ್ಠಾನದಲ್ಲಿ ಸಮುದಾಯಕ್ಕೆ ನೀಡಬಹುದಾದ ಬೆಂಬಲ ಮತ್ತು ಪಾಲ್ಗೊಳ್ಳುವಿಕೆಯ ಕುರಿತು ಸಮುದಾಯಕ್ಕೆ ಸ್ಪಷ್ಟ ಮಾಹಿತಿ ನೀಡಬೇಕು. ಆದ್ದರಿಂದ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಬಗ್ಗೆ ಮಾಹಿತಿಯನ್ನು ಸಮುದಾಯಕ್ಕೆ ಪರಿಣಾಮಕಾರಿಯಾಗಿ ತಿಳಿಸದೇ ಪುನರ್ರಚನೆ ಪ್ರಕ್ರಿಯೆಯನ್ನು ಸಂಪೂರ್ಣವೆಂದು ಪರಿಗಣಿಸಲಾಗುವುದಿಲ್ಲ. ಸಮುದಾಯ ಜಾಗೃತಿ ಮೂಡಿಸಲು ಗ್ರಾಮ ಪಂಚಾಯಿತಿಗಳು ಈ ಕೆಳಗಿನ ಕಾರ್ಯವಿಧಾನಗಳನ್ನು ಅನುಸರಿಸಬಹುದು:
- ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಅಂದರೆ, PHC, ಅಂಗನವಾಡಿ ಕೇಂದ್ರಗಳು, ಪಂಚಾಯತ್ ಭವನಗಳು, ಗ್ರಂಥಾಲಯಗಳು, ಶಾಲೆಗಳು, ಸಮುದಾಯ ಸಭಾಂಗಣಗಳು, ಬಸ್ ನಿಲ್ದಾಣ ಮುಂತಾದ ಕಡೆಗಳಲ್ಲಿ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಮಾಹಿತಿಯನ್ನು ಪ್ರಸಾರ ಮಾಡಬೇಕು/ಮಾಹಿತಿ ಫಲಕಗಳನ್ನು ಅಳವಡಿಸಬೇಕು.

- ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸದಸ್ಯ ಹೆಸರುಗಳನ್ನು ಗ್ರಾಮ ಪಂಚಾಯಿತಿ ಸೂಚನೆ ಫಲಕಗಳಲ್ಲಿ ಲಗತ್ತಿಸಬೇಕು.
- ಗ್ರಾಮ ಮಟ್ಟದಲ್ಲಿ ಸಾರ್ವಜನಿಕ ಪ್ರಕಟಣೆ (ಡಂಗುರ) ಮೂಲಕ ಮಾಹಿತಿಯನ್ನು ವ್ಯಾಪಕವಾಗಿ ಪ್ರಸಾರ ಮಾಡಬೇಕು.
- ಅರಿವು ಮೂಡಿಸಲು ಕಲಾಜಾಥಾಗಳನ್ನು (ಬೀದಿ ಪ್ರದರ್ಶನಗಳು) ಏರ್ಪಡುಸುವುದು. ಜೊತೆಗೆ ಆರೋಗ್ಯ ಸಂಗಮ ಅನುದಾನದ ಬಗ್ಗೆ ಸಹ ತಿಳಿಸುವುದು.
- ತ್ಯಾಜ್ಯ ನಿರ್ವಹಣೆ/ಸಂಗ್ರಹಣೆ ವಾಹನಗಳ ಮೂಲಕ ಸಂದೇಶ ತಲುಪಿಸುವುದು ಮತ್ತು ಜಾಗೃತಿ ಮೂಡಿಸುವುದು.
- ಜಾಗೃತಿ ಮೂಡಿಸಲು ಮತ್ತು ಸಮುದಾಯವನ್ನು ಸಜ್ಜುಗೊಳಿಸಲು ಸ್ವಸಹಾಯ ಸಂಘ ಸದಸ್ಯರನ್ನು ತೊಡಗಿಸಿಕೊಳ್ಳುವುದು.
- ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಕೈಗೊಂಡ ನಿರ್ಧಾರಗಳು ಮತ್ತು ಪ್ರಮುಖ ಕ್ರಮಗಳ ಬಗ್ಗೆ ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಎಲೆಕ್ಟ್ರಾನಿಕ್ ಪ್ರದರ್ಶನಗಳು ಮೂಲಕ ನಿರಂತರ ಮಾಹಿತಿ ನೀಡುವುದು.



# ಭಾಗ 4 ಗ್ರಾಮ ಪಂಚಾಯಿತಿ ಕಾರ್ಯಪಡೆ ಪಾತ್ರ ಮತ್ತು ಜವಾಬ್ದಾರಿಗಳು




**ಚಿತ್ರ 4 ಗ್ರಾಮ ಪಂಚಾಯಿತಿ ಕಾರ್ಯಪಡೆ ಪಾತ್ರಗಳು ಮತ್ತು ಕಾರ್ಯಕ್ಷೇತ್ರ**

ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಮೂರು ಪ್ರಮುಖ ಕಾರ್ಯಕ್ಷೇತ್ರಗಳ ಮೇಲೆ ಕೇಂದ್ರೀಕರಿಸುವ ನಿರೀಕ್ಷೆಯಿದೆ. ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH), ಸೇವೆಗಳು ಮತ್ತು ಸರ್ಕಾರಿ ಯೋಜನೆಗಳ ಲಭ್ಯತೆ (ನೀಡಲಾದ ಪ್ರಯೋಜನಗಳು ಮತ್ತು ಅರ್ಹತೆಗಳು) ಹಾಗೆಯೇ ಸಾಮಾಜಿಕ ಸಮಸ್ಯೆಗಳು (ಬಾಲ್ಯ ವಿವಾಹ ಮತ್ತು ಮಾದಕವಸ್ತು ಬಳಕೆ) ಈ ಕ್ಷೇತ್ರಗಳನ್ನು ಆರೋಗ್ಯ ಸಂಗಮದಲ್ಲಿ ಸಾಮೂಹಿಕ ಅನುಷ್ಠಾನಕ್ಕೆ ಆದ್ಯತಾ ಕ್ಷೇತ್ರಗಳೆಂದು ಗುರುತಿಸಲಾಗಿದೆ. ಪ್ರತಿಯೊಂದು ಕ್ಷೇತ್ರಕ್ಕೂ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಸಂಬಂಧಿತ ಭಾಗೀದಾರರೊಂದಿಗೆ ಸಹಕರಿಸುತ್ತವೆ, ಸಮುದಾಯವನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತವೆ, ಸಂಘಟಿಸುತ್ತವೆ, ಆದ್ಯತೆಯ ಸಮಸ್ಯೆಗಳನ್ನು ಗುರುತಿಸುತ್ತವೆ, ಪರಿಹಾರಗಳನ್ನು ಸೂಚಿಸುತ್ತವೆ, ಕ್ರಿಯಾ ಯೋಜನೆಗಳನ್ನು ಅಭಿವೃದ್ಧಿಪಡಿಸುತ್ತವೆ, ಕಾರ್ಯಗತಗೊಳಿಸುತ್ತವೆ ಮತ್ತು ಹೆಚ್ಚುವರಿ ಸಂಪನ್ಮೂಲಗಳ ಬೆಂಬಲವನ್ನು ಒದಗಿಸಲು ವ್ಯವಸ್ಥೆಯ ಸಂಪರ್ಕಗಳನ್ನು ಬಲಪಡಿಸುತ್ತವೆ.

ಆರೋಗ್ಯ ಸಂಗಮ ಪ್ರಾಯೋಗಿಕ ಹಂತದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ನಿರ್ದಿಷ್ಟ ಪಾತ್ರಗಳು ಮತ್ತು ಜವಾಬ್ದಾರಿಗಳು ಕೆಳಕಂಡಂತೆ ಇರುತ್ತವೆ:

## 4.1 ಪಾತ್ರ ಮತ್ತು ಜವಾಬ್ದಾರಿಗಳು

**ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರು**

- ಸಮುದಾಯದ ಅಭಿವೃದ್ಧಿಗಾಗಿ ಸ್ಥಳೀಯ ಸ್ವಯಂಸೇವಕರು, ಸರ್ಕಾರೇತರ ಸಂಸ್ಥೆಗಳು, ಸ್ವಸಹಾಯ ಸಂಘಗಳು, ತಳಹಂತದ ನಾಯಕರು, ಮತ್ತು ಸಮುದಾಯ ಗುಂಪುಗಳೊಡನೆ ಸಹಯೋಗ ಮತ್ತು ಸಂಪರ್ಕಗಳನ್ನು ಬಲಪಡಿಸಿ, ಸಾಮಾಜಿಕ ಪ್ರಗತಿ, ಪರಿಸರ ಮತ್ತು ವರ್ತನಾ ಬದಲಾವಣೆಗಳಿಗೆ ಒತ್ತಾಯಿಸುವುದು.
- ಸರ್ಕಾರದ ಯೋಜನೆಗಳು, ಆರೋಗ್ಯ ಮತ್ತು ನೀರು, ನೈರ್ಮಲ್ಯ, ಶುಚಿತ್ವ (WASH) ಸೇವೆಗಳ ಕುರಿತು ಜಾಗೃತಿ ಮೂಡಿಸುವುದು. ಬಾಲ್ಯವಿವಾಹ, ಕೌಟುಂಬಿಕ ಹಿಂಸೆ ಮತ್ತು ಮಾದಕ ವಸ್ತು ಬಳಕೆಯಂತಹ ಸಾಮಾಜಿಕ ಸಮಸ್ಯೆಗಳನ್ನು ನಿಯಂತ್ರಿಸಲು ಆದ್ಯತೆ ನೀಡುವುದು

- ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH), ಆರೋಗ್ಯ, ಪೌಷ್ಟಿಕಾಂಶ ಆಹಾರ ಮತ್ತು ಸಾಮಾಜಿಕ ಭದ್ರತೆ ಸೇವೆಗಳ ಲಭ್ಯತೆ ಸವಾಲುಗಳನ್ನು ಗುರುತಿಸಿ, ಹಿಂದುಳಿದ ಸಮುದಾಯಗಳಿಗೆ ಮಾರ್ಗದರ್ಶನ ನೀಡುವುದು ಮತ್ತು ಅವುಗಳ ಪ್ರಯೋಜನ ಲಭಿಸುವುದನ್ನು ಖಚಿತಪಡಿಸಿಕೊಳ್ಳುವುದು.
- ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು ಅಂದರೆ, ಕಸ ಮತ್ತು ಘನತ್ಯಾಜ್ಯ ನಿರ್ವಹಣೆಯಂತಹ ಸಮುದಾಯ ಜಾಗೃತಿ ಕಾರ್ಯಕ್ರಮಗಳು, ಕಸ ವಿಂಗಡಣೆ, ದೈನಂದಿನ ಸಂಗ್ರಹಣೆ, ಪ್ರೋತ್ಸಾಹಕಗಳು, ದಂಡ ಸಂಗ್ರಹ ಹಾಗೂ ಸಮುದಾಯದ ಹೊಣೆಗಾರಿಕೆಯನ್ನು ಹೆಚ್ಚಿಸುವಂತೆ ಮೇಲ್ವಿಚಾರಣೆ. ಹಾಗೂ ಸ್ವಸಹಾಯ ಸಂಘಗಳು ಭಾಗವಹಿಸುವಂತೆ ಮಾಡುವುದು.
- ಸಮುದಾಯ ಜಾಗೃತಿ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿಗಳ ನೆರವು ಪಡೆಯುವುದು. ವಿಸ್ತರಣಾ ಚಟುವಟಿಕೆಗಳಾದ ಯೋಜನೆ ನೋಂದಣಿ ಶಿಬಿರ, ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸುವುದು ಮತ್ತು ಸಮುದಾಯ ಈ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮನವೊಲಿಸುವುದು.
- ರೋಗ ನಿಗಾವಣೆ, ತುರ್ತು ಆರೋಗ್ಯ ನಿರ್ವಹಣೆ, ಸುರಕ್ಷಿತ ಕುಡಿಯುವ ನೀರು ಬಳಕೆಗೆ ಉತ್ತೇಜನ, ಮನೆ ಭೇಟಿಗಳ ಮೂಲಕ ಆರೋಗ್ಯಕರ ನಡವಳಿಕೆಗಳನ್ನು ಪ್ರೋತ್ಸಾಹಿಸುವುದು, ಮನೆ ಆಧಾರಿತ ಆರೈಕೆಯನ್ನು ಒದಗಿಸುವುದು ಮತ್ತು ರೋಗನಿರೋಧಕ ಲಸಿಕೆ, ಕುಟುಂಬ ಯೋಜನೆ ಮತ್ತು ಅಸಾಂಕ್ರಾಮಿಕ ರೋಗಗಳ ತಪಾಸಣೆಗಳಂತಹ ಸೇವೆಗಳನ್ನು ನೀಡಲು ಮುಂಚೂಣಿ ಕಾರ್ಯಕರ್ತರಾದ ASHA, PHCO, CHO ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಸಹಾಯ ಮಾಡುವುದು.
- ಸಮುದಾಯ ಸಂಘಟನೆಗಳಾದ VHSNCಗಳು, ಜನ ಆರೋಗ್ಯ ಸಮಿತಿಗಳು (JAS), ಕಾವಲು ಸಮಿತಿ ಸಭೆ, SDMCಗಳು ಮತ್ತು ಸ್ವಸಹಾಯ ಸಂಘಗಳ ಸಭೆಗಳಿಗೆ ನೆರವು ನೀಡುವುದು ಮತ್ತು ಪ್ರಗತಿ ಪರಿಶೀಲನೆ ಮಾಡುವುದು. ತ್ರೈಮಾಸಿಕ ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಸಭೆಗಳಲ್ಲಿ ಕ್ರಮ ವಹಿಸಬೇಕಾದ ವಿಷಯಗಳು, ಸಂಪನ್ಮೂಲಗಳು ಮತ್ತು ನಿರ್ಧಾರಗಳ ಬಗ್ಗೆ ಗಮನಹರಿಸುವುದು.
- ಮಧ್ಯೆದಲ್ಲಿ ಮಕ್ಕಳು ಶಾಲೆ ಬಿಡುವುದನ್ನು ತಡೆಗಟ್ಟುವುದು, ಶಾಲಾ ಹಾಜರಾತಿ ಹೆಚ್ಚಿಸುವುದು ಮತ್ತು ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಮುಖ್ಯೋಪಾಧ್ಯಾಯರು/ಶಾಲಾ ಶಿಕ್ಷಕರಿಗೆ ಸಹಾಯ ಮಾಡುವುದು.
- ಗ್ರಾಮೀಣ ಆರೋಗ್ಯ ಸೌಲಭ್ಯಗಳು, ಅಂಗನವಾಡಿ ಕೇಂದ್ರಗಳು ಅಥವಾ ಶಾಲೆಗಳ ನಿರ್ವಹಣೆಯ ಅಥವಾ ಸುಗಮ ಕಾರ್ಯನಿರ್ವಹಣೆಯಲ್ಲಿ ಇರುವ ಸವಾಲುಗಳನ್ನು ಗುರುತಿಸುವುದು ಮತ್ತು ಸಂಪನ್ಮೂಲಗಳನ್ನು ಒದಗಿಸುವುದು. ಅವುಗಳ ಸುಗಮ ಕಾರ್ಯನಿರ್ವಹಣೆಗೆ ನೆರವು ನೀಡುವುದು.
- ಆರೋಗ್ಯ ಮತ್ತು ಸಾಮಾಜಿಕ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಪರಿಣಾಮಕಾರಿತ್ವದ ಬಗ್ಗೆ ನಿಗಾವಹಿಸುವುದು. ಅಂತರವನ್ನು ಗುರುತಿಸುವುದು ಮತ್ತು ಸಂಪನ್ಮೂಲ ಬಳಕೆ ಹಾಗೂ ಸೇವೆಗಳ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸುವುದು.
- ಪ್ರತಿ ಮೂರು ತಿಂಗಳಿಗೊಮ್ಮೆ ಗ್ರಾಮ ಪಂಚಾಯಿತಿಯಲ್ಲಿ ಸಭೆ ನಡೆಸಿ, ಸೇವೆಗಳ ಲಭ್ಯತೆಯ ಅಂತರವನ್ನು ಗುರುತಿಸುವುದು, ಆದ್ಯತೆಗಳನ್ನು ಗಮನಿಸುವುದು, ಕ್ರಿಯಾಯೋಜನೆಗಳನ್ನು ರಚಿಸುವುದು, ಸಮುದಾಯದ ಅಭಿವೃದ್ಧಿ ಮತ್ತು ಯೋಗಕ್ಷೇಮಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು
- ಆರೋಗ್ಯ ಸಂಗಮ ನಿಗಾವಣೆ (ಟ್ರ್ಯಾಕಿಂಗ್), ಕ್ರಿಯಾಯೋಜನೆ ಮತ್ತು ಪರಿಶೀಲನಾ ಪರಿಕರಗಳನ್ನು ಬಳಸಿ, ಮಾಹಿತಿಯನ್ನು ನವೀಕರಿಸುವುದು. ಯೋಜನೆ–ಅನುಷ್ಠಾನ–ಪರಿಶೀಲನೆ ಮತ್ತು ಅಳವಡಿಕೆ (Plan-Do-Check and Adapt (PDCA) ಮಾದರಿಯನ್ನು ಕಾರ್ಯಗತಗೊಳಿಸುವುದು. ಸಮಸ್ಯೆ ಬಗೆಹರಿಸುವುದು ಮತ್ತು ಅನುಷ್ಠಾನ ಮಾರ್ಗಗಳನ್ನು ಅಳವಡಿಸಿಕೊಳ್ಳುವುದು.
- ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH)/ಆರೋಗ್ಯ ಸುಧಾರಣೆ ಸೇವೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರಿ ಯೋಜನೆಗಳು, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (CSR) ನಿಧಿಗಳು ಮತ್ತು ಲೋಕೋಪಕಾರಿ ಸಂಸ್ಥೆಗಳಿಂದ ಹಣ ಮತ್ತು ಹಣರಹಿತ ಸಂಪನ್ಮೂಲಗಳನ್ನು ಸಂಗ್ರಹಿಸುವುದು ಮತ್ತು ಅವುಗಳ ನೆರವು ಪಡೆಯುವುದು.

**ಟಿಪ್ಪಣಿ:**

ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ತಕ್ಷಣ ಕಾರ್ಯಗತಗೊಳಿಸದೇ ಇದ್ದರೂ, ಕಾಲಾನಂತರದಲ್ಲಿ ತರಬೇತಿ ಮತ್ತು ಬೆಂಬಲದೊಂದಿಗೆ, ಪ್ರವಾಹ ಮತ್ತು ಬರಗಾಲದಂತಹ ನೈಸರ್ಗಿಕ ವಿಕೋಪಗಳಿಗೆ ಮುನ್ನೆಚ್ಚರಿಕೆಯ ಸಿದ್ಧತೆ ಮತ್ತು ಅವುಗಳ ಪರಿಣಾಮವನ್ನು ತಗ್ಗಿಸಲು ಯೋಜನೆಗಳನ್ನು ಅಭಿವೃದ್ಧಿಪಡಿಸಬಹುದು ಮತ್ತು ಕಾರ್ಯಗತಗೊಳಿಸಬಹುದು. ಜಲ ಸಂಪನ್ಮೂಲ ನಿರ್ವಹಣೆಗೆ ಸಂಬಂಧಿಸಿದ ಸುಸ್ಥಿರ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಬಹುದು, ಉದಾಹರಣೆಗೆ: ಮಳೆನೀರು ಕೊಯ್ಲು, ನೀರಿನ ಸಂರಕ್ಷಣಾ ಕ್ರಮಗಳು, ನೀರಿನ ಮೂಲ ರಚನೆಗಳ ಪುನರ್ ನವೀಕರಣ ಮತ್ತು ಅರಣ್ಯೀಕರಣ.

# ಭಾಗ 5 | ಆರೋಗ್ಯ ಸಂಗಮ ದೃಷ್ಟಿಕೋನ ರಚನಾ ಕಾರ್ಯಾಗಾರ ಮತ್ತು ತರಬೇತಿ

ಆರೋಗ್ಯ ಸಂಗಮ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ಕೈಗೊಂಡ ಸಂಶೋಧನೆಯ ಪ್ರಕಾರ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಪರಿಣಾಮಕಾರಿ ಕಾರ್ಯನಿರ್ವಹಣೆಗೆ ವಿಶ್ವಾಸವನ್ನು ಬೆಳೆಸಬೇಕು. ಇದಕ್ಕೆ ಅಧಿಕಾರದ ಅಸಮತೋಲನವನ್ನು ತಕ್ಷಣವೇ ಪರಿಹರಿಸಲು ಪ್ರಯತ್ನಿಸಬೇಕು. ಮೂರು ಪ್ರಮುಖ ಭಾಗೀದಾರರಾದ ಸಮುದಾಯ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಆರೋಗ್ಯ ಸೇವಾ ಪೂರೈಕೆದಾರರು ಸಮಾನ ಮನೋಭಾವದೊಂದಿಗೆ ಕಾರ್ಯನಿರ್ವಹಿಸಬೇಕು. ಇದಕ್ಕಾಗಿ ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸುವ ಅಗತ್ಯವಿದೆ.

ಗ್ರಾಮ ಪಂಚಾಯಿತಿಗಳು ಕೇವಲ ಮೂಲಸೌಕರ್ಯಗಳನ್ನು ನೀಡುವುದಲ್ಲದೇ ಆರೋಗ್ಯ ಮತ್ತು ಸಮಗ್ರ ಅಭಿವೃದ್ಧಿಯನ್ನು ಹೆಚ್ಚಿಸುವಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸಲು ಸಹಾಯ ಮಾಡುವ ತರಬೇತಿ ಕಾರ್ಯಕ್ರಮಗಳ ಅವಶ್ಯಕತೆ ಇದೆ. ಸಮುದಾಯಗಳ ಸಬಲೀಕರಣದ ಮೂಲಕ ಮಾಲೀಕತ್ವ ಮತ್ತು ಹೊಣೆಗಾರಿಕೆಯನ್ನು ಉತ್ತೇಜಿಸಬೇಕು. ಇದರಿಂದ ಸಮುದಾಯದ ಅಗತ್ಯತೆಗಳು ಮತ್ತು ಆದ್ಯತೆಗಳಿಗೆ ಹೊಂದಿಕೆಯಾಗುವ ಸ್ಪಂದಿಸುವ ಸೇವೆಗಳನ್ನು ತಲುಪಿಸಲು ಸರ್ಕಾರಿ ಉಪಕ್ರಮಗಳು ಮತ್ತು ಆರೋಗ್ಯ ಪೂರೈಕೆದಾರರ ಸಹಕಾರ ಅಗತ್ಯವಿರುತ್ತದೆ.

ಸಂಶೋಧನೆಯ ಪ್ರಕಾರ, ಗ್ರಾಮ ಪಂಚಾಯಿತಿ ಮತ್ತು ಸಮುದಾಯದ ಸದಸ್ಯರು ಸಮುದಾಯದ ವೇದಿಕೆಗಳನ್ನು ನಿರ್ವಹಿಸಲು ಅಸಮರ್ಪಕವಾಗಿರುತ್ತಾರೆ ಎಂದು ತಿಳಿದುಬಂದಿದೆ. ಇದರಿಂದ ಅವರ ಆಸಕ್ತಿಯನ್ನು ಕಾಪಾಡಿಕೊಳ್ಳಲು ನಿರಂತರ ತರಬೇತಿ ಮತ್ತು ಬೆಂಬಲ ನೀಡುವುದು ಅತ್ಯಗತ್ಯವಾಗಿದೆ.

## 5.1 ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಕಾರ್ಯನಿರ್ವಹಣೆಯಲ್ಲಿ ಅಗತ್ಯವಿರುವ ಬದಲಾವಣೆಗಳು

**ಬಾಕ್ಸ್–3 ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಕಾರ್ಯನಿರ್ವಹಣೆಯ 5 ಅಗತ್ಯ ಬದಲಾವಣೆಗಳು**

ಆರೋಗ್ಯ ಸಂಗಮ ಯಶಸ್ಸಿಗೆ ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಈ ಐದು ಪ್ರಮುಖ ಬದಲಾವಣೆಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ. ಆರೋಗ್ಯ ಸಂಗಮದ ದೃಷ್ಟಿಕೋನ ನಿರ್ಮಾಣ ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳು ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಕಾರ್ಯನಿರ್ವಹಣೆಯಲ್ಲಿ ಈ ಕೆಳಗಿನ ನಿರ್ಣಾಯಕ ಬದಲಾವಣೆಗಳನ್ನು ಗುರಿಯಾಗಿಸಬೇಕಿದೆ:

- **ಪ್ರತಿಕ್ರಿಯಾತ್ಮಕ ಬದಲಾಗಿ ಸಕ್ರಿಯಾತ್ಮಕ ಮಾದರಿಯಲ್ಲಿ ಕಾರ್ಯನಿರ್ವಹಣೆ**
  ಕೋವಿಡ್–19 ಸಾಂಕ್ರಾಮಿಕ ಸಮಯದಲ್ಲಿ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಮೇಲ್ಮಟ್ಟದಿಂದ ತಳಮಟ್ಟಕ್ಕೆ ಬಂದ ನಿರ್ದೇಶನಗಳನ್ನು ಅನುಸರಿಸಿ ಸೀಮಿತ ಕಾರ್ಯತಂತ್ರದ ಯೋಜನೆಗಳು ಪ್ರತಿಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸಿದವು. ಜೊತೆಗೆ ಸೀಮಿತ ಸಮುದಾಯದ ಆರೋಗ್ಯ ಮತ್ತು ಅಭಿವೃದ್ಧಿ ಅಗತ್ಯಗಳನ್ನು ಪರಿಣಾಮಕಾರಿಯಾಗಿ ಪೂರೈಸಲು, ಈಗ ಸಕ್ರಿಯಾತ್ಮಕ ಕಾರ್ಯತಂತ್ರದ ಯೋಜನೆಯನ್ನು ಅಳವಡಿಸಿಕೊಳ್ಳುವುದು ಅವಶ್ಯಕವಾಗಿದೆ.

- **ದೃಢವಾಗಿರದ ಸಂಯೋಜಿತ ಸಂಘಟನೆಗಳಿಂದ ಒಟ್ಟಾದ ತಂಡಗಳು**
  ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ವಿಭಜಿತ ರಚನೆಯಿಂದ ವಿಕಸನಗೊಳ್ಳುವ ಅಗತ್ಯವನ್ನು ಭಾಗೀದಾರರು ಎತ್ತಿ ತೋರಿಸಿದ್ದಾರೆ. ಒಗ್ಗಟ್ಟಿನ ತಂಡಗಳು ಗುರಿಯನ್ನು ಹಂಚಿಕೊಂಡು ಸಂಘಟಿತ ನಿರ್ಧಾರ ತೆಗೆದುಕೊಳ್ಳಬೇಕು.

- **ಆರೋಗ್ಯ ಕಾರ್ಯಕರ್ತರ ನೇತೃತ್ವದಿಂದ ಸಮನ್ವಯ ಮಾಲೀಕತ್ವದವರೆಗೆ**
  ಸಾಂಕ್ರಾಮಿಕ ಪಿಡುಗು ಎದುರಿಸಲು ಪ್ರತಿಕ್ರಿಯೆಗಳು ಇದ್ದರು ಪ್ರಾಥಮಿಕವಾಗಿ ಆರೋಗ್ಯ ಸೇವಾ ಪೂರೈಕೆದಾರರ ಪ್ರಯತ್ನ ಗಮನಾರ್ಹವಾಗಿತ್ತು, ಜೊತೆಗೆ ಗ್ರಾಮ ಪಂಚಾಯತಿ ಸದಸ್ಯರು ಮತ್ತು ಸಮುದಾಯದ ಪಾಲ್ಗೊಳ್ಳುವಿಕೆ ಸೀಮಿತವಾಗಿತ್ತು. ಆರೋಗ್ಯ ಸಂಗಮದಲ್ಲಿ ಎಲ್ಲ ಭಾಗೀದಾರರು ಸಮಾನ ಪಾಲ್ಗೊಳ್ಳುವಿಕೆ, ಜಂಟಿಯೋಜನೆ ಮತ್ತು ಮಾಲೀಕತ್ವ ಮತ್ತು ಸಮಸ್ಯೆ ಪರಿಹಾರಕ್ಕೆ ಕೊಡುಗೆ ನೀಡಬೇಕು.

- **ನಿಷ್ಕ್ರಿಯತೆಯಿಂದ ಸಕ್ರಿಯತೆವರೆಗೆ ಸಮುದಾಯ ಪಾಲ್ಗೊಳ್ಳುವಿಕೆ**
  ಸಮುದಾಯದ ಸೇವೆಗಳು ಯೋಜನೆ ಮತ್ತು ಸಮಸ್ಯೆ ಪರಿಹಾರದಲ್ಲಿ ನಿಷ್ಕ್ರಿಯತೆಯಿಂದ ಕಡ್ಡಾಯವಾಗಿ ಪರಿವರ್ತನೆಯಾಗಿ ಸಕ್ರಿಯ ಭಾಗೀದಾರರಾಗುವುದು ಅವಶ್ಯಕ. ಇದರಿಂದ ವಿಶ್ವಾಸವನ್ನು ಬೆಳೆಸುವುದು, ಪ್ರತಿರೋಧವನ್ನು ಪರಿಹರಿಸುವುದು ಮತ್ತು ಸಾಮೂಹಿಕತೆಯನ್ನು ಬೆಳೆಸುವುದು. ಜವಾಬ್ದಾರಿ ನಡುವೆ ಸಮುದಾಯ ಸದಸ್ಯರು, ಗ್ರಾಮ ಪಂಚಾಯಿತಿ ಪ್ರತಿನಿಧಿಗಳು, ಮತ್ತು ಆರೋಗ್ಯ ಪೂರೈಕೆದಾರರು ಅತ್ಯಗತ್ಯವಾಗಿರುತ್ತಾರೆ.

- **ನಿಂದಿಸುವ ಬದಲಾಗಿ ಜವಾಬ್ದಾರಿಯನ್ನು ಹಂಚಿಕೊಳ್ಳುವುದು**
  ಸಮುದಾಯದ ಅಸಡ್ಡೆಯೇ ಕಳಪೆ ಆರೋಗ್ಯ ಪರಿಣಾಮಗಳಿಗೆ ಕಾರಣ ಎಂದು ಹೇಳುವ ಬದಲು ಮಾಹಿತಿಯನ್ನು ಹಂಚಿಕೊಂಡು ಆರೋಗ್ಯ ಸೇವಾ ಪೂರೈಕೆದಾರರು ಅಥವಾ ಗ್ರಾಮ ಪಂಚಾಯಿತಿಗಳು; ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ನ್ಯಾಯಯುತ ಪ್ರಯೋಜನಗಳು ಮತ್ತು ಸೇವೆಗಳ ಲಭ್ಯತೆಯನ್ನು ಖಚಿತಪಡಿಸುವುದು, ಆರೋಗ್ಯ ಮತ್ತು ಅಭಿವೃದ್ಧಿ ಫಲಿತಾಂಶಗಳನ್ನು ಸುಧಾರಿಸುವುದನ್ನು ಗುರುತಿಸುವುದು ಪಂಚಾಯಿತಿಗಳು, ಆರೋಗ್ಯ ಸೇವಾ ಪೂರೈಕೆದಾರರು ಮತ್ತು ಸಮುದಾಯದ ನಡುವೆ ಹಂಚಿಕೆಯಾದ ಜವಾಬ್ದಾರಿಗಳು.

## 5.2 ಕಾರ್ಯಕ್ರಮದ ರೂಪುರೇಷೆ ರಚನೆಯ ಕಾರ್ಯಾಗಾರಗಳು

ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸದಸ್ಯರಿಗೆ ವರ್ಷದಲ್ಲಿ ಮೂರು ಒಂದು ದಿನದ ದೃಷ್ಟಿಕೋನ ನಿರ್ಮಾಣ ಕಾರ್ಯಾಗಾರಗಳು ಆಯೋಜಿಸಲಾಗುತ್ತದೆ. ಈ ಕಾರ್ಯಾಗಾರಗಳನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ (SIRD) ನಡೆಸುತ್ತದೆ. ತಾಂತ್ರಿಕ ಬೆಂಬಲಕ್ಕಾಗಿ (KHPT) ಮತ್ತು ಸಮುದಾಯ ತೊಡಗಿಸಿಕೊಳ್ಳುವಿಕೆಯಲ್ಲಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರ ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ತಜ್ಞರ ಸಹಕಾರ ಪಡೆಯಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಿಇಒ, ಜಿಲ್ಲಾ ಪಂಚಾಯಿತಿ ಮತ್ತು ಕೆಹೆಚ್‌ಪಿಟಿಯ ತಾಂತ್ರಿಕ ತಂಡ ಇವರನ್ನು ಗುರುತಿಸಲಾಗಿದೆ.

ಈ ಕಾರ್ಯಾಗಾರಗಳು ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸದಸ್ಯರಿಗೆ ಅವರ ಪಾತ್ರಗಳು ಮತ್ತು ಜವಾಬ್ದಾರಿಗಳ ಬಗ್ಗೆ ಸ್ಪಷ್ಟ ಮಾರ್ಗದರ್ಶನ ನೀಡುವುದರ ಮೇಲೆ ಕೇಂದ್ರೀಕರಿಸುತ್ತವೆ. ಒಂದು ವರ್ಷದ ಅವಧಿಯಲ್ಲಿ, ಹಂತ ಹಂತವಾಗಿ ಈ ಕೆಳಗಿನ ಕ್ಷೇತ್ರಗಳಲ್ಲಿ ಅವರ ಸಾಮರ್ಥ್ಯಗಳನ್ನು ನಿರ್ಮಿಸುತ್ತವೆ:

| | |
|---|---|
| **ಸಮುದಾಯ ಕೇಂದ್ರಿತ** | • ಜನರ ಸೇವೆಗಳ ಬಗ್ಗೆ ಕೇಂದ್ರೀಕರಿಸುವಂತೆ ಮಾಡುವುದು.<br>• ಸಾಂಸ್ಕೃತಿಕವಾಗಿ ಸೂಕ್ಷ್ಮತೆ ಮತ್ತು ಸಮುದಾಯದ ಅಗತ್ಯಗಳಿಗೆ ಸ್ಪಂದಿಸುವುದು<br>• ಗೌರವಯುತ ಮತ್ತು ಸಹಾನೂಭೂತಿ ಸೇವೆಗಳನ್ನು ಒದಗಿಸುವುದು<br>• ಆರೋಗ್ಯ ಮತ್ತು ಮಾನವ ಅಭಿವೃದ್ಧಿಗೆ ಸಮಗ್ರ ವಿಧಾನವನ್ನು ಸಂಯೋಜಿಸುವುದು |
| **ನಿರ್ಣಯ ಕೈಗೊಳ್ಳುವುದು** | • ನಿರ್ಣಯ ಕೈಗೊಳ್ಳಲು ಸಹಯೋಗದ ವಿಧಾನವನ್ನು ಅನುಸರಿಸುವುದು<br>• ಕ್ಷೇತ್ರ ಪರಿಶೀಲನೆ ಮತ್ತು ಸಮುದಾಯ ಪ್ರತಿಕ್ರಿಯೆಯ ಆಧಾರದ ಮೇಲೆ ನಿರ್ಧಾರಗಳನ್ನು ಅಳವಡಿಸಿಕೊಳ್ಳುವುದು ಅಥವಾ ಮಾರ್ಪಡಿಸುವುದು<br>• ಸಮಸ್ಯೆ ನಿವಾರಣೆಗೆ ಪರಿಹಾರಗಳನ್ನು ಆಧಾರಿತವಾದ ಕ್ರಮವನ್ನು ಅನುಸರಿಸುವುದು |
| **ಸಹಯೋಗ** | • ಗುಂಪುಗಳೊಂದಿಗೆ ಕಾರ್ಯನಿರ್ವಹಣೆ ಮತ್ತು ಸಮನ್ವಯತೆ |
| **ಮಾಹಿತಿಯ ಬಳಕೆ ಮತ್ತು ದತ್ತಾಂಶ ವ್ಯವಸ್ಥೆಗಳು** | • ಆರೋಗ್ಯ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ವಿವಿಧ ಮೂಲಗಳಿಂದ ಸಂಗ್ರಹಿಸುವುದು.<br>• ಸಾರ್ವಜನಿಕ ಸೇವೆಗಳ ಬಳಕೆಯ ಸ್ಥಿತಿಯಲ್ಲಿನ ಅಂತರವನ್ನು ಕಂಡುಹಿಡಿಯುವುದು<br>• ದತ್ತಾಂಶ–ಚಾಲಿತ ಕ್ರಿಯಾ ಯೋಜನೆಗಳು ಮತ್ತು ಕಾರ್ಯತಂತ್ರಗಳನ್ನು ಸಿದ್ಧಪಡಿಸುವುದು<br>• ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ತಂತ್ರಗಳನ್ನು ಅಳವಡಿಸಿಕೊಳ್ಳುವುದು |

**ಚಿತ್ರ 5 ಗ್ರಾಮ ಪಂಚಾಯಿತಿ ಕಾರ್ಯಪಡೆಗಳಿಗಾಗಿ ಸಾಮರ್ಥ್ಯ ಕ್ಷೇತ್ರಗಳು**


ಆರೋಗ್ಯ ಸಂಗಮ ಕಾರ್ಯಕ್ರಮದ ತರಬೇತಿ ಮತ್ತು ಸಾಮರ್ಥ್ಯಾಭಿವೃದ್ಧಿ ರೂಪುರೇಷೆಗಳನ್ನು **ಅನುಬಂಧ 4** ರಲ್ಲಿ ವಿವರವಾಗಿ ನೀಡಲಾಗಿದೆ.

## 5.3 ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಕಾರ್ಯನಿರ್ವಹಣಾ ಅವಧಿಯ ತರಬೇತಿ ಮತ್ತು ಕಲಿಕಾ ಕ್ರಿಯೆಗಳು

ಮೂರು ದೃಷ್ಟಿಕೋನ ನಿರ್ಮಾಣ ಕಾರ್ಯಾಗಾರಗಳ ಜೊತೆಗೆ, ಪ್ರತಿ ತ್ರೈಮಾಸಿಕದಲ್ಲಿ ನಡೆಯುವ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸಭೆಯಲ್ಲಿ, ಹೆಚ್ಚು ತೀವ್ರವಾದ ಕಾರ್ಯನಿರ್ವಹಣಾ ಅವಧಿಯ ತರಬೇತಿ ಮತ್ತು ಕ್ರಿಯಾಶೀಲ ಕಲಿಕೆಯನ್ನು ಆಯೋಜಿಸಲಾಗುತ್ತದೆ.

ಈ ಸಭೆಗಳಲ್ಲಿ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸದಸ್ಯರಿಗೆ ಕೆಹೆಚ್‌ಪಿಟಿ ತರಬೇತಿ ಪಡೆದ ಸುಗಮಗಾರರರು ಗುಂಪುಗಳಾಗಿ ತರಬೇತಿ ನೀಡುತ್ತಾರೆ. ಪ್ರತಿ ಗ್ರಾಮ ಪಂಚಾಯಿತಿ ಕಾರ್ಯಪಡೆಗೆ ಇಬ್ಬರು ಆರೋಗ್ಯ ಸಂಗಮ ಸುಗಮಗಾರರರು (Arogya Sangama Facilitators) ತರಬೇತಿಗೆ ಇರುತ್ತಾರೆ/ತರಬೇತಿ ನಿರ್ವಹಿಸುತ್ತಾರೆ. (**ಬಾಕ್ಸ್ 4ರಲ್ಲಿ** ಸುಗಮಗಾರರ ಕುರಿತು ಹೆಚ್ಚಿನ ಮಾಹಿತಿಯನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ).

ಈ ತರಬೇತಿಯು ಕಲಿಕೆಗೆ ಒತ್ತು ನೀಡುತ್ತದೆ. ಪ್ರಾರಂಭದಲ್ಲಿ, ಹೊಸದಾಗಿ ರಚಿಸಲಾದ ಗ್ರಾಮ ಪಂಚಾಯಿತಿ ಆರೋಗ್ಯ ಕಾರ್ಯಪಡೆಗಳಿಗೆ ಸುಗಮಗಾರರು ಪ್ರಾತ್ಯಕ್ಷಿಕೆಯ ಮೂಲಕ ಸಭೆಯ ಕಾರ್ಯವಿಧಾನಗಳನ್ನು ಪರಿಚಯಿಸುತ್ತಾರೆ. ಸಾರ್ವಜನಿಕ ಸೇವೆಗಳ ಸ್ಥಿತಿಯನ್ನು ಪರಿಶೀಲಿಸುವುದು, ಪ್ರಮುಖ ಆದ್ಯತೆಗಳ ಬಗ್ಗೆ ಚರ್ಚಿಸುವುದು, ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಟ್ರ್ಯಾಕಿಂಗ್ ಉಪಕರಣ ಬಳಸಿ ಅಂತರ ಗುರುತಿಸುವುದು, ಕ್ರಿಯಾ ಯೋಜನೆ ಸಿದ್ಧಪಡಿಸುವುದು, ಸಭೆ ಚರ್ಚಾಂಶಗಳನ್ನು ದಾಖಲಿಸುವುದು, ಜವಾಬ್ದಾರಿಗಳನ್ನು ವಹಿಸುವುದು ಮತ್ತು ಹಣಕಾಸು ಅವಶ್ಯಕತೆಗಳನ್ನು ನಿರ್ಧರಿಸುವುದು ಮೊದಲಾದವು ಈ ತರಬೇತಿಯ ವಿಷಯಗಳಾಗಿರುತ್ತವೆ. ಎಲ್ಲಾ ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಲು, ಶಿಬಿರಾರ್ಥಿಗಳು ಭಾಗವಹಿಸುವಿಕೆಯ ತಂತ್ರಗಳನ್ನು ಹೇಗೆ ಅಳವಡಿಸಿಕೊಳ್ಳುವುದು ಎಂಬುದನ್ನು ಸಹ ಪ್ರಾತ್ಯಕ್ಷಿಕೆ ಮೂಲಕ ತೋರಿಸುತ್ತಾರೆ. ತರುವಾಯ ಮುಂದಿನ ತ್ರೈಮಾಸಿಕಸಭೆಯಲ್ಲಿ ಸುಗಮಗಾರರು ಮಾರ್ಗದರ್ಶಕರಾಗಿ ಹೆಚ್ಚು ಗಮನಿಸುವ ಪಾತ್ರವನ್ನು ನಿರ್ವಹಿಸುತ್ತಾರೆ. ಪಿ.ಡಿ.ಒ/PDO ಮತ್ತು ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸದಸ್ಯರಿಗೆ ಎಲ್ಲಾ ಚಟುವಟಿಕೆಗಳನ್ನು ಮುನ್ನಡೆಸಲು ಅನುವು ಮಾಡಿಕೊಡುತ್ತಾರೆ. ಸುಗಮಗಾರರ ಮಾರ್ಗದರ್ಶನ ಚರ್ಚೆಗಳು ಇತರರ ಸಹಯೋಗದಲ್ಲಿ/ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸಲು ಅವರನ್ನು ಪ್ರೇರೇಪಿಸುತ್ತವೆ. ತರಬೇತಿ ಪ್ರಕ್ರಿಯೆಯ ವಿವರಗಳನ್ನು **ಚಿತ್ರ 6ರಲ್ಲಿ** ನೀಡಲಾಗಿದೆ.




**ಚಿತ್ರ 6 ವಿವರವಾದ ಪ್ರಕ್ರಿಯೆಯ ಅವಲೋಕನ**

**ಬಾಕ್ಸ್ 4 ಆರೋಗ್ಯ ಸಂಗಮ ಸುಗಮಗಾರರು (Arogya Sangama Facilitators)**

ಪ್ರತಿಯೊಂದು ಗ್ರಾಮ ಪಂಚಾಯಿತಿ ಕಾರ್ಯಪಡೆಗೆ ಸಹಾಯ ಮಾಡಲು ತಾಲ್ಲೂಕು ಪಂಚಾಯಿತಿ ಇಬ್ಬರು ಆರೋಗ್ಯ ಸಂಗಮ ಸುಗಮಗಾರರನ್ನು ನಾಮನಿರ್ದೇಶನ ಮಾಡುತ್ತದೆ. ಈ ಸುಗಮಗಾರರು ಕಾರ್ಯಪಡೆಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಸಮಸ್ಯೆ ಪರಿಹಾರ, ಸಮುದಾಯದ ಸಹಭಾಗಿತ್ವ, ಮತ್ತು ಅನುಷ್ಠಾನ ಕಾರ್ಯಗಳಲ್ಲಿ ಗ್ರಾಮ ಪಂಚಾಯಿತಿಗೆ ಬೆಂಬಲ ನೀಡುತ್ತಾರೆ.

ಆರೋಗ್ಯ ಸಂಗಮ ಸುಗಮಗಾರರನ್ನು ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಆಯ್ಕೆ ಮಾಡಬೇಕು:

- ಪದವೀಧರರಾಗಿರಬೇಕು. ಅದೇ ಜಿಲ್ಲೆಯವರಾಗಿರಬೇಕು ಮತ್ತು **65** ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು.
- ಸಮುದಾಯ ಕಾರ್ಯದಲ್ಲಿ ತೊಡಗಿಸಿಕೊಳ್ಳುವಿಕೆ, ಮತ್ತು ಪಂಚಾಯತ್/ಆರೋಗ್ಯ ಸಂಬಂಧಿತ ಕ್ಷೇತ್ರಗಳಲ್ಲಿ ಕನಿಷ್ಠ ಐದು ವರ್ಷಗಳ ಅನುಭವ ಹೊಂದಿರಬೇಕು.
- ಸಂವಹನ ಮತ್ತು ಬಾಂಧವ್ಯ ಕೌಶಲ್ಯಗಳಲ್ಲಿ ಪರಿಣಿತರಾಗಿರಬೇಕು ಮತ್ತು ತರಬೇತಿ ಕಾರ್ಯಕ್ರಮಗಳು, ಪ್ರಾತ್ಯಕ್ಷಿಕೆ ನಡೆಸಲು ಸಾಮರ್ಥ್ಯ ಹೊಂದಿರಬೇಕು.
- ಗ್ರಾಮ ಪಂಚಾಯಿತಿಯ ಕಾರ್ಯವಿಧಾನಗಳಿಗೆ ಚೆನ್ನಾಗಿ ಪರಿಚಿತರಾಗಿರಬೇಕು ಮತ್ತು ಸಮುದಾಯ ಎದುರಿಸುತ್ತಿರುವ ಆರೋಗ್ಯ ಮತ್ತು ಅಭಿವೃದ್ಧಿ ಸವಾಲುಗಳ ಅರಿವಿರಬೇಕು.
- ನಿವೃತ್ತ ಶಾಲಾ ಶಿಕ್ಷಕರು, SIRD ಸುಗಮಗಾರರು, ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದ (GPLF) ಸಕ್ರಿಯ ಪ್ರತಿನಿಧಿಗಳು, ಪ್ರಮುಖ ಸಮುದಾಯ ಸಂಪನ್ಮೂಲ ವ್ಯಕ್ತಿಗಳು, ನಿವೃತ್ತ ತಾಲ್ಲೂಕು ಆರೋಗ್ಯ ಶಿಕ್ಷಣ ಅಧಿಕಾರಿಗಳು (BHEO), ಮಹಿಳಾ ಆರೋಗ್ಯ ಸಂದರ್ಶಕರು (LHV) ಮತ್ತು ನಾಗರಿಕ ಸಮಾಜ ಸಂಸ್ಥೆಗಳ ಸಮುದಾಯ ಸುಗಮಗಾರರು ಆಗಿರಬಹುದು.
- ಆರೋಗ್ಯ ಸಂಗಮ ಸುಗಮಗಾರರು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗೆ ವರದಿ ಮಾಡಬೇಕು. ಸಭೆಗಳನ್ನು ನಡೆಸುವಾಗ ಗೌರವಧನ ನೀಡಲಾಗುತ್ತದೆ. ಕಾರ್ಯಕ್ರಮದ ಅನುಷ್ಠಾನ ಮತ್ತು ಕ್ಷೇತ್ರ ಮೇಲ್ವಿಚಾರಣಾ ಕೆಲಸಗಳಿಗೆ ಪ್ರಯಾಣ ಬೆಂಬಲ ಒದಗಿಸಲಾಗುತ್ತದೆ.
- ಆರೋಗ್ಯ ಸಂಗಮ ಸುಗಮಗಾರರು ದೈನಂದಿನ ಆಧಾರದ ಮೇಲೆ ಗ್ರಾಮ ಪಂಚಾಯಿತಿಯ ಪಿಡಿಒ ಜೊತೆಗೂಡಿ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು.

**ಆರೋಗ್ಯ ಸಂಗಮ ಸುಗಮಗಾರರು ಪ್ರಮುಖ ಕಾರ್ಯಗಳು**

**ಸುಗಮಗಾರಿಕೆ ಮತ್ತು ಸಮನ್ವಯ**

- ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸಭೆಗಳನ್ನು ನಿರ್ವಹಣೆ ಮಾಡುವುದು.
- ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಕಾರ್ಯನಿರ್ವಹಣೆಯ ವರದಿಯನ್ನು ಸಹಾಯಕ ನಿರ್ದೇಶಕರು (AD)/ ಕಾರ್ಯನಿರ್ವಹಣಾಧಿಕಾರಿ (EO) ತಾಲ್ಲೂಕು ಪಂಚಾಯಿತಿ ಕಚೇರಿಗೆ ಮಾಸಿಕವಾಗಿ ಸಂಕ್ಷಿಪ್ತ ಮಾಹಿತಿಗಳನ್ನು ಒದಗಿಸುವುದು.
- ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ತಮ್ಮ ತ್ರೈಮಾಸಿಕ ಕ್ರಿಯಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಬಹುದೆಂದು ಖಚಿತಪಡಿಸಿಕೊಳ್ಳಲು, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಪಂಚಾಯಿತಿಗಳ ಜೊತೆಗೆ ಸಮನ್ವಯ ಸಾಧಿಸುವುದು.
- ಆರೋಗ್ಯ, ಶಿಕ್ಷಣ ಮತ್ತು ಮಕ್ಕಳ ಸಮಗ್ರ ಅಭಿವೃದ್ಧಿ ಸೇವೆಗಳ (ICDS) ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಕಚೇರಿಗಳೊಂದಿಗೆ ನಿಕಟವಾಗಿ ಸಹಕರಿಸಿ, ಸಮನ್ವಯತೆ ಕಾಯ್ದುಕೊಳ್ಳುವುದು.

**ಅನುಷ್ಠಾನದ ಒಳನೋಟಗಳು**

- ಗ್ರಾಮ ಪಂಚಾಯಿತಿ ಕಾರ್ಯಪಡೆ ಕ್ರಿಯಾ ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡುವುದು.
- ಗ್ರಾಮ ಪಂಚಾಯಿತಿ ಕಾರ್ಯಪಡೆ ಟ್ರ್ಯಾಕಿಂಗ್ ಉಪಕರಣಕ್ಕೆ ಸೂಕ್ತವಾದ ದತ್ತಾಂಶದ ಗುಣಮಟ್ಟ ಪರಿಶೀಲನೆ ಮಾಡುವುದು.
- ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರು ಕ್ಷೇತ್ರ ಮಟ್ಟದ ಅನುಷ್ಠಾನ ಕಾರ್ಯಗತಗೊಳಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಆರೋಗ್ಯ ಸಂಗಮ ಅನುಷ್ಠಾನ ಸಮಯದಲ್ಲಿ ಎದುರಾಗುವ ಸವಾಲುಗಳನ್ನು ಪರಿಹರಿಸುವುದು.

**ತರಬೇತಿ ಮತ್ತು ಮೇಲ್ವಿಚಾರಣೆ**

- ಪರಿಕಲ್ಪನೆ ದೃಷ್ಟಿಕೋನ ನಿರ್ಮಾಣ ಕಾರ್ಯಾಗಾರಗಳನ್ನು ಏರ್ಪಡಿಸುವುದು/ ಆಯೋಜಿಸುವುದು.
- ತ್ರೈಮಾಸಿಕ ಗ್ರಾಮ ಪಂಚಾಯಿತಿ ಕಾರ್ಯಪಡೆ ಸಭೆಗಳು ನಡೆಯುವ ಸಮಯದಲ್ಲಿ ಮಾಹಿತಿ ಹಂಚಿಕೆ, ಹೊಸ ಯೋಜನೆಗಳ ಮತ್ತು ಕಾರ್ಯಕ್ರಮಗಳ ಬಗ್ಗೆ ಸದಸ್ಯರಿಗೆ ತಿಳಿಸುವುದು ಮತ್ತು ಕಲಿಕೆ ಅವಧಿಗಳನ್ನು ನಿರ್ವಹಿಸುವುದು. ಅವರ ಪ್ರೇರಣೆಯನ್ನು ಉಳಿಸಲು ಸತತ ಚಟುವಟಿಕೆಗಳನ್ನು ನಡೆಸುವುದು.
- ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಮಾಡುವ ಒಳ್ಳೆಯ ಕೆಲಸಗಳನ್ನು ದಾಖಲಿಸುವುದು. ಒಳನೋಟಗಳನ್ನು ಗುರುತಿಸುವುದು ಮತ್ತು ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುವುದು.

# ಅಧ್ಯಾಯ 6 | ಆರೋಗ್ಯ ಸಂಗಮ ಕಾರ್ಯಕ್ರಮದ ಸಭೆಗಳು

ಆರೋಗ್ಯ ಸಂಗಮ ಕಾರ್ಯಕ್ರಮದ ಈ ಸಭೆಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನಡೆಸಲಾಗುವುದು. ಇದರ ಮುಖ್ಯ ಉದ್ದೇಶವೆಂದರೆ, ಗ್ರಾಮ ಪಂಚಾಯಿತಿ ಕಾರ್ಯಪಡೆಯ ಎಲ್ಲಾ ಸದಸ್ಯರನ್ನು ನಿಯಮಿತವಾಗಿ ಸಾಮಾನ್ಯ ವೇದಿಕೆಯಲ್ಲಿ ಸೇರಿಸುವುದು.

## 6.1 ಸಭೆಯ ವಿವರಗಳು

**ಕಾಲಾವಧಿ**
ಆರೋಗ್ಯ ಸಂಗಮ ಕಾರ್ಯಕ್ರಮಕ್ಕಾಗಿ ಗ್ರಾಮ ಪಂಚಾಯಿತಿ ಕಾರ್ಯಪಡೆ ಸಭೆಗಳನ್ನು ಪ್ರತಿ ತ್ರೈಮಾಸಿಕಕ್ಕೊಮ್ಮೆ ನಡೆಸಬೇಕು. ಅಗತ್ಯವಿದ್ದರೆ ಹೆಚ್ಚುವರಿ ತುರ್ತು ಸಭೆಗಳನ್ನು ಕರೆಯಲು ಅವಕಾಶವಿದೆ. ಗ್ರಾಮ ಪಂಚಾಯಿತಿ ಅಧ್ಯಕ್ಷರು/ಪಿಡಿಒ ಅಗತ್ಯಕ್ಕೆ ಅನುಗುಣವಾಗಿ ತುರ್ತು ಸಭೆಗಳನ್ನು ಕರೆಯಬಹುದು. ಯಾವುದೇ ಸದಸ್ಯ ತುರ್ತು ಸಭೆಗಾಗಿ ವಿನಂತಿಸಿದರೆ, ಅನುಮೋದನೆ ನೀಡಬೇಕು ಮತ್ತು ಎಲ್ಲಾ ಸದಸ್ಯರಿಗೆ ಮಾಹಿತಿ ಮುಂಚಿತವಾಗಿ ತಿಳಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು. ಈ ಸಭೆಗಳನ್ನು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯ ಮೊದಲು ನಡೆಸಬೇಕು.

**ಸ್ಥಳ**
ಗ್ರಾಮ ಪಂಚಾಯಿತಿ ಕಚೇರಿ

**ಅವಧಿ**
ಸಭೆಯ ಅವಧಿ 3 ಗಂಟೆಗಳು ಎಂದು ಶಿಫಾರಸ್ಸು ಮಾಡಲಾಗಿದೆ

**ದಿನಾಂಕ**
ಸಭೆಗಾಗಿ ನಿಶ್ಚಿತ ದಿನಾಂಕವನ್ನು ಮುಂಚಿತವಾಗಿ ನಿರ್ಧರಿಸಬೇಕು

**ಕೋರಂ**
ಪ್ರತಿ ಸಭೆಗೆ ಕನಿಷ್ಠ 50% ಸದಸ್ಯರ ಹಾಜರಾತಿ ಕೋರಂ ಅಗತ್ಯವಿದೆ


**ಗ್ರಾಮ ಪಂಚಾಯಿತಿ ಕಾರ್ಯಪಡೆ ಸಭೆಗಳನ್ನು ಕರೆಯುವ ಜವಾಬ್ದಾರಿ**
ಪಿ.ಡಿ.ಒ/PDO, ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಂಚಾಯಿತಿ ಕಾರ್ಯದರ್ಶಿಗಳು ಈ ಸಭೆಗಳನ್ನು ಆಯೋಜಿಸುವಲ್ಲಿ ಮುಂದಾಳತ್ವ ವಹಿಸಬೇಕು. ಜೊತೆಗೆ ಸಭೆಗೆ ಸಂಬಂಧಿಸಿದ ಪ್ರಮುಖ ಮಾಹಿತಿಯನ್ನು ಹಂಚಿಕೊಳ್ಳಲು ಅನುಕೂಲವಾಗುವಂತೆ ಎಲ್ಲಾ ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರ ವಾಟ್ಸಾಪ್ (WhatsApp) ಗುಂಪನ್ನು ರಚಿಸಬೇಕು.

## 6.2 ಗ್ರಾಮ ಪಂಚಾಯಿತಿ ಕಾರ್ಯಪಡೆ ಸಭೆಗಳಲ್ಲಿ ಕೈಗೊಳ್ಳಬಹುದಾದ ಪ್ರಮುಖ ಚಟುವಟಿಕೆಗಳು

### 6.2.1 ಸ್ವಾಗತ ಮತ್ತು ಪರಿಚಯ

- ಗ್ರಾಮ ಪಂಚಾಯಿತಿ ಅಧ್ಯಕ್ಷರು/ಪಿಡಿಒ ಸಭೆಯನ್ನು ಸಂಕ್ಷಿಪ್ತ ಸ್ವಾಗತದೊಂದಿಗೆ ಆರಂಭಿಸಬೇಕು. ನಡೆಯುತ್ತಿರುವ ಪ್ರಯತ್ನಗಳಿಗೆ ಸದಸ್ಯರ ಕೊಡುಗೆಗಳನ್ನು ಗುರುತಿಸಿ ಭಾಗವಹಿಸುವವರನ್ನು ಸ್ವಾಗತಿಸಬೇಕು.
- ಕಳೆದ ಸಭೆಯ ಪ್ರಮುಖ ನಿರ್ಧಾರಗಳು ಮತ್ತು ಚರ್ಚೆಗತ್ತಿರುವ ವಿಷಯಗಳನ್ನು ಪುನರುಚ್ಚರಿಸಬೇಕು. ಇದರಿಂದ ಎಲ್ಲ ಸದಸ್ಯರು ಹಿಂದಿನ ಸಭೆಯ ಚಟುವಟಿಕೆಗಳು/ಚರ್ಚೆ ಸರಿಯಾಗಿರುವುದನ್ನು ಎಂಬುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುತ್ತದೆ.
- ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಸದಸ್ಯರಿಗೆ ಹೊಸದಾಗಿ ಯಾವುದೇ ಆರೋಗ್ಯ ಅಥವಾ ಸಾಮಾಜಿಕ ಭದ್ರತಾ ಯೋಜನೆಗಳು ಪ್ರಾರಂಭಗೊಂಡಿದ್ದರೆ ಅಥವಾ ಪರಿಷ್ಕರಣೆಯಾದಲ್ಲಿ, ಅದರ ಕುರಿತು ಸದಸ್ಯರಿಗೆ ವಿವರಗಳನ್ನು ಒದಗಿಸಬೇಕು.

**6.2.2 ಯೋಜನೆ, ಕಾರ್ಯಗತ, ಪರಿಶೀಲಿಸಿ ಮತ್ತು ಅಳವಡಿಕೆ (PDCA) ಪರಿಕರ ಬಳಸಿ ಸಹಯೋಗದಲ್ಲಿ ಸಮಸ್ಯೆ ಪರಿಹಾರ. ಆರೋಗ್ಯ ಸಂಗಮ ತ್ರೈಮಾಸಿಕ ಸಭೆಗಳು ಕೆಳಗಿನ ಚಿತ್ರದಲ್ಲಿ ನೀಡಲಾಗಿರುವಂತೆ ತೀವ್ರ ನಿಗಾ ಮಾದರಿಯನ್ನು ಕಾರ್ಯಗತಗೊಳಿಸಲು ಒಂದು ವೇದಿಕೆಯಾಗಿ ಕಾರ್ಯನಿರ್ವಹಿಸುತ್ತವೆ:**




**ಚಿತ್ರ 7 ಯೋಜನೆ–ಅನುಷ್ಠಾನ–ಪರಿಶೀಲನೆ–ಅಳವಡಿಕೆ (PDCA)**

**ಆರೋಗ್ಯ ಸಂಗಮದ ತೀವ್ರ ನಿಗಾ ಪರಿಕರಗಳನ್ನು ಬಳಸಿಕೊಂಡು ಸಾಮೂಹಿಕ ಪ್ರಯತ್ನದ ಮೂಲಕ ಆದ್ಯತೆಗಳನ್ನು ಗುರುತಿಸುವುದು.**

**ಅನುಬಂಧ 2 ರಲ್ಲಿ** ನೀಡಿರುವ ಈ ಪರಿಕರಗಳು (tracking tool) ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರಿಗೆ ಪ್ರಗತಿಯ ಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಹಾಗೂ ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH), ಆರೋಗ್ಯ, ಸಮುದಾಯದ ಸಾಮಾಜಿಕ ಭದ್ರತಾ ಯೋಜನೆಗಳು, ಅವುಗಳ ಅರ್ಹತೆಗಳು ಹಾಗೂ ಇತರ ಸಾರ್ವಜನಿಕ ಸೇವೆಗಳ ವಿಷಯದಲ್ಲಿ ಅಂತರಗಳನ್ನು ಗುರುತಿಸಲು ನೆರವಾಗುತ್ತವೆ. ಪ್ರಮುಖ ಸೂಚಕಗಳ ಆಧಾರದ ಮೇಲೆ ತೀವ್ರ ನಿಗಾ ಪರಿಕರಗಳು ಸಮಸ್ಯೆಗಳಿಗೆ ಆದ್ಯತೆ ನೀಡಲು ಹಾಗೂ ಸಹಯೋಗದ ಮೂಲಕ ಸೂಕ್ತ ಕ್ರಮ ಕೈಗೊಳ್ಳಲು ಸಹಾಯ ಮಾಡುತ್ತವೆ.

**ಗ್ರಾಮ ಪಂಚಾಯಿತಿ ಕಾರ್ಯಪಡೆಗಳಿಂದ ಪರಿಕರ ಮತ್ತು ನೆರವಿನ ಆದ್ಯತೆಗಳನ್ನು ನಿಗದಿಪಡಿಸಿ ಕಾರ್ಯಗತಗೊಳಿಸುವ ಜವಾಬ್ದಾರಿ:** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (PDO), ದ್ವಿತೀಯ ದರ್ಜೆ ಸಹಾಯಕ (SDA) ಮತ್ತು ಆರೋಗ್ಯ ಸಂಗಮ ಸುಗಮಗಾರರದ್ದಾಗಿರುತ್ತದೆ.

**ದತ್ತಾಂಶದ ಮೂಲಗಳು:** ಈ ಕಾರ್ಯಕ್ಕೆ ಅಗತ್ಯವಿರುವ ದತ್ತಾಂಶವನ್ನು ಗ್ರಾಮ ಪಂಚಾಯಿತಿ ದಾಖಲೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ದಾಖಲೆಗಳು ಹಾಗೂ ಅಂಗನವಾಡಿ ಕೇಂದ್ರಗಳಿಂದ ಪಡೆಯಬೇಕು. ಪ್ರತಿ ಇಲಾಖೆಯ ನೋಡಲ್ ಪ್ರತಿನಿಧಿ ಈ ಮಾಹಿತಿಯನ್ನು ಒದಗಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ

**ಈ ಪರಿಕರ ಎರಡು ವಿಭಾಗಗಳನ್ನು ಒಳಗೊಂಡಿದೆ**

**ಭಾಗ 1–ಗ್ರಾಮ ಪಂಚಾಯಿತಿಯ ಮೂಲ ಮಾನದಂಡಗಳು**

ಗ್ರಾಮ ಪಂಚಾಯಿತಿ ಮೂಲಭೂತ ಮಾಹಿತಿಯನ್ನು ಸಂಗ್ರಹಿಸಬೇಕು. ಅಂದರೆ, ಗ್ರಾಮವಾರು ಜನಸಂಖ್ಯೆ (ಲಿಂಗ ಮತ್ತು ವಯಸ್ಸಿನ ಪ್ರಕಾರ), ಹಿಂದುಳಿದ ಕುಟುಂಬಗಳ ವಿವರಗಳು, ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರು, ಸರ್ಕಾರಿ ಆರೋಗ್ಯ ಸೌಲಭ್ಯಗಳನ್ನು ಪಡೆಯುವ ಮಾರ್ಗಗಳು ಮತ್ತು ಗ್ರಾಮ ಪಂಚಾಯಿತಿಯ ಆರ್ಥಿಕ ಸ್ಥಿತಿ.

ಈ ವಿಭಾಗವನ್ನು ಭರ್ತಿ ಮಾಡುವ ವಿಧಾನ – ಈ ಪರಿಕರದ ದತ್ತಾಂಶವನ್ನು ಪ್ರಾರಂಭದಲ್ಲಿ ಒಮ್ಮೆ ಸಂಗ್ರಹಿಸಿ, ಪ್ರತಿ ವರ್ಷ ನವೀಕರಿಸಬೇಕು.

**ಭಾಗ 2– ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಕಾರ್ಯನಿರ್ವಹಿಸುವ ಆದ್ಯತಾ ವಲಯಗಳು**

ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಆರಂಭದಲ್ಲಿ ಪ್ರಶ್ನಾವಳಿ ಸಂಶೋಧನೆಯ ಮೂಲಕ ಗುರುತಿಸಲಾದ ಆರು ಆದ್ಯತೆಯ ವಲಯಗಳಿಗೆ ಗಮನವನ್ನು ಕೇಂದ್ರೀಕರಿಸುತ್ತವೆ. ಚಾಮರಾಜನಗರ ಮತ್ತು ರಾಯಚೂರು ಜಿಲ್ಲೆಗಳ ಕಾರ್ಯಾಗಾರ ಸಮಯದಲ್ಲಿ ಇವುಗಳನ್ನು ಗುರುತಿಸಲಾಗಿತ್ತು. ಈ ಆದ್ಯತೆಯ ವಲಯಗಳೆಂದರೆ:

- ನೀರು, ನೈರ್ಮಲ್ಯ, ಮತ್ತು ಶುಚಿತ್ವ (WASH)
- ಶಾಲಾ ದಾಖಲಾತಿ– ಬಾಲ್ಯ ವಿವಾಹ
- ಮದ್ಯ/ಮಾದಕ ವಸ್ತು ಬಳಕೆ
- ತಾಯಿ ಮತ್ತು ಮಗುವಿನ ಆರೋಗ್ಯ (MCH)
- ಅಸಾಂಕ್ರಾಮಿಕ ರೋಗಗಳು (NCDs)
- ಆರೋಗ್ಯ ಮತ್ತು ಯೋಗಕ್ಷೇಮ ಕೇಂದ್ರಕ್ಕೆ ಸಂಬಂಧಿಸಿದ ಸೇವೆಗಳು
- ಇತರೆ ಆದ್ಯತೆಗಳು

ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಮುಂದಿನ ಹಂತದಲ್ಲಿ ತಮ್ಮ ಕಾರ್ಯಕ್ಷೇತ್ರಕ್ಕೆ ತಕ್ಕಂತೆ ಹೆಚ್ಚಿನ ತುರ್ತು ಅಥವಾ ಪ್ರಸ್ತುತವಾದ ಆದ್ಯತಾ ವಲಯಗಳನ್ನು ಆಯ್ಕೆ ಮಾಡಬಹುದು. ಆರೋಗ್ಯ ಸಂಗಮ ಕಾರ್ಯಕ್ರಮದ ಕೈಪಿಡಿ (ಟೂಲ್ ಕಿಟ್) ಮಾನದಂಡಗಳು, ಮಿಷನ್ ಅಂತ್ಯೋದಯ ಸಮೀಕ್ಷೆಯ ವಾರ್ಷಿಕ ದತ್ತಾಂಶವನ್ನು ಒಳಗೊಂಡಿದೆ. ಈ ದತ್ತಾಂಶವು ಪುರಾವೆ ಆಧಾರಿತವಾಗಿದ್ದು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ (GPDP) ಪ್ರಕ್ರಿಯೆಗೆ ನಿರ್ಣಾಯಕವಾಗಿದೆ. ಮಿಷನ್ ಅಂತ್ಯೋದಯ ಸಮೀಕ್ಷೆಯಿಂದ ಬಂದಿರುವ ದತ್ತಾಂಶವು ವಿಫಲವಾಗಿದ್ದು, ಸಮಸ್ಯೆ ಪರಿಹಾರ ಮತ್ತು ನಿರ್ಧಾರ ತೆಗೆದುಕೊಳ್ಳುವಿಕೆಗೆ ಬಳಕೆಯಾಗುತ್ತಿಲ್ಲ. ಆರೋಗ್ಯ ಸಂಗಮ ಟ್ರ್ಯಾಕಿಂಗ್ ಪರಿಕರವನ್ನು ಬಳಸಿಕೊಳ್ಳುವ ಮೂಲಕ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಈ ಅಂತರವನ್ನು ನಿವಾರಿಸಬಹುದು ಮತ್ತು ಪರಿಣಾಮಕಾರಿಯಾಗಿ ಸಮಸ್ಯೆ ಪರಿಹಾರ ಮತ್ತು ತಿಳುವಳಿಕೆಯುಳ್ಳ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಇಲ್ಲಿನ ಒಳನೋಟಗಳನ್ನು ಪರಿವರ್ತಿಸಬಹುದು.

**ಈ ವಿಭಾಗವನ್ನು ಭರ್ತಿ ಮಾಡುವ ವಿಧಾನ:** ಪ್ರತಿಯೊಂದೂ ಸಭೆಯಲ್ಲಿ ಟ್ರ್ಯಾಕಿಂಗ್ ಕಾರ್ಯವನ್ನು ಮಾಡುವುದು. ಪ್ರತಿಯೊಂದು ಆದ್ಯತೆಯ ವಲಯದ ಸೂಚಕವಾರು ದತ್ತಾಂಶವನ್ನು ಸಭೆಯ ದಿನಾಂಕಕ್ಕಿಂತ **10** ದಿನಗಳ ಮೊದಲು ನೀಡಬೇಕು.

**ದತ್ತಾಂಶ ನವೀಕರಣ ಪ್ರಕ್ರಿಯೆ:** ಪಿ.ಡಿ.ಒ/PDO ಮತ್ತು ದ್ವಿತೀಯ ದರ್ಜೆ ಸಹಾಯಕ (SDA) ಸೇರಿ CHO, ICDS (AWWs) ಅಥವಾ ಶಿಕ್ಷಣ (ಮುಖ್ಯೋಪಾಧ್ಯಾಯರು) ಕ್ಷೇತ್ರದ ಭಾಗೀದಾರರೊಂದಿಗೆ ಸಮನ್ವಯ ಸಾಧಿಸಿ ತಮ್ಮ–ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಸೂಚಕಗಳ ಕುರಿತು ದತ್ತಾಂಶವನ್ನು ಪಡೆಯುತ್ತಾರೆ. ಇತರ ಹೆಚ್ಚಿನ ಸೂಚಕಗಳಿಗೆ ಸಂಬಂಧಿಸಿದ ದತ್ತಾಂಶವನ್ನು ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH) ವಿಭಾಗ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯೋಜನೆಗಳು ಮತ್ತು ಅರ್ಹತೆಗಳು ಒಳಗೊಂಡ ದಾಖಲೆಗಳಿಂದ ಪಡೆಯುತ್ತಾರೆ. ಇದು ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿರುತ್ತವೆ. ಎಲ್ಲಾ ಘಟಕಗಳಿಂದ ಸಂಗ್ರಹಿಸಿದ ದತ್ತಾಂಶವನ್ನು ಪಿಡಿಒ ಮತ್ತು SDA ನವೀಕರಿಸಿ, ಪೂರ್ಣಗೊಳಿಸುತ್ತಾರೆ. ಆರೋಗ್ಯ ಸಂಗಮ ತ್ರೈಮಾಸಿಕ ಸಭೆಗೆ ಕನಿಷ್ಠ ಒಂದು ವಾರ ಮುಂಚಿತವಾಗಿ ಈ ದತ್ತಾಂಶವನ್ನು ಸಿದ್ಧಗೊಳಿಸಬೇಕು. ಆರೋಗ್ಯ ಸಂಗಮ ಟ್ರ್ಯಾಕಿಂಗ್ ಟೂಲ್ ದತ್ತಾಂಶ ಸರಿಯಾಗಿದೆ ಮತ್ತು ದೋಷಗಳಿಂದ ಮುಕ್ತವಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು. ದತ್ತಾಂಶದ ಗುಣಮಟ್ಟದ ಪರಿಶೀಲನೆ ಮಾಡಬೇಕು.

**ಸೂಚಕಗಳ ಸ್ಕೋರಿಂಗ್ ಮತ್ತು ವಿಶ್ಲೇಷಿಸುವ ವಿಧಾನಗಳು:** ಟ್ರಾಫಿಕ್ ಲೈಟ್ ಸ್ಕೋರಿಂಗ್ ವ್ಯವಸ್ಥೆ ಬಳಸಿ, ಕಾರ್ಯಕ್ಷಮತೆಯನ್ನು ಗ್ರೇಡ್ ನೀಡುವುದು. ಕಳಪೆ ಕಾರ್ಯಕ್ಷಮತೆಗೆ ಕೆಂಪು, ಸಾಧಾರಣ ಕಾರ್ಯಕ್ಷಮತೆಗೆ ಹಳದಿ ಮತ್ತು ಉತ್ತಮ ಕಾರ್ಯಕ್ಷಮತೆಗೆ ಹಸಿರು ಸಂಕೇತವನ್ನು ನೀಡುವುದು.

### 6.2.3 ಆರೋಗ್ಯ ಸಂಗಮ ಕ್ರಿಯಾಯೋಜನೆ

**ಕ್ರಿಯಾ ಯೋಜನಾ ತಂಡದ ಪ್ರಮುಖ ಸದಸ್ಯರು** – ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಿಡಿಒ, ದ್ವಿತೀಯ ದರ್ಜೆ ಸಹಾಯಕ (SDA), ಆರೋಗ್ಯ ಸಂಗಮ ಸುಗಮಗಾರರ ನೇತೃತ್ವದ ಮತ್ತು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸದಸ್ಯರು.

ಆರೋಗ್ಯ ಸಂಗಮ ಕ್ರಿಯಾಯೋಜನೆಯ ಪರಿಕರವು ಆದ್ಯತಾ ಮ್ಯಾಪಿಂಗ್ ಮತ್ತು ಯೋಜನಾ ನಮೂನೆಯನ್ನು ಒಳಗೊಂಡಿರಬೇಕು. ಆದ್ಯತಾ ಮ್ಯಾಪಿಂಗ್ ಮಾಡಬೇಕು. ಅದರ ಮೂಲಕ ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಸಾಮೂಹಿಕ ಅನುಷ್ಠಾನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಗುರುತಿಸಿ, ಅವುಗಳಿಗೆ ಆದ್ಯತೆ ನೀಡಬೇಕು.

- ಆದ್ಯತೆ ನೀಡಿದ ಸೂಚಕಗಳು ಕಡಿಮೆ ಅಂಕಗಳನ್ನು ಪಡೆದರೆ ಮುಂದಿನ ಕ್ರಮಕ್ಕಾಗಿ ಕೆಂಪು ಮತ್ತು ಹಳದಿ ಎಂದು ಗುರುತಿಸಲಾಗುತ್ತದೆ
- ಈ ಸೂಚಕಗಳು ಕಡಿಮೆ ಕಾರ್ಯಕ್ಷಮತೆಗೆ ಆಧಾರವಾಗಿರುವ ಕಾರಣಗಳನ್ನು ಗುರುತಿಸುವುದು.

ಪ್ರತಿಯೊಂದು ಆದ್ಯತೆಯ ಸಮಸ್ಯೆಯ ಪ್ರದೇಶಕ್ಕೂ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಒಟ್ಟಾಗಿ ಯೋಜನಾ ಮ್ಯಾಟ್ರಿಕ್ಸ್ ಅನ್ನು ಭರ್ತಿ ಮಾಡಬೇಕು. ಈ ಪರಿಕರವು ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಗುರುತಿಸಿದ ಪ್ರಮುಖ ಅಂತರಗಳನ್ನು ಪರಿಹರಿಸಲು ಬಳಸಬಹುದಾದ ಕ್ರಿಯಾ ಯೋಜನೆ ನಮೂನೆಯನ್ನು ಒದಗಿಸುತ್ತದೆ.

**ಪರಿಕರವನ್ನು ಭರ್ತಿ ಮಾಡುವ ಸಮಯ** – ತ್ರೈಮಾಸಿಕ ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಸಭೆಗಳಲ್ಲಿ ಈ ಪರಿಕರವನ್ನು ಸಾಮೂಹಿಕವಾಗಿ ತುಂಬಿಸಬೇಕು.

**ಕ್ರಿಯಾ ಯೋಜನೆ ಒಪ್ಪಂದ ಬಯಸುವುದು** – ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಕ್ರಿಯಾ ಯೋಜನೆಯನ್ನು ಸಭೆಯ ನಡಾವಳಿಗಳಾಗಿ ದಾಖಲಿಸಬೇಕು. ಎಲ್ಲಾ ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರು ಸಹಿ ಮಾಡಬೇಕು. ಮುಂಬರುವ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಅದನ್ನು ಪ್ರಸ್ತುತಪಡಿಸಬೇಕು.

ತ್ರೈಮಾಸಿಕ ಸಭೆಗಳ ನಂತರ ಆರೋಗ್ಯ ಸಂಗಮ ಕ್ರಿಯಾ ಯೋಜನೆಯ ಅನುಷ್ಠಾನವನ್ನು ತಕ್ಷಣವೇ ಪ್ರಾರಂಭಿಸಬೇಕು. ಅನುಷ್ಠಾನ ಮಾಡುವ ಜವಾಬ್ದಾರಿಯು ಪ್ರತಿ ಗುರುತಿಸಲಾದ ಕ್ರಿಯೆಯ ಪ್ರದೇಶಕ್ಕೆ ಗೊತ್ತುಪಡಿಸಿದ ಗ್ರಾಮ ಪಂಚಾಯಿತಿ ಕಾರ್ಯಪಡೆಯ ಸದಸ್ಯರದಾಗಿರುತ್ತದೆ.

ಉದಾಹರಣೆಗೆ– ಇದು ಗ್ರಾಮ ಪಂಚಾಯಿತಿ ಅಧ್ಯಕ್ಷರು ಅಥವಾ ಗ್ರಾಮ ಪಂಚಾಯಿತಿ ಸದಸ್ಯರ ಜೊತೆಗೆ ಸ್ವಚ್ಚತೆಗೆ ನೈರ್ಮಲ್ಯ ಕಾರ್ಮಿಕರ ತಂಡ ದೊಂದಿಗೆ ಚರಂಡಿ ಸ್ವಚ್ಛತೆಯನ್ನು ಖಾತ್ರಿಪಡಿಸಿಕೊಳ್ಳಬಹುದು; ತಾಯಂದಿರು ಮತ್ತು ನವಜಾತ ಶಿಶುಗಳಿಗೆ ಅಗತ್ಯವಿರುವ ಮನೆ ಭೇಟಿಗಳನ್ನು ಪೂರ್ಣಗೊಳಿಸಲು ಆಶಾ ಕಾರ್ಯಕರ್ತೆಯರ ತಂಡದ ಮೇಲ್ವಿಚಾರಣೆ; ಅಥವಾ ಅಸಾಂಕ್ರಾಮಿಕ ರೋಗಗಳ ತಪಾಸಣೆ ಗುರಿಗಳ ಸಾಧನೆಯನ್ನು ಖಾತ್ರಿಪಡಿಸುವ CHOಗಳು; ಮುಖ್ಯೋಪಧ್ಯಾಯರು ಮತ್ತು ಅವರ ಅವರ ಶಾಲಾ ಶಿಕ್ಷಕರ ತಂಡದೊಂದಿಗೆ ಹೆಣ್ಣು ಮಕ್ಕಳ ಹಾಜರಾತಿಯನ್ನು ಹೆಚ್ಚಿಸುವುದು ಇತ್ಯಾದಿ.

### 6.2.4 ಗ್ರಾಮ ಪಂಚಾಯಿತಿ ಕಾರ್ಯಪಡೆಯ ಪರಿಶೀಲನೆ ಮತ್ತು ಅಳವಡಿಕೆ

ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರು ಪರಿಶೀಲನೆ ಮತ್ತು ಅಳವಡಿಕೆ (ಚೆಕ್ & ಅಡಾಪ್ಟ್) ಪರಿಕರವನ್ನು ಭರ್ತಿ ಮಾಡಬೇಕು. ಸದಸ್ಯರು ನಿಯಮಿತವಾಗಿ ಕಾರ್ಯ ಪ್ರಗತಿಯನ್ನು ಪರಿಶೀಲಿಸಿ, ಸಮಸ್ಯೆಗಳಿಗೆ ಸಂಬಂಧಿಸಿದ ಒಳನೋಟಗಳೊಂದಿಗೆ ಕ್ರಮ ವಹಿಸಬೇಕು. ಸ್ಥಿರವಾದ ಸುಧಾರಣೆ ಅಥವಾ ಮರುಕಳಿಸುವ ಅಂತರವನ್ನು ಗುರುತಿಸಲು ಕಾರ್ಯಕ್ಷಮತೆಯನ್ನು ಹಿಂದಿನ ದತ್ತಾಂಶದೊಂದಿಗೆ ಹೋಲಿಸಬೇಕು. ತಂತ್ರಗಳನ್ನು ಪರಿಷ್ಕರಿಸಲು ಮತ್ತು ಸಂಪನ್ಮೂಲಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಿಯೋಜಿಸಲು ಪರಿಕರದ ಉಪಯುಕ್ತ ಟಿಪ್ಪಣಿಗಳನ್ನು ಬಳಸಿಕೊಳ್ಳಬೇಕು.

**ಗ್ರಾಮ ಪಂಚಾಯಿತಿ ಕಾರ್ಯಪಡೆ ಪರಿವೀಕ್ಷಣೆ ಪ್ರಸ್ತುತ ಮತ್ತು ವರದಿ ಮಾಡುವಿಕೆಗಾಗಿ ಡಿಜಿಟಲ್ ಪ್ಲಾಟ್‌ಫಾರ್ಮ್:**
ಗ್ರಾಮ ಪಂಚಾಯಿತಿ ಕಾರ್ಯಪಡೆ ಸೂಚಕಗಳಿಗಾಗಿ ಎಲ್ಲಾ ಪ್ರಸ್ತುತ–ಸಮಯದ ಮೇಲ್ವಿಚಾರಣೆ ಕ್ರಿಯೆಗಳನ್ನು ನಮೂದಿಸಿ ಡಿಜಿಟಲ್ ಪ್ಲಾಟ್‌ಫಾರ್ಮ್ ಅನ್ನು ಅಭಿವೃದ್ಧಿಪಡಿಸಲಾಗುತ್ತದೆ. KHPT ಆಂತರಿಕ ಡಿಜಿಟಲ್ ತಂಡವು ಟ್ಯಾಬ್/ಮೊಬೈಲ್‌ಗಳಲ್ಲಿ ಬಳಕೆಗಾಗಿ ವೆಬ್ ಆಧಾರಿತ ಮೊಬೈಲ್ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸುತ್ತದೆ. ನಿರ್ದಿಷ್ಟಪಡಿಸಿದ ತಲುಪಬೇಕಾದ ಸರ್ವರ್‌ನಲ್ಲಿ ಆರ್ಕಿಟೆಕ್ಚರ್ ಅನ್ನು ಹಂಚಿಕೊಳ್ಳಲು ಮತ್ತು ಹೋಸ್ಟ್ ಮಾಡುವ ರೀತಿಯಲ್ಲಿ ಡಿಜಿಟಲ್ ಅಪ್ಲಿಕೇಶನ್ ಅನ್ನು ನಿರ್ಮಿಸಲಾಗುತ್ತದೆ. ಡಿಜಿಟಲ್ ಉಪಕ್ರಮವು ವರದಿ ಮಾಡುವ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ. ಅದು ಎಲ್ಲಾ ಹಂತಗಳಲ್ಲಿನ ಕೆಲಸಗಾರರಿಗೆ ಮತ್ತು ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರಿಗೆ ಅವರ ಕಾರ್ಯಕ್ಷಮತೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ಅಸಮರ್ಪಕತೆಯನ್ನು ಗುರುತಿಸಲು ಅನುವು ಮಾಡಿಕೊಡುತ್ತದೆ. ಇಂಟಿಗ್ರೇಟೆಡ್ ಡ್ಯಾಶ್‌ಬೋರ್ಡ್ ಅನ್ನು ಪ್ರತಿಯೊಂದು ಸೂಚಕಗಳಿಗೆ ಆಕರ್ಷಕವಾದ ವಿನ್ಯಾಸದೊಂದಿಗೆ ನಿರ್ಮಿಸಲಾಗುವುದು. ಇದು ಸ್ವಯಂ ವಿವರಣಾತ್ಮಕ ಮತ್ತು ಎಲ್ಲಾ ಹಂತಗಳಲ್ಲಿ ಅರ್ಥಮಾಡಿಕೊಳ್ಳಲು ಹೆಚ್ಚು ಸುಲಭವಾಗುತ್ತದೆ.

## 6.3 ಹಿಂದಿನ ಸಭೆಯ ಅನುಸರಣಾ ಕ್ರಮ

- ನಿರ್ದಿಷ್ಟ ಸದಸ್ಯರು ಅಥವಾ ಇಲಾಖೆಗಳಿಗೆ ವಹಿಸಲಾದ ಕಾರ್ಯಗಳ ಅನುಷ್ಠಾನದ ಸ್ಥಿತಿಯನ್ನು ಮೌಲ್ಯಮಾಪನ ಮಾಡುವುದು.
- ಹಿಂದಿನ ಸಭೆಯಲ್ಲಿ ಗುರುತಿಸಲಾದ ಕ್ರಿಯಾ ಅಂಶಗಳ ಪ್ರಗತಿಯನ್ನು ಪರಿಶೀಲಿಸಿ ಮತ್ತು ಚರ್ಚಿಸಿ.
- ನಿರ್ದಿಷ್ಟ ಸದಸ್ಯರು ಅಥವಾ ಇಲಾಖೆಗಳಿಗೆ ವಹಿಸಲಾದ ಕಾರ್ಯಗಳ ಅನುಷ್ಠಾನದ ಸ್ಥಿತಿಯನ್ನು ಮೌಲ್ಯಮಾಪನ ಮಾಡುವುದು.
- ಎದುರಾಗುವ ಯಾವುದೇ ವಿಳಂಬಗಳು ಅಥವಾ ಸವಾಲುಗಳನ್ನು ಪರಿಹರಿಸಿ ಮತ್ತು ಅವುಗಳನ್ನು ಪರಿಹರಿಸಲು ಪರಿಹಾರಗಳನ್ನು ಅನ್ವೇಷಿಸುವುದು.
- ಗ್ರಾಮ ಪಂಚಾಯಿತಿ ಕಾರ್ಯಪಡೆ ಸೇವೆಗಳಿಂದ ಪ್ರಯೋಜನ ಪಡೆದ ಸಮುದಾಯದ ಸದಸ್ಯರಿಂದ ಅನುಭವ ಹಂಚಿಕೊಳ್ಳಲು ಅವಕಾಶ ನೀಡಲಾಗುವುದು.
- VHSNC ಗಳು, JAS, SDMC ಗಳು, ಮಹಿಳಾ ಮತ್ತು ಮಕ್ಕಳ ಆರೈಕೆ ಮತ್ತು ರಕ್ಷಣಾ ಸಮಿತಿ (WCCPC) ಅಥವಾ ಇತರ ಗ್ರಾಮ ಮಟ್ಟದ ಸಮಿತಿಗಳಲ್ಲಿ ಗುರುತಿಸಲಾದ ಪ್ರಮುಖ ಕ್ರಿಯಾ ಅಂಶಗಳು, ಪ್ರಗತಿ ನವೀಕರಣಗಳು ಮತ್ತು ನಿರ್ಧಾರಗಳನ್ನು ಗ್ರಾಮ ಪಂಚಾಯಿತಿ ಕಾರ್ಯಪಡೆಗಳಿಗೆ ಮಾಹಿತಿಗಾಗಿ ಅಥವಾ ಅಗತ್ಯ ಬೆಂಬಲಕ್ಕಾಗಿ ಪ್ರಸ್ತುತಪಡಿಸಲಾಗುತ್ತದೆ.

## 6.4 ಮುಂದಿನ ಹೆಜ್ಜೆಗಳು

- ಪ್ರಸ್ತುತ ಚರ್ಚೆಗಳು ಮತ್ತು ಕಂಡುಬರುವ ಅಗತ್ಯಗಳಿಗೆ ಅನುಗುಣವಾಗಿ ಆದ್ಯತೆ ನೀಡಿ ಅದರ ಆಧಾರದ ಮೇಲೆ ಹೊಸ ಕ್ರಿಯೆಗಳನ್ನು ಗುರುತಿಸುವುದು.
- ಹಂಚಿಕೆ ಮಾಡಿದ ಜವಾಬ್ದಾರಿಗಳನ್ನು ನಿರ್ದಿಷ್ಟ ಸದಸ್ಯರು ಅಥವಾ ಇಲಾಖೆಗಳಿಗೆ ನೀಡಿ ಪಾತ್ರ ಸ್ಪಷ್ಟತೆಯನ್ನು ಖಚಿತಪಡಿಸುವುದು
- ಪ್ರತಿಯೊಂದು ಕಾರ್ಯಕ್ಕೆ ನಿಗದಿತ ಕಾಲಮಿತಿ ಮತ್ತು ಮೈಲಿಗಲ್ಲುಗಳನ್ನು ನಿರ್ಧರಿಸಿ, ಕಾರ್ಯಗತಿಯ ವೇಗವನ್ನು ಹೆಚ್ಚಿಸಿ ಮತ್ತು ಹೊಣೆಗಾರಿಕೆಯನ್ನು ನೀಡುವುದು.
- ಕಾರ್ಯತಂತ್ರಗಳನ್ನು ಪರಿಶೀಲಿಸಿ, ಸಾಧ್ಯವಿರುವ ಸವಾಲುಗಳನ್ನು ಮುನ್ಸೂಚನೆ ಮಾಡಿ ಮತ್ತು ಒಪ್ಪಿದ ಕ್ರಮಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದು.
- ಯಶಸ್ವಿ ಅನುಷ್ಠಾನಕ್ಕಾಗಿ ಹೆಚ್ಚುವರಿ ಸಂಪನ್ಮೂಲಗಳು ಅಥವಾ ಬೆಂಬಲ ಯೋಜನೆಗಳನ್ನು ಪ್ಲಾನ್ ಮಾಡುವುದು.

## 6.5 ದಾಖಲಾತಿ ಕುರಿತು ಚರ್ಚೆ

- ಸಭೆಯ ನಡಾವಳಿಗಳನ್ನು ಸ್ಪಷ್ಟ ಮತ್ತು ಸಂಕ್ಷಿಪ್ತವಾಗಿ ದಾಖಲು ಮಾಡಬೇಕು, ಅದರಲ್ಲೂ ಸದಸ್ಯರ ಹಾಜರಾತಿ ವಿವರಗಳು, ಸಹಿಗಳು ಮತ್ತು ಕೋರಂ ಸ್ಥಿತಿಯನ್ನು ಸೂಚಿಸಬೇಕು.
- ವಾಟ್ಸಾಪ್ ಗುಂಪುಗಳ ಮೂಲಕ ದಾಖಲಿಸಲಾದ ನಡಾವಳಿಗಳನ್ನು ಎಲ್ಲಾ ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಸದಸ್ಯರಿಗೆ ಕಳುಹಿಸಬೇಕು.

## 6.6 ಸಭೆಯ ಸಮಾಪ್ತಿ

- ಸಭೆಯಲ್ಲಿ ಚರ್ಚಿಸಲಾದ ಪ್ರಮುಖ ವಿಷಯಗಳ ಸಾರಾಂಶಗೊಳಿಸುವುದು, ತೀರ್ಮಾನದ ಮೇರೆಗೆ ಕೈಗೊಳ್ಳಬೇಕಾದ ಕ್ರಮಗಳು ಮತ್ತು ಜವಾಬ್ದಾರಿಗಳನ್ನು ಸ್ಪಷ್ಟವಾಗಿ ಉಲ್ಲೇಖಿಸುವುದು.
- ಸಭೆಯ ಅಂತಿಮ ಒಳಹರಿವು ಕುರಿತು ಸದಸ್ಯರನ್ನು ಅಭಿಪ್ರಾಯ ಕೇಳುವುದು. ಬಗೆಹರಿಯದ ಪ್ರಶ್ನೆಗಳಿಗೆ ಅನುಮಾನಗಳಿಗೆ ಸ್ಪಷ್ಟತೆ ನೀಡುವುದು.
- ಮುಂದಿನ ಸಭೆಯ ದಿನಾಂಕ, ಸಮಯ, ಮತ್ತು ಸ್ಥಳವನ್ನು ನಿರ್ದಿಷ್ಟಪಡಿಸಿ ಖಚಿತಪಡಿಸಿಕೊಳ್ಳುವುದು.
- ಎಲ್ಲಾ ಸದಸ್ಯರ ಸಕ್ರಿಯ ಭಾಗವಹಿಸುವಿಕೆ ಮತ್ತು ಕೊಡುಗೆಗೆ ಕೃತಜ್ಞತೆ ಸಲ್ಲಿಸುವುದು.

# ಹಂತ 7 ಆರೋಗ್ಯ ಸಂಗಮ ಕಾರ್ಯಕ್ರಮದ ನಿರ್ವಹಣೆ

ಆರೋಗ್ಯ ಸಂಗಮ ಯೋಜನೆಯ ದೃಷ್ಟಿಕೋನ ಮತ್ತು ಧ್ಯೇಯೋದ್ದೇಶಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ತಂಡಗಳು ಪರಿಣಾಮಕಾರಿ ನಿರ್ವಹಣಾ ತಂತ್ರಗಳನ್ನು ಅಳವಡಿಸಿಕೊಳ್ಳಬೇಕು. ಆರಂಭಿಕ ಹಂತದಲ್ಲಿಯೂ ಸಹ, ಆರೋಗ್ಯ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಸುಧಾರಣೆ ಮಾಡುವುದರತ್ತ ಗಮನ ಹರಿಸಬೇಕು. ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH) ಚಟುವಟಿಕೆಗಳು, ಸಾಮಾಜಿಕ ಪರಿಣಾಮಗಳನ್ನು ಹೊಂದಿರುವ ಸಮಸ್ಯೆಗಳು (ಉದಾ: ಮಾದಕ ವಸ್ತು ಬಳಕೆ, ಬಾಲ್ಯ ವಿವಾಹ) ಮತ್ತು ಇತರ ಅಭಿವೃದ್ಧಿ ಆದ್ಯತೆಗಳಿಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಪಾಲುದಾರರ ನಡುವೆ ಸಮನ್ವಯ ಮತ್ತು ಏಕೀಕರಣ ಅಗತ್ಯವಾಗಿರುತ್ತದೆ. ಜೊತೆಗೆ ಅಸ್ತಿತ್ವದಲ್ಲಿರುವ ಪಂಚಾಯತ್ ರಾಜ್ ವ್ಯವಸ್ಥೆ ಸಾರ್ವಜನಿಕ ಸೇವೆಗಳ ಜವಾಬ್ದಾರಿಯನ್ನು ಹೊಂದಿರುತ್ತದೆ. ಪಂಚಾಯತ್ ರಾಜ್ ವ್ಯವಸ್ಥೆ ಅಸ್ತಿತ್ವದಲ್ಲಿರುವ ಸಾರ್ವಜನಿಕ ಸೇವೆಗಳ ಜವಾಬ್ದಾರಿಯನ್ನು ಹೊಂದಿರುವ ಕಾರಣ, ಯೋಜನೆಯ ಅನುಷ್ಠಾನದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಕಾರ್ಯಸಾಧನೆ ಹೆಚ್ಚಿಸಲು ಬಹುವಲಯ ಸಹಯೋಗವು ಪ್ರಮುಖವಾಗಿದೆ.

ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ಆರೋಗ್ಯ, ಶಿಕ್ಷಣ ಮತ್ತು ICDS ನಂತಹ ಪ್ರಮುಖ ಇಲಾಖೆಗಳ ಪಾಲುದಾರಿಕೆಯಲ್ಲಿ ಕಾರ್ಯನಿರ್ವಹಿಸುತ್ತವೆ. ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಖಚಿತಪಡಿಸಲು, ಪ್ರತಿ ಇಲಾಖೆಯ ನೋಡಲ್ ಅಧಿಕಾರಿಗಳು ಕಡ್ಡಾಯವಾಗಿ ಸಹಯೋಗ ನೀಡಬೇಕು. ಇದರಿಂದ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ತಮ್ಮ ನಿಗದಿತ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಲು ಅವಕಾಶ ಲಭ್ಯವಾಗುತ್ತದೆ. ಆರೋಗ್ಯ ಸಂಗಮದ ಸುಗಮ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಯೋಜನಾ ಸಂಚಾಲನಾ ಸಮಿತಿಗಳನ್ನು (Project Steering Committees) ರಚಿಸಲಾಗುವುದು.

## 7.1 ಆರೋಗ್ಯ ಸಂಗಮ ರಾಜ್ಯ ಮಟ್ಟದ ಸಂಚಾಲನಾ ಸಮಿತಿ

ರಾಜ್ಯ ಮಟ್ಟದಲ್ಲಿ ರಚಿಸಲಾದ ಆರೋಗ್ಯ ಸಂಗಮ ಸಂಚಾಲನಾ ಸಮಿತಿಯು ಈ ಕೆಳಗಿನ ಸದಸ್ಯರನ್ನು ಒಳಗೊಂಡಿರುತ್ತದೆ:

- ಅಪರ ಮುಖ್ಯ ಕಾರ್ಯದರ್ಶಿ/ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ (ಅಧ್ಯಕ್ಷರು)
- ಪ್ರಧಾನ ಕಾರ್ಯದರ್ಶಿ, ಪಂಚಾಯತ್ ರಾಜ್ (ಸದಸ್ಯರು)
- ಆಯುಕ್ತರು, ಪಂಚಾಯತ್ ರಾಜ್ (ಸದಸ್ಯ ಕಾರ್ಯದರ್ಶಿ)
- ನಿರ್ದೇಶಕ, ಅಭಿವೃದ್ಧಿ ಪಂಚಾಯತ್ ರಾಜ್ (ಆರೋಗ್ಯ ಸಂಗಮದ ರಾಜ್ಯ ನೋಡಲ್ ಅಧಿಕಾರಿ)
- ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
- ಪ್ರಧಾನ ಕಾರ್ಯದರ್ಶಿ, ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
- ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಾಮರಾಜನಗರ ಮತ್ತು ರಾಯಚೂರು ಜಿಲ್ಲೆಗಳು
- ರಾಜ್ಯ ಮಟ್ಟದ ಕಾರ್ಯನಿರ್ವಹಣಾ ತಾಂತ್ರಿಕ ಪಾಲುದಾರರು – ಕೆಹೆಚ್‌ಪಿಟಿ/ಜಾನ್ಸ್ ಹಾಪ್ಕಿನ್ಸ್ ಇಂಡಿಯಾದ ಪ್ರತಿನಿಧಿ (ಪ್ರಾಯೋಗಿಕ ಹಂತಕ್ಕೆ ಮಾತ್ರ)

ಪಂಚಾಯತ್ ರಾಜ್ ಆಯುಕ್ತರು ರಾಜ್ಯ ಮಟ್ಟದಲ್ಲಿ ಯೋಜನೆಯ ಒಟ್ಟಾರೆ ನಾಯಕತ್ವವನ್ನು ವಹಿಸುವರು. ಕಾಲಕಾಲಕ್ಕೆ ಯೋಜನೆಗೆ ಸಂಬಂಧಿಸಿದ ನೀತಿ ನಿರೂಪಣೆ, ಅನುಮೋದನೆ ಮತ್ತು ಹಣಕಾಸು ಕಾರ್ಯವಿಧಾನಗಳನ್ನು ನೋಡಿಕೊಳ್ಳುವರು. ಅಲ್ಲದೇ ಆರೋಗ್ಯ ಸಂಗಮ ಸಂಚಾಲನಾ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವರು. ಸಂಚಾಲನಾ ಸಮಿತಿಯು ಪ್ರತಿ ಆರು ತಿಂಗಳಿಗೊಮ್ಮೆ ಸಭೆ ಸೇರಿ ಆರೋಗ್ಯ ಸಂಗಮದ ಕಾರ್ಯಪ್ರಗತಿಯನ್ನು ಪರಿಶೀಲಿಸುವುದು. ಎದುರಾಗುವ ಸವಾಲುಗಳನ್ನು ನಿವಾರಿಸಲು ಕ್ರಮಕೈಗೊಳ್ಳುವುದು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕಾಲ ಕಾಲಕ್ಕೆ ಆರೋಗ್ಯ ಸಂಗಮದ ಪ್ರಗತಿ ಮತ್ತು ಹಿಮ್ಮಾಹಿತಿಯನ್ನು ಸಂಚಾಲನಾ ಸಮಿತಿಯ ಗಮನಕ್ಕೆ ತಂದು ಸುಧಾರಣೆಗೆ ಸಹಕರಿಸುವರು.

## 7.2 ಆರೋಗ್ಯ ಸಂಗಮ ಜಿಲ್ಲಾ ಮಟ್ಟದ ಸಂಚಾಲನಾ ಸಮಿತಿ

ಜಿಲ್ಲಾ ಮಟ್ಟದಲ್ಲಿ, ಆರೋಗ್ಯ ಸಂಗಮ ಸಂಚಾಲನಾ ಸಮಿತಿಯ ನೇತೃತ್ವವನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ವಹಿಸುವರು. ಈ ಸಮಿತಿಯು ಪ್ರತಿ ತ್ರೈಮಾಸಿಕಕ್ಕೆ ಒಮ್ಮೆ ಸಭೆ ಸೇರಿ ಕಾರ್ಯಕ್ರಮದ ಪ್ರಗತಿಯನ್ನು ಪರಿಶೀಲನೆ ಮಾಡುವುದು. ಉದಾ: ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಕ್ರಿಯೆ ಯೋಜನೆ ಅನುಷ್ಠಾನ, ಗ್ರಾಮ ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿ ಜಾರಿಗೆ ತರುತ್ತಿರುವ ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH) ಚಟುವಟಿಕೆಗಳು, ಆರೋಗ್ಯ, ಶಿಕ್ಷಣ, ಸಾಮಾಜಿಕ ಭದ್ರತಾ ಯೋಜನೆಗಳು, ಬಾಲ್ಯವಿವಾಹ ಇತ್ಯಾದಿಗಳ ಪರಿಶೀಲನೆ ಮಾಡುವುದು. ಈ ಸಮಿತಿಯು ಬಹುವಲಯಗಳ ಸಹಯೋಗವನ್ನು ಖಚಿತಪಡಿಸುವುದರ ಜೊತೆಗೆ ಯೋಜನಾ ತಂತ್ರದ ಪರಾಮರ್ಶೆ, ಮತ್ತು ಅಗತ್ಯವಿದ್ದಲ್ಲಿ ಕಾರ್ಯಕ್ರಮ ಸುಧಾರಣೆ ತರುವ ಕಾರ್ಯವನ್ನು ನಿರ್ವಹಿಸುವುದು.

ಜಿಲ್ಲಾ ಮಟ್ಟದಲ್ಲಿ ರಚಿಸಲಾದ ಆರೋಗ್ಯ ಸಂಗಮ ಸಂಚಾಲನಾ ಸಮಿತಿಯು ಈ ಕೆಳಗಿನ ಸದಸ್ಯರನ್ನು ಒಳಗೊಂಡಿರುತ್ತದೆ:

- ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ (ಅಧ್ಯಕ್ಷರು)
- ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯಿತಿ (ಸದಸ್ಯ ಕಾರ್ಯದರ್ಶಿ ಮತ್ತು ಆರೋಗ್ಯ ಸಂಗಮದ ಜಿಲ್ಲಾ ನೋಡಲ್ ಅಧಿಕಾರಿಗಳು)
- ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ (ಆರೋಗ್ಯ ಸಂಗಮದ ತಾಲ್ಲೂಕು ನೋಡಲ್ ಅಧಿಕಾರಿಗಳು)
- ಸಹಾಯಕ ನಿರ್ದೇಶಕರು, ಪಂಚಾಯಿತಿ ರಾಜ್– ತಾಲೂಕಾ ಪಂಚಾಯಿತಿ
- ಜಿಲ್ಲಾ ಆರೋಗ್ಯ ಅಧಿಕಾರಿಗಳು
- ಜಿಲ್ಲಾ ಸರ್ವೆಲನ್ಸ್ ಅಧಿಕಾರಿಗಳು, ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳ ನೋಡಲ್ ಅಧಿಕಾರಿಗಳು
- ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (RCH) ಅಧಿಕಾರಿಗಳು
- ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
- ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ
- ರಾಜ್ಯ ತಂಡ ಸದಸ್ಯರು, ಸಾಮಾಜಿಕವಾಗಿ ಜವಾಬ್ದಾರಿ ಸ್ಥಳೀಯ ಆಡಳಿತ ತಂಡ
- ಕೆಹೆಚ್‌ಪಿಟಿ ಸಂಸ್ಥೆಯ ರಾಜ್ಯ ಮತ್ತು ಜಿಲ್ಲಾ ಸಂಯೋಜಕರ ಪ್ರತಿನಿಧಿ

ಈ ಸಮಿತಿ ಸಭೆಯಲ್ಲಿ ಆರೋಗ್ಯ ಸಂಗಮದ ಪ್ರಗತಿಯನ್ನು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪ್ರಸ್ತುತಪಡಿಸುವರು. ಕಾರ್ಯಕ್ರಮದ ಅಳವಡಿಕೆ ಮತ್ತು ಸುಧಾರಣೆಗಾಗಿ ಪ್ರತಿಕ್ರಿಯೆಗಳನ್ನು ಪಡೆಯುವರು.

## 7.3 ಕಾರ್ಯಕ್ರಮ ನಿರ್ವಹಣೆಯ ನೋಡಲ್ ಅಧಿಕಾರಿಗಳು

### ರಾಜ್ಯ ಮಟ್ಟದ ಮುಂದಾಳತ್ವ

**ನಿರ್ದೇಶಕರು, ಅಭಿವೃದ್ಧಿ–ಪಂಚಾಯತ್ ರಾಜ್**

- ರಾಜ್ಯ ಮಟ್ಟದಲ್ಲಿ ಆರೋಗ್ಯ ಸಂಗಮ ಕಾರ್ಯಕ್ರಮದ ಒಟ್ಟಾರೆ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ
- ಆಯುಕ್ತರು/ACS/PRS- DoRDPR ಇವರಿಂದ ಎಲ್ಲಾ ಯೋಜನೆ ಸಂಬಂಧಿತ ಅನುಮೋದನೆಗಳನ್ನು ಪಡೆಯುವುದು
- ಜಿಲ್ಲೆಗಳಿಗೆ ಮಾರ್ಗಸೂಚಿಗಳು, ಆದೇಶಗಳು ಮತ್ತು ಅಗತ್ಯ ಸೂಚನೆಗಳನ್ನು ಹೊರಡಿಸುವುದು.
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪರವಾಗಿ ಸಹಹೋಗ ಇಲಾಖೆಗಳಾದ ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಿಕ್ಷಣ ಇಲಾಖೆಗಳೊಡನೆ ಸಮನ್ವಯ.
- ಯೋಜನೆ ಹಣಕಾಸು/ಸಂಪನ್ಮೂಲ ಅವಶ್ಯಕತೆಗಳಿಗೆ ಅನುಗುಣವಾಗಿ ವಾರ್ಷಿಕ ಆಯವ್ಯಯ ಸಿದ್ಧಪಡಿಸುವುದು ಮತ್ತು ಜಿಲ್ಲೆಗಳಿಗೆ ಅನುದಾನ ಬಿಡುಗಡೆ
- SRLG ಸಲಹೆಗಾರರ ತಂಡದ ನೆರವಿನಿಂದ, ಎಲ್ಲಾ ಯೋಜನಾ ಚಟುವಟಿಕೆಗಳು ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಳಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

### ಜಿಲ್ಲಾ ಮಟ್ಟದ ಮೇಲ್ವಿಚಾರಣೆ

**ಉಪ ಕಾರ್ಯದರ್ಶಿ–ಜಿಲ್ಲಾ ಪಂಚಾಯಿತಿ**

- ಜಿಲ್ಲಾ ಮಟ್ಟದಲ್ಲಿ ಆರೋಗ್ಯ ಸಂಗಮ ಕಾರ್ಯಕ್ರಮದ ಒಟ್ಟಾರೆ ಒಟ್ಟಾರೆ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ
- ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ ಇವರಿಂದ ಎಲ್ಲಾ ಯೋಜನೆ ಸಂಬಂಧಿತ ಅನುಮೋದನೆಗಳನ್ನು ಪಡೆಯುವುದು
- ತಾಲ್ಲೂಕುಗಳಿಗೆ ಮಾರ್ಗಸೂಚಿಗಳು/ಆದೇಶಗಳು/ ಅಗತ್ಯ ಸೂಚನೆಗಳನ್ನು ಹೊರಡಿಸುವುದು.

- ಜಿಲ್ಲಾ ಪಂಚಾಯಿತಿ ಪರವಾಗಿ ಸಹಹೋಗ ಇಲಾಖೆಗಳಾದ ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಿಕ್ಷಣ ಇಲಾಖೆಗಳೊಡನೆ ಸಮನ್ವಯ.
- ಜಿಲ್ಲಾ ಪಂಚಾಯಿತಿ ಅನುಷ್ಠಾನ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ಎಲ್ಲಾ ಯೋಜನಾ ಚಟುವಟಿಕೆಗಳು ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಳಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.
- ಹಣಕಾಸು/ಸಂಪನ್ಮೂಲ ಅವಶ್ಯಕತೆಗಳಿಗೆ ಅನುಗುಣವಾಗಿ ವಾರ್ಷಿಕ ಆಯವ್ಯಯ ಸಿದ್ಧಪಡಿಸುವುದು ಮತ್ತು ತಾಲ್ಲೂಕುಗಳಿಗೆ ಅನುದಾನ ಬಿಡುಗಡೆ
- ಜಿಲ್ಲಾ ಸಂಚಾಲನಾ ಸಮಿತಿ ಸಭೆಗಳನ್ನು ಸಂಘಟಿಸುವುದು ಮತ್ತು ಕಾರ್ಯಕ್ರಮದ ಪ್ರಗತಿಯ ಕುರಿತು ಸಿಇಓ ಜಿಲ್ಲಾ ಪಂಚಾಯಿತಿ ಇವರಿಗೆ ಮಾಹಿತಿ ನೀಡುವುದು.

### ತಾಲೂಕು ಮಟ್ಟದ ಅನುಷ್ಠಾನ

**ಕಾರ್ಯನಿರ್ವಾಹಕ ಅಧಿಕಾರಿ–ತಾಲ್ಲೂಕು ಪಂಚಾಯಿತಿ**

- ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ಕಾಲಕಾಲಕ್ಕೆ ಕಾರ್ಯವಿಧಾನಗಳ ಪರಿಶೀಲನೆ
- ತಾಲ್ಲೂಕು ವ್ಯಾಪ್ತಿಯ ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಆರೋಗ್ಯ ಸಂಗಮ ಕಾರ್ಯಕ್ರಮದ ಒಟ್ಟಾರೆ ಅನುಷ್ಠಾನ ಜವಾಬ್ದಾರಿ
- ಮಾರ್ಗಸೂಚಿಗಳ ಅನುಸಾರ ಗ್ರಾಮ ಪಂಚಾಯಿತಿಗಳಿಗೆ ಆರೋಗ್ಯ ಸಂಗಮ ಸುಗಮಗಾರರ ಆಯ್ಕೆ ಮಾಡುವುದು.
- ಸಹಾಯಕ ನಿರ್ದೇಶಕರು, ಪಂಚಾಯತ್ ರಾಜ್ ತಿಂಗಳಿನಲ್ಲಿ ಒಂದು ಮೇಲ್ವಿಚಾರಣೆಯ ಭೇಟಿ ನೀಡಿ ಪ್ರಗತಿಯನ್ನು ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು.
- ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಕ್ರಿಯಾ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯವಾದ ಅನುಮೋದನೆಗಳು ಮತ್ತು ಸಂಪನ್ಮೂಲಗಳನ್ನು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಹಂತದಿಂದ ಖಚಿತಪಡಿಸಿಕೊಳ್ಳುವುದು
- ಆರೋಗ್ಯ ಸಂಗಮ ಕ್ರಿಯೆ ಯೋಜನೆಗಳ ಅನುಷ್ಠಾನ ಪರಿಶೀಲನೆ ಮಾಡುವುದು ಮತ್ತು ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿಯವರಿಗೆ ಕಾರ್ಯಕ್ರಮದ ಪ್ರಗತಿಯ ಕುರಿತು ಮಾಹಿತಿ ನೀಡುವುದು.

## 7.4 ಆರೋಗ್ಯ ಸಂಗಮದ ರಾಜ್ಯ ಮಟ್ಟದ ಕಾರ್ಯಕ್ರಮ ನಿರ್ವಹಣೆ

ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಸಾಮಾಜಿಕವಾಗಿ ಜವಾಬ್ದಾರಿಯುತ ಸ್ಥಳೀಯ ಆಡಳಿತ (Socially Responsible Local Governance) ಉಪಕ್ರಮಗಳಿಗೆ ನೆರವು ನೀಡುವ ತಾಂತ್ರಿಕ ಸಲಹೆಗಾರರು ಆರೋಗ್ಯ ಸಂಗಮ ಯೋಜನೆಯ ದೈನಂದಿನ ಕಾರ್ಯಕ್ರಮ ನಿರ್ವಹಣೆ ಮತ್ತು ಮೇಲ್ವಿಚಾರಣೆಗೆ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಅವರು ನಿರ್ದೇಶಕರು (ಅಭಿವೃದ್ಧಿ) ಇವರ ಮೇಲ್ವಿಚಾರಣೆಯಲ್ಲಿ ಮತ್ತು ತಾಂತ್ರಿಕ ಪಾಲುದಾರರಾದ ಜಾನ್ಸ್ ಹಾಪ್ಕಿನ್ಸ್ ವಿಶ್ವವಿದ್ಯಾಲಯ ಹಾಗೂ ಕೆಹೆಚ್‌ಪಿಟಿ ಸಹಯೋಗದಲ್ಲಿ  ಕೆಳಗಿನ ಕಾರ್ಯಗಳನ್ನು ನಿರ್ವಹಿಸುತ್ತಾರೆ:

- ಜಿಲ್ಲೆ ಮತ್ತು ತಾಲ್ಲೂಕು ಪಂಚಾಯಿತಿ ಪ್ರತಿನಿಧಿಗಳಿಗೆ ಕಾರ್ಯಕ್ರಮದ ಮಾರ್ಗಸೂಚಿಗಳು ಮತ್ತು ಅನುಷ್ಠಾನದ ರೂಪುರೇಷೆ ಕುರಿತಾಗಿ ಸ್ಪಷ್ಟತೆಯನ್ನು ಒದಗಿಸುತ್ತಾರೆ.
- ಕಾರ್ಯಕ್ರಮದ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಜಿಲ್ಲೆಗಳಿಗೆ ನಿರ್ದಿಷ್ಟ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ನೆರವು ನೀಡುವುದು.
- ಆರೋಗ್ಯ ಸಂಗಮದ ಎಲ್ಲಾ ತರಬೇತಿ ಕಾರ್ಯಕ್ರಮಗಳು, ಮೇಲ್ವಿಚಾರಣೆ ಚಟುವಟಿಕೆಗಳು ಮತ್ತು ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಭಾಗವಹಿಸುವುದು.
- ಆರೋಗ್ಯ ಸಂಗಮ ಸಂಬಂಧಿತ ತರಬೇತಿಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಸೇವೆ ಸಲ್ಲಿಸುವುದು.
- ಮೇಲ್ವಿಚಾರಣೆ, ಪರಿವೀಕ್ಷಣೆ, ಪರಿಶೀಲನೆ ಮತ್ತು ಹಿಮ್ಮಾಹಿತಿ ನೀಡಲು ಕ್ಷೇತ್ರ ಭೇಟಿ ಕೈಗೊಳ್ಳುವುದು.
- ಕಾರ್ಯಕ್ರಮ ಅಡಚಣೆಗಳನ್ನು ಗುರುತಿಸುವುದು ಮತ್ತು ಕ್ಷೇತ್ರ ಮಟ್ಟದ ಸವಾಲುಗಳನ್ನು ಪರಿಹರಿಸಲು ಸೂಕ್ತ ಕಾರ್ಯತಂತ್ರಗಳನ್ನು ಸೂಚಿಸುವುದು.


## 7.5 ಗ್ರಾಮ ಪಂಚಾಯಿತಿ ಕಾರ್ಯಪಡೆಯ ಸಮನ್ವಯಕ್ಕಾಗಿ ಸಂಪರ್ಕಗಳ ವ್ಯವಸ್ಥೆ

ಆರೋಗ್ಯ ಸಂಗಮ ಯೋಜನೆಯ ಪರಿಣಾಮಕಾರಿ ಅನುಷ್ಠಾನ ಮತ್ತು ಸಮನ್ವಯತೆಯನ್ನು ಬಲಪಡಿಸಲು ಸಮನ್ವಯ ಸಂಪರ್ಕಗಳ ಅಗತ್ಯವಿದೆ. ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH), ಆರೋಗ್ಯ ಮತ್ತು ಸಾಮಾಜಿಕ ಕಾಳಜಿಗಳಿಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದು ಗ್ರಾಮ ಪಂಚಾಯಿತಿ ಕಾರ್ಯಪಡೆಗಳಿಗೆ ಸಾಧ್ಯವಿಲ್ಲ. ಈ ಕಾರ್ಯಕ್ಷೇತ್ರಗಳಿಗೆ ಸಂಬಂಧಿಸಿದ ಕೆಲವು ಸವಾಲುಗಳು ವ್ಯವಸ್ಥಿತವಾಗಿ ನಿಭಾಯಿಸಬೇಕಾಗಬಹುದು

ಮತ್ತು ಅಧಿಕಾರಿಗಳಿಂದ ಉನ್ನತ ಮಟ್ಟದ ಕ್ರಮ ಮತ್ತು ಸಮನ್ವಯತೆಯ ಅಗತ್ಯವಿರುತ್ತದೆ. ಕೆಲವು ಸಮಸ್ಯೆಗಳಿಗೆ ಗ್ರಾಮ ಆರೋಗ್ಯ ನೈರ್ಮಲ್ಯ ಮತ್ತು ಪೌಷ್ಟಿಕಾಂಶ ಸಮಿತಿಗಳಂತಹ (VHSNC) ಗ್ರಾಮ ಮಟ್ಟದ ಘಟಕಗಳಿಂದ ನೆರವು ಬೇಕಾಗುತ್ತದೆ. ಉದಾಹರಣೆಗೆ, ಸ್ವಚ್ಛತಾ ಅಭಿಯಾನಗಳು, ನೈರ್ಮಲ್ಯ ಅಭಿಯಾನಗಳು ಇತ್ಯಾದಿ. ಆದ್ದರಿಂದ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಇವುಗಳೊಂದಿಗೆ ದ್ವಿಮುಖ ಸಮನ್ವಯತೆಯನ್ನು ಸ್ಥಾಪಿಸುವ ಮತ್ತು ನಿರ್ವಹಿಸುವ ಅಗತ್ಯವಿದೆ:

- ಗ್ರಾಮ ಪಂಚಾಯಿತಿ ಮಟ್ಟ ರಚನೆಗಳು: ಸ್ಥಾಯಿ ಸಮಿತಿಗಳು ಮತ್ತು ಉಪ ಸಮಿತಿಗಳು.
- ಗ್ರಾಮ ಮಟ್ಟದ ಸಮಿತಿಗಳು: JAS, VHSNC ಗಳು ಮತ್ತು SDMC
- ಸಮನ್ವಯತೆ ಸಂಪರ್ಕಗಳು ಸೇರಿದಂತೆ ಅನುಸರಿಸಬಹುದಾದ ಕೆಳಕಂಡ ಕಾರ್ಯವಿಧಾನಗಳು ಅನುಸರಿಸಬಹುದು.
- **ಅನುಸರಿಸಬೇಕಾದ ಕ್ರಮಗಳ ಅಳವಡಿಸುವಿಕೆ:** VHSNCಗಳು, JAS, ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಗಳು (SDMC), ಮಹಿಳಾ ಮತ್ತು ಮಕ್ಕಳ ಆರೈಕೆ, ರಕ್ಷಣಾ ಸಮಿತಿ (WCPC), ಮತ್ತು ಇತರೆ ಗ್ರಾಮ ಮಟ್ಟದ ಸಮಿತಿಗಳ ತೀರ್ಮಾನಗಳು, ಪ್ರಗತಿ ವರದಿಗಳು ಮತ್ತು ವಹಿಸಬೇಕಾದ ಕ್ರಮದ ಪ್ರಮುಖ ಅಂಶಗಳನ್ನು ಗ್ರಾಮ ಪಂಚಾಯಿತಿ ಕಾರ್ಯಪಡೆಗಳಿಗೆ ಪಿ.ಡಿ.ಒ/PDO ಅವರು ಪ್ರಸ್ತುತಪಡಿಸಬೇಕು. ಇದರಿಂದ ಕ್ರಮ ವಹಿಸಲು, ಮಾಹಿತಿ ಹಂಚಿಕೊಳ್ಳಲು ಅಥವಾ ಅಗತ್ಯ ನೆರವು ನೀಡಲು ಅನುಕೂಲವಾಗುತ್ತದೆ.
- ತ್ರೈಮಾಸಿಕ ಕ್ರಿಯಾ ಯೋಜನೆಗಳು: ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಅಭಿವೃದ್ಧಿಪಡಿಸಿದ ತ್ರೈಮಾಸಿಕ ಕ್ರಿಯಾ ಯೋಜನೆಗಳು ಮತ್ತು ಅವುಗಳ ಅನುಷ್ಠಾನದ ಸ್ಥಿತಿಯನ್ನು ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಕಲ್ಯಾಣ, ಕುಡಿಯುವ ನೀರಿನ ನೈರ್ಮಲ್ಯ ಸ್ಥಾಯಿ ಸಮಿತಿ ಮುಂದೆ ಪ್ರಸ್ತುತಪಡಿಸಬೇಕು.

ಈ ಸಮಗ್ರತೆಯು ಪೂರ್ಣ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ, ಹೊಣೆಗಾರಿಕೆಯನ್ನು ಖಚಿತಪಡಿಸುತ್ತದೆ ಮತ್ತು ಕ್ಷೇತ್ರದಲ್ಲಿ ಸಂಪನ್ಮೂಲ ಬಳಕೆಯನ್ನು ಅತ್ಯುತ್ತಮವಾಗಿಸುತ್ತದೆ. ಇಲಾಖೆಗಳ ನಡುವಿನ ಸಮರ್ಥ ಬಹುವಲಯ ಸಹಭಾಗಿತ್ವ, ನೋಡಲ್ ಅಧಿಕಾರಿಗಳ ಮೇಲ್ವಿಚಾರಣೆ ಮತ್ತು ಸಮುದಾಯ ಮಟ್ಟದ ಸಮಿತಿಗಳೊಂದಿಗೆ ನಿರಂತರ ಸಂಪರ್ಕ ಮತ್ತು ಸಮನ್ವಯವು ನಿರ್ಣಾಯಕವಾಗುತ್ತದೆ. ಆರೋಗ್ಯ ಸಂಗಮ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಅನುವು ಮಾಡಿಕೊಡುತ್ತದೆ. ಇವರಿಂದ ಅಸ್ತಿತ್ವದಲ್ಲಿರುವ ಪಂಚಾಯತ್ ರಾಜ್ ವ್ಯವಸ್ಥೆಗಳು ಮತ್ತು ಬಹುವಲಯ ಸಮನ್ವಯತೆಯನ್ನು ಬೆಳೆಸುವ ಮೂಲಕ ಆರೋಗ್ಯ, ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH), ಶಿಕ್ಷಣ, ಮತ್ತು ಇತರೆ ಅಭಿವೃದ್ಧಿಪರ ಪರಿಣಾಮಗಳನ್ನು ತಳಮಟ್ಟದಲ್ಲಿ ಗಮನಾರ್ಹವಾಗಿ ಹೆಚ್ಚಿಸಬಹುದು. **ಚಿತ್ರ 8 ನೋಡಿ**.



**ಗ್ರಾಮ ಪಂಚಾಯಿತಿ ಕಾರ್ಯಪಡೆಗಳಿಗೆ ಕೆಳಕಂಡವರ ಜೊತೆ ಉನ್ನತ ಮಟ್ಟದ ಸಮನ್ವಯತೆಯ ಅಗತ್ಯವಿದೆ**

- ಜಿಲ್ಲಾ ಪಂಚಾಯಿತಿ ಸ್ಥಾಯಿ ಸಮಿತಿ
- ತಾಲ್ಲೂಕು ಪಂಚಾಯಿತಿ ಅಭಿವೃದ್ಧಿ ಸಮಿತಿ
- ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಕಲ್ಯಾಣ, ಕುಡಿಯುವ ನೀರು & ನೈರ್ಮಲ್ಯ ಸ್ಥಾಯಿ ಸಮಿತಿಗಳು


**ಗ್ರಾಮ ಪಂಚಾಯಿತಿ ಕಾರ್ಯಪಡೆಗಳಿಗೆ ಕೆಳಕಂಡವರ ಜೊತೆ ತಳಮಟ್ಟದ ಸಮನ್ವಯತೆಯ ಅಗತ್ಯವಿದೆ**

- ಜೆ.ಎ.ಎಸ್.
- ವಿ.ಎಚ್.ಎಸ್.ಎನ್.ಸಿ.
- ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣೆ ಸಮಿತಿಗಳು
- ಇತರರು– ಕೂಸಿನಮನೆ, ಮಹಿಳಾ ಮತ್ತು ಬಾಲ ವಿಕಾಸ ಸಮಿತಿ


**ಚಿತ್ರ 8 ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಜೊತೆಗೆ ಇತರೆ ಸಮನ್ವಯ ಸಂಪರ್ಕಗಳು ಸಮಿತಿಗಳು**

ಈ ರಚನಾತ್ಮಕ ಕ್ರಮದಿಂದ ಸಮನ್ವಯತೆ ಖಚಿತವಾದರೆ ಆರೋಗ್ಯ ಸಂಗಮ ಯೋಜನೆಯನ್ನು ತಡೆರಹಿತ ಸಾಂಸ್ಥಿಕೀಕರಣ ಮಾಡಬಹುದು. ಗ್ರಾಮ ಮಟ್ಟದ ಸಮಿತಿಗಳ ಸಂಯೋಜಿತ ಕ್ರಮಗಳು ಮತ್ತು ಭಾಗೀದಾರರ ಪರಸ್ಪರ ಸಹಕಾರ ಮತ್ತು ಕಠಿಣ ಮೇಲ್ವಿಚಾರಣೆಯನ್ನು ಕಾಯ್ದುಕೊಳ್ಳುವ ಮೂಲಕ, ಈ ಯೋಜನೆಯು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆರೋಗ್ಯ ಸುಧಾರಣೆ, ಆರೋಗ್ಯ ಸಂಬಂಧಿತ ಮತ್ತು ಸಾಮಾಜಿಕ ಪರಿಣಾಮಗಳಿಗೆ ಬಲವಾದ ಅಡಿಪಾಯವನ್ನು ನಿರ್ಮಿಸುತ್ತದೆ.

ಕೆಳಗಿನ ಚಿತ್ರವು ಗ್ರಾಮ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇರುವ ವಿಭಿನ್ನ ವೇದಿಕೆಗಳನ್ನು ಅಭಿವ್ಯಕ್ತಿಸುತ್ತದೆ:




**ಒಂದು ಗ್ರಾಮವಿರುವ ಗ್ರಾಮ ಪಂಚಾಯಿತಿ**




**ಒಂದಕ್ಕಿಂತ ಹೆಚ್ಚಿನ ಗ್ರಾಮಗಳಿರುವ ಗ್ರಾಮ ಪಂಚಾಯಿತಿ**

# ಹಂತ 8 | ಆರೋಗ್ಯ ಸಂಗಮದ ಹಣಕಾಸು ನಿರ್ವಹಣೆ

ಆರೋಗ್ಯ ಸಂಗಮ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಪ್ರತಿ ಗ್ರಾಮ ಪಂಚಾಯಿತಿಗೆ ವರ್ಷಕ್ಕೆ ಒಟ್ಟು ರೂ. **2,50,000/–** ಅನುದಾನವನ್ನು ಮೀಸಲಿಡಲಾಗಿದೆ. ಈ ಅನುದಾನವನ್ನು ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಹಂತಕ್ಕೆ ವಿತರಿಸಲಾಗುತ್ತದೆ.

**ಈ ಕೆಳಗಿನ ವೆಚ್ಚಗಳನ್ನು ಭರಿಸಲು ತಾಲ್ಲೂಕು ಪಂಚಾಯಿತಿ ಮಟ್ಟಕ್ಕೆ ರೂ. 1,75,000/– ಮೊತ್ತವನ್ನು ವಿತರಿಸಲಾಗುವುದು:**

- ಆರೋಗ್ಯ ಸಂಗಮ ಸುಗಮಗಾರರ (ಫೆಸಿಲಿಟೇಟರ್) ಸಾಮರ್ಥ್ಯಾಭಿವೃದ್ಧಿ – ವರ್ಷಕ್ಕೊಮ್ಮೆ ಆಯೋಜಿಸಲಾಗುವ 3 ದಿನಗಳ ಕಾರ್ಯಾಗಾರದ ವೆಚ್ಚ.
- ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರಿಗೆ ಪರಿಕಲ್ಪನೆ ಪರಿಚಯ ಮತ್ತು ತರಬೇತಿ ಕಾರ್ಯಾಗಾರ – ವರ್ಷದಲ್ಲಿ ಮೂರು ಬಾರಿ ಒಂದು ದಿನದ ಕಾರ್ಯಾಗಾರ
- ಅತ್ಯುತ್ತಮ ಕಾರ್ಯನಿರ್ವಹಿಸುವ ಪಂಚಾಯಿತಿಗೆ ನೀಡುವ ಬಹುಮಾನ.
- ಆರೋಗ್ಯಕ್ಕೆ ಸಂಗಮ ಸುಗಮಗಾರರ ಗೌರವ ಧನ ಮತ್ತು ಪ್ರಯಾಣ ಭತ್ಯೆ – ಗ್ರಾಮ ಪಂಚಾಯಿತಿ ಕಾರ್ಯಪಡೆ ಸಭೆಗಳ ಮೇಲ್ವಿಚಾರಣೆ ಮತ್ತು ಕ್ರಿಯಾ ಯೋಜನೆ ಅನುಷ್ಠಾನಕ್ಕೆ ಸಂಬಂಧಿತ ವೆಚ್ಚ.

**ಗ್ರಾಮ ಪಂಚಾಯಿತಿ ಮಟ್ಟ (ರೂ. 75,000) ಈ ಅನುದಾನವನ್ನು ಕೆಳಗಿನ ವೆಚ್ಚಗಳಿಗೆ ಮೀಸಲಿಡಲಾಗುತ್ತದೆ:**

- ಗ್ರಾಮ ಪಂಚಾಯಿತಿ ಕಾರ್ಯಪಡೆ ಬಗ್ಗೆ ಸಮುದಾಯ ಅರಿವು ಮೂಡಿಸಲು.
- ಆರೋಗ್ಯ ಸಂಗಮ ಸಭೆಗಳು – ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರಿಗೆ ವರ್ಷದಲ್ಲಿ ನಾಲ್ಕು ಬಾರಿ (ತ್ರೈಮಾಸಿಕ) ಒಂದು ದಿನದ ಸಭೆ.
- ಗ್ರಾಮ ಪಂಚಾಯಿತಿ ಕಾರ್ಯಪಡೆಯಿಂದ ಕ್ರಿಯಾ ಯೋಜನೆಗಳ ಅನುಷ್ಠಾನ ವೆಚ್ಚ.

ವಿವರವಾದ ಬಜೆಟ್/ ಆಯವ್ಯಯ **ಅನುಬಂಧ–3** ರಲ್ಲಿ ನೀಡಲಾಗಿದೆ.



# ಭಾಗ 9 | ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಅತ್ಯುತ್ತಮ ಕಾರ್ಯನಿರ್ವಹಣೆಗಾಗಿ ಬಹುಮಾನಗಳು

ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ಗ್ರಾಮ ಪಂಚಾಯಿತಿಗಳು ಮತ್ತು ವ್ಯಕ್ತಿಗಳ ಪ್ರಯತ್ನಗಳನ್ನು ಗುರುತಿಸುವುದು ಕಾರ್ಯಕ್ರಮದ ಗುರಿಗಳನ್ನು ಸಾಧಿಸುವುದಕ್ಕೆ ಮತ್ತು ತ್ವರಿತಗತಿಯ ಅನುಷ್ಠಾನಕ್ಕೆ ಸಹಾಯ ಮಾಡುತ್ತದೆ. ಪ್ರಶಸ್ತಿ/ಬಹುಮಾನಗಳನ್ನು ನೀಡುವುದರಿಂದ ಅವರ ಕೆಲಸಕ್ಕೆ ಉತ್ಸಾಹ ನೀಡುತ್ತವೆ ಮತ್ತು ಹೆಚ್ಚಿನ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ. ಆರೋಗ್ಯ ಸಂಗಮದಡಿ ಉತ್ತಮವಾಗಿ ಕಾರ್ಯನಿರ್ವಹಿಸುವ ಗ್ರಾಮ ಪಂಚಾಯಿತಿಗಳಿಗೆ ಈ ಕೆಳಗಿನ ಪ್ರೋತ್ಸಾಹಕಗಳನ್ನು ನೀಡಲಾಗುತ್ತದೆ:

- **ಪ್ರೋತ್ಸಾಹ ಧನಗಳು:** ಗಣನೀಯ ಸಾಧನೆಗಾಗಿಯೇ ಗ್ರಾಮ ಪಂಚಾಯಿತಿಗೆ ವರ್ಷಕ್ಕೆ ರೂ. **10,000/–** ನಗದು ಬಹುಮಾನ ಅಥವಾ ಪಂಚಾಯಿತಿಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಪನ್ಮೂಲ ಬೆಂಬಲವನ್ನು ನೀಡಲಾಗುತ್ತದೆ.
- **ಸಾಧನೆ ಗುರುತಿಸಲು ಪ್ರಮಾಣಪತ್ರಗಳು:**
  - ಸಮುದಾಯ ಅಭಿವೃದ್ಧಿಗೆ ಅಸಾಧಾರಣ ಕೊಡುಗೆ ನೀಡಿದ ಗ್ರಾಮ ಪಂಚಾಯಿತಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಪ್ರಶಸ್ತಿ ಪ್ರಮಾಣಪತ್ರ ನೀಡುವುದು.
  - ಗ್ರಾಮ ಪಂಚಾಯಿತಿ ಕಾರ್ಯಪಡೆ ಸಭೆಗಳ ಸಂಖ್ಯೆ ಅಥವಾ ನಿಗದಿತ ಮೆಟ್ರಿಕ್‌ಗಳ ಆಧಾರದ ಮೇಲೆ, ಸಮಸ್ಯೆ ಪರಿಹಾರದಲ್ಲಿ ಮಹತ್ತರ ಕೊಡುಗೆ ನೀಡಿದ ವ್ಯಕ್ತಿಗಳಿಗೆ ವೈಯಕ್ತಿಕ ಪ್ರಮಾಣಪತ್ರ ನೀಡಲಾಗುತ್ತದೆ.
- **ಸುಸ್ಥಿರ ಸಾಧನೆ ಪ್ರಶಸ್ತಿಗಳು:** ನಿರಂತರ ಶ್ರೇಷ್ಠತೆ ಮತ್ತು ದೀರ್ಘಕಾಲೀನ ಪರಿಣಾಮವನ್ನು ಪ್ರೋತ್ಸಾಹಿಸಲು ಪುನರಾವರ್ತಿತ ಪ್ರೋತ್ಸಾಹಕಗಳು ಅಥವಾ ನಿಧಿಗಳನ್ನು ಪರಿಚಯಿಸಲಾಗುವುದು.
- **ಸಾರ್ವಜನಿಕ ಸನ್ಮಾನ:** ಇತರರಿಗೆ ಸ್ಫೂರ್ತಿ/ಪ್ರೇರಣೆ ನೀಡಲು ಕರ್ನಾಟಕ ರಾಜ್ಯೋತ್ಸವ ಅಥವಾ ಗಾಂಧಿ ಗ್ರಾಮ ಪುರಸ್ಕಾರದಂತಹ ಮಹತ್ವದ ಕಾರ್ಯಕ್ರಮಗಳಲ್ಲಿ ಅತ್ಯುತ್ತಮ ಕಾರ್ಯನಿರ್ವಹಿಸುವ ಗ್ರಾಮ ಪಂಚಾಯಿತಿಗಳು ಮತ್ತು ವ್ಯಕ್ತಿಗಳನ್ನು ಗೌರವಿಸಲಾಗುವುದು.
- **ವೈಯಕ್ತಿಕ ಗುರುತಿಸುವಿಕೆ:** ಗ್ರಾಮ ಪಂಚಾಯಿತಿ ಕಾರ್ಯಪಡೆ ಕಾರ್ಯಕ್ರಮಗಳ ಯಶಸ್ಸಿಗೆ ಸಕ್ರಿಯ ಕೊಡುಗೆ ನೀಡಿದ ವ್ಯಕ್ತಿಗಳು ಅಥವಾ ಇಲಾಖೆಗಳನ್ನು ಗುರುತಿಸಲಾಗುವುದು. ಅವರ ಪ್ರಯತ್ನಗಳನ್ನು ಸಾರ್ವಜನಿಕವಾಗಿ ಪ್ರಶಂಸಿಸಲಾಗುವುದು.



# ಹಂತ 10 | ತಾಂತ್ರಿಕ ನೆರವು ಮತ್ತು ಪಾಲುದಾರರ ಪಾತ್ರ

ಜಾನ್ಸ್ ಹಾಪ್ಕಿನ್ಸ್ ವಿಶ್ವವಿದ್ಯಾಲಯ (ಜೆಹೆಚ್‌ಯು) ತಂಡವು ಆರೋಗ್ಯ ಸಂಗಮ ಕಾರ್ಯಕ್ರಮ ಅನುಷ್ಠಾನದ ಪ್ರಾಯೋಗಿಕ ಹಂತದಲ್ಲಿ ಮಾತ್ರ ತಾಂತ್ರಿಕ ನೆರವನ್ನು ನೀಡುತ್ತದೆ. ಕೆಹೆಚ್‌ಪಿಟಿ ಅನುಷ್ಠಾನ ಮತ್ತು ಮೌಲ್ಯಮಾಪನ, ಚಟುವಟಿಕೆಗಳ ನಿರ್ವಹಣೆ ಸೇರಿದಂತೆ ಕ್ಷೇತ್ರ ಮಟ್ಟದ ಮೇಲ್ವಿಚಾರಣೆ ಮಾಡುತ್ತದೆ.

**ಜೆಹೆಚ್‌ಯು ಮತ್ತು ಕೆಹೆಚ್‌ಪಿಟಿ ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸುತ್ತವೆ:**

- ಕೆಹೆಚ್‌ಪಿಟಿಯು ಆರೋಗ್ಯ ಸಂಗಮ ಸುಗಮಗಾರರಿಗೆ (facilitators) ಸಾಮರ್ಥ್ಯವನ್ನು ವೃದ್ಧಿಸುತ್ತದೆ. ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಸಭೆಗಳನ್ನು ಸುಗಮವಾಗಿ ನಡೆಸಲು ಅವರು ಸಮರ್ಥರಾಗಿದ್ದಾರೆ ಎಂಬುದನ್ನು ಖಚಿತಪಡಿಸುತ್ತದೆ.
- ಜೆಹೆಚ್‌ಯು ತಾಂತ್ರಿಕ ನೆರವಿನೊಂದಿಗೆ, ಕೆಹೆಚ್‌ಪಿಟಿ ಸಮುದಾಯ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಆರೋಗ್ಯ ಸೇವಾ ಪೂರೈಕೆದಾರರ ದೃಷ್ಟಿಕೋನಗಳಲ್ಲಿ ಏಕರೂಪತೆ ತರಲು, ವಿಶ್ವಾಸವನ್ನು ಬೆಳೆಸಲು, ಅಧಿಕಾರ ಅಸಮತೋಲನವನ್ನು ನಿವಾರಿಸಲು ಅಗತ್ಯವಾದ ಸಮಗ್ರ ತರಬೇತಿ ಮಾಡ್ಯೂಲ್‌ಗಳನ್ನು ಕಾರ್ಯಾಗಾರಗಳ ಮೂಲಕ ವಿನ್ಯಾಸಗೊಳಿಸುತ್ತದೆ.
- ಕಾರ್ಯಕ್ರಮದ ಪ್ರಗತಿಯನ್ನು ಪರಿವೀಕ್ಷಣೆ ಮಾಡಲು ಸಂವಾದಾತ್ಮಕ ಡ್ಯಾಶ್‌ಬೋರ್ಡ್‌ಗಳನ್ನು ಕೆಹೆಚ್‌ಪಿಟಿ ರಚಿಸಿ ನಿರ್ವಹಿಸುತ್ತದೆ.
- ಜೆಹೆಚ್‌ಯು ಮತ್ತು ಕೆಹೆಚ್‌ಪಿಟಿಯು ಅನುಷ್ಠಾನದ ಸಮಯದಲ್ಲಿ ಕ್ಷೇತ್ರ ಭೇಟಿಗಳನ್ನು ಕೈಗೊಂಡು ಪ್ರಕ್ರಿಯೆ ದಾಖಲೀಕರಣ ಮಾಡುವುದರ ಜೊತೆಗೆ ಯೋಜನೆಯ ಮುಖ್ಯಾಂಶಗಳನ್ನು, ಯಾವುದಾದರೂ ಸಮಸ್ಯೆಗಳಿದ್ದರೆ ಅವುಗಳನ್ನು ನಿವಾರಿಸಲು ಹಿಮ್ಮಾಹಿತಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಒದಗಿಸುವುದು.
- ಕಾರ್ಯಕ್ರಮ ಒಂದು ವರ್ಷ ಪೂರ್ಣಗೊಳಿಸಿದ ನಂತರ ಕೆಹೆಚ್‌ಪಿಟಿ ದತ್ತಾಂಶ ಸಂಗ್ರಹ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಸೇವಾ ಬಳಕೆಯ ವ್ಯಾಪ್ತಿ, ಗುಣಮಟ್ಟ ಮತ್ತು ಸಮಾನತೆಯ ಅಂತಿಮ ಸ್ಥಿತಿಯನ್ನು ನಕ್ಷೆ ಮಾಡಲು ಚಟುವಟಿಕೆಗಳು ಮತ್ತು ಸೌಲಭ್ಯ ತಲುಪುವಿಕೆಯ ಸಮೀಕ್ಷೆಯನ್ನು ಕಾರ್ಯಗತಗೊಳಿಸುತ್ತದೆ. ಕೆಹೆಚ್‌ಪಿಟಿ ತಂಡದೊಂದಿಗೆ ಜೆಹೆಚ್‌ಯು ಎಲ್ಲಾ ಅಗತ್ಯ ದತ್ತಾಂಶಗಳ ಮತ್ತು ಫಲಿತಾಂಶ ವಿಶ್ಲೇಷಣೆ ಕೈಗೊಳ್ಳುತ್ತದೆ. ಈ ಫಲಿತಾಂಶಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೊಂದಿಗೆ ಹಂಚಿಕೊಳ್ಳುತ್ತದೆ.
- ಜೆಹೆಚ್‌ಯು ಮತ್ತು ಕೆಹೆಚ್‌ಪಿಟಿಯ ಕೋರ್ ತಂಡದ ಸದಸ್ಯರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನೇತೃತ್ವದಲ್ಲಿ ನಡೆಯುವ ಎಲ್ಲಾ ಯೋಜನಾ ಪರಿಶೀಲನಾ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಕಾರ್ಯಕ್ರಮದ ಪ್ರಗತಿಯ ಬಗ್ಗೆ ನಿಯಮಿತವಾಗಿ ಮಾಹಿತಿಗಳನ್ನು ಒದಗಿಸುತ್ತಾರೆ.



# ಅನುಬಂಧಗಳು

## ಅನುಬಂಧ 1: ಸಕ್ರಿಯ ಪಾಲ್ಗೊಳ್ಳುವಿಕೆ ಕಾರ್ಯಾಗಾರಗಳು ಮತ್ತು ಪರಿಕಲ್ಪನೆ ವಿನ್ಯಾಸ ಚರ್ಚೆಯಲ್ಲಿ ಭಾಗವಹಿಸಿದವರ ವಿವರಗಳು

### ಪಾಲ್ಗೊಳ್ಳುವಿಕೆ ಕಾರ್ಯಾಗಾರಗಳು

- ರಾಯಚೂರು (5ನೇ–7ನೇ ನವೆಂಬರ್ 2024)–ಭಾಗವಹಿಸಿದವರು **113**

  ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಭಾಗವಹಿಸಿದವರು–**96**
  ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಭಾಗವಹಿಸಿದವರು–**17**
- ಚಾಮರಾಜನಗರ (10ನೇ–12ನೇ ಡಿಸೆಂಬರ್ 2024)–ಭಾಗವಹಿಸಿದವರು **119**

  ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಭಾಗವಹಿಸಿದವರು–**103**
  ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಭಾಗವಹಿಸಿದವರು–**16**

### ಪರಿಕಲ್ಪನೆ ವಿನ್ಯಾಸ ಕಾರ್ಯಾಗಾರ: 1–6ನೇ ಡಿಸೆಂಬರ್ 2024

- ಕೆಹೆಚ್‌ಪಿಟಿ ತಜ್ಞರು – **11**
- ಜೆಹೆಚ್‌ಯು ಭಾರತ ತಜ್ಞರು – **2**

### ಪರಿಕಲ್ಪನೆ ವಿನ್ಯಾಸ ಕಾರ್ಯಾಗಾರ: 2–15ನೇ ಅಕ್ಟೋಬರ್ 2024

- ಜೆಹೆಚ್‌ಯು ಭಾರತ ತಜ್ಞರು – **2**
- ಕೆಹೆಚ್‌ಪಿಟಿ ತಜ್ಞರು – **5**

### ಆರೋಗ್ಯ ಸಂಗಮ ಯೋಜನೆ ಪರಿಶೀಲನಾ ಸಭೆ – 9ನೇ ಸೆಪ್ಟೆಂಬರ್ 2024

- **ಅಧ್ಯಕ್ಷತೆ**
  **ಶ್ರೀಮತಿ ಉಮಾ ಮಹಾದೇವನ್,** ಐಎಎಸ್., ಅಭಿವೃದ್ಧಿ ಆಯುಕ್ತರು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ.
- **ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ತಜ್ಞರು**
  **ಡಾ. ಅರುಂಧತಿ ಚಂದ್ರಶೇಖರ್,** ಐಎಎಸ್., ಆಯುಕ್ತರು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ
  **ಡಾ. ವಸುಂಧರಾ ದೇವಿ,** ಸಲಹೆಗಾರರು–ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ–ಗ್ರಾಮ್ ಸ್ವರಾಜ್ ಅಭಿಯಾನ
  **ಶ್ರೀಮತಿ ನಾಗವೇಣಿ,** ಉಪ ನಿರ್ದೇಶಕರು–ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
  **ಶ್ರೀಮತಿ ಶ್ವೇತಾ,** ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
- **ಜೆಹೆಚ್‌ಯು ತಜ್ಞರು**
  ಪ್ರೊ. ಸ್ವಿಯಾ ಕ್ಲೋಸರ್, ಡಾ. ಶಾಲಿನಿ ಸಿಂಗ್, ಎಮಿಲಿ ಮಿಲ್ಲರ್ ಮತ್ತು ದೀಕ್ಷಾ ಖುರಾನಾ
- **ಕೆಹೆಚ್‌ಪಿಟಿ ತಜ್ಞರು**
  ಶ್ರೀ ಮೋಹನ್ ಹೆಚ್.ಎಲ್., ಸಿಇಒ, ಡಾ. ಸ್ವರೂಪ್ ಎನ್ ಅರಿನ್ ಕರ್, ಅಂಬುಜಾ ಕೌಲಗಿ, ಪೂರ್ಣಿಮಾ ಬಿ.ಎಸ್ ಮತ್ತು ವಿದ್ಯಾಚರಣ ಮಾಳ್ವೆ

## ಅನುಬಂಧ 2: ಗ್ರಾಮ ಪಂಚಾಯಿತಿಗಳಿಗಾಗಿ ಆರೋಗ್ಯ ಸಂಗಮ ಯೋಜನೆಯ ಕೈಪಿಡಿ (Toolkit)

### ಭಾಗ 1 – ಆರೋಗ್ಯ ಸಂಗಮ ಪ್ರಗತಿ ಗುರುತಿಸುವಿಕೆ ಪರಿಕರಗಳು

| | ವಿವರಗಳು | ಗ್ರಾಮ 1 | | | | ಗ್ರಾಮ 2 | | | |
|---|---|---|---|---|---|---|---|---|---|
| **1. ಗ್ರಾಮ ಪಂಚಾಯಿತಿಯ ಮೂಲಭೂತ ಮಾನದಂಡಗಳು (ಪ್ರತಿ ವರ್ಷ ನವೀಕರಿಸಲಾಗುತ್ತದೆ)** | | | | | | | | | |
| ಜಿಲ್ಲೆ | | | | | | | | | |
| ತಾಲ್ಲೂಕು | | | | | | | | | |
| ಗ್ರಾಮ ಪಂಚಾಯಿತಿ ಹೆಸರು | | | | | | | | | |
| ಗ್ರಾಮದ ಹೆಸರು | | | | | | | | | |
| **ದತ್ತಾಂಶದ ಮೂಲ–ಗ್ರಾಮ ಪಂಚಾಯಿತಿ ದಾಖಲೆಗಳು** | | | | | | | | | |
| ಗ್ರಾಮದ ಒಟ್ಟು ಜನಸಂಖ್ಯೆ | | | | | | | | | |
| ಪುರುಷ | | | | | | | | | |
| ಮಹಿಳೆ | | | | | | | | | |
| ಎಸ್.ಸಿ. | | | | | | | | | |
| ಎಸ್.ಟಿ. | | | | | | | | | |
| ಸಾಮಾನ್ಯ ವರ್ಗ | | | | | | | | | |
| **ದತ್ತಾಂಶದ ಮೂಲ–ಗ್ರಾಮ ಪಂಚಾಯಿತಿ /ಆಶಾ/ CHO/ PHCO** | | | | | | | | | |
| ಗ್ರಾಮದ ಒಟ್ಟು ಕುಟುಂಬಗಳ ಸಂಖ್ಯೆ | | | | | | | | | |
| ಎಸ್.ಸಿ. | | | | | | | | | |
| ಎಸ್.ಟಿ. | | | | | | | | | |
| ಸಾಮಾನ್ಯ ವರ್ಗ | | | | | | | | | |
| ಗ್ರಾಮ ಪಂಚಾಯಿತಿ ಅಧ್ಯಕ್ಷರ ಲಿಂಗ | | | | | | | | | |
| ಗ್ರಾಮ ಪಂಚಾಯಿತಿ ಅಧ್ಯಕ್ಷರ ಶಿಕ್ಷಣ | | | | | | | | | |
| **ದತ್ತಾಂಶದ ಮೂಲ–ಗ್ರಾಮ ಪಂಚಾಯಿತಿ ದಾಖಲೆಗಳು/ ನರೇಗಾ ಪೋರ್ಟಲ್** | | | | | | | | | |
| ನರೇಗಾ ಕುಟುಂಬಗಳ ಸಂಖ್ಯೆ | | | | | | | | | |
| ಆದಿ ಬುಡಕಟ್ಟುಗಳು (ಹೌದು/ಇಲ್ಲ) | | | | | | | | | |
| ಹೌದಾದರೆ, ಆದಿ ಬುಡಕಟ್ಟು ಜನಾಂಗಗಳ ಜನಸಂಖ್ಯೆ | | | | | | | | | |
| ಗ್ರಾಮದ ಒಳಗೆ ಒಟ್ಟು ರಸ್ತೆಯ ಉದ್ದ ಮತ್ತು ಕಚ್ಚಾ ರಸ್ತೆಗಳ ಅನುಪಾತ | | | | | | | | | |

| | ವಿವರಗಳು | ಗ್ರಾಮ 1 | | | | ಗ್ರಾಮ 2 | | | |
|---|---|---|---|---|---|---|---|---|---|
| ಗ್ರಾಮಕ್ಕೆ ಇರುವ ದೂರ | | | | | | | | | |
| ಹೆಚ್‌ಡಬ್ಲ್ಯೂಸಿ (HWC) | | | | | | | | | |
| ಪಿಎಚ್‌ಸಿ (PHC) | | | | | | | | | |
| ಸಿಎಚ್‌ಸಿ/ಟಿಎಚ್ (CHC/TH) | | | | | | | | | |
| ಉನ್ನತ ಆರೋಗ್ಯ ಕಾಳಜಿ ಕೇಂದ್ರ (Tertiary care center) | | | | | | | | | |
| ಗ್ರಾಮದಲ್ಲಿ ಹೆಚ್‌ಡಬ್ಲ್ಯೂಸಿ ಇದೆಯೇ (ಹೌದು/ಇಲ್ಲ) | | | | | | | | | |
| ಹಣಕಾಸು ವರ್ಷದಲ್ಲಿ ಸಂಗ್ರಹಿಸಲಾದ ಒಟ್ಟು ಆರೋಗ್ಯ ಕರ | | | | | | | | | |
| ಗ್ರಾಮದ ಕಂದಾಯ ವ್ಯಾಪ್ತಿಯಲ್ಲಿ ಜನೌಷದಿ ಕೇಂದ್ರದ ಲಭ್ಯತೆ (ಹೌದು/ಇಲ್ಲ) | | | | | | | | | |
| **ದತ್ತಾಂಶದ ಮೂಲ–ಗ್ರಾಮ ಪಂಚಾಯಿತಿ ದಾಖಲೆಗಳು/ ಜೆಜೆಎಂ** | | | | | | | | | |
| 1. ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH) (ತ್ರೈಮಾಸಿಕವಾಗಿ ಗ್ರಾಮ ಪಂಚಾಯಿತಿ ಒದಗಿಸುವುದು) | ದತ್ತಾಂಶದ ಪ್ರಕಾರ | | | | | | | | |
| **1 ಎ ಒಳಚರಂಡಿ** | | | | | | | | | |
| 1ಎ.1 ಪಕ್ಕಾ ಒಳಚರಂಡಿ ಸೌಲಭ್ಯವುಳ್ಳ ಕುಟುಂಬಗಳ ಸಂಖ್ಯೆ | ಸಂಖ್ಯೆ | | | | | | | | |
| **1ಬಿ ಸ್ವಚ್ಛ ಮತ್ತು ಸುರಕ್ಷಿತ ಕುಡಿಯುವ ನೀರಿನ ಲಭ್ಯತೆ** | | | | | | | | | |
| 1ಬಿ.1 ನಲ್ಲಿ ಸಂಪರ್ಕದ ಮೂಲಕ ನೀರಿನ ಸೌಲಭ್ಯ ಹೊಂದಿರುವ ಮನೆಗಳ ಸಂಖ್ಯೆ | ಸಂಖ್ಯೆ | | | | | | | | |
| 1ಬಿ.2 ಗ್ರಾಮದಲ್ಲಿ ಕ್ಲೋರಿಟೈಸೇಶನ್ ಜೊತೆಗೆ ಕೊಳವೆಗಳಿಂದ ನೀರು ಸರಬರಾಜು ಮಾಡುವ ವ್ಯವಸ್ಥೆ | ಹೌದು/ಇಲ್ಲ | | | | | | | | |
| 1ಬಿ.3 ಈ ತಿಂಗಳಲ್ಲಿ ಕ್ಷೇತ್ರ ಪರೀಕ್ಷೆ ಕಿಟ್ ಮೂಲಕ ಬಳಸುವ ನೀರಿನ ಮಾದರಿ ಪರೀಕ್ಷೆ ಪೂರ್ಣಗೊಂಡಿದೆಯೇ | ಹೌದು/ಇಲ್ಲ | | | | | | | | |
| 1ಬಿ.4 ಗ್ರಾಮದ ಕಂದಾಯ ವ್ಯಾಪ್ತಿಯಲ್ಲಿ ಬಳಕೆಗೆ ಯೋಗ್ಯವಾಗಿರುವ ಮಳೆನೀರು ಕೊಯ್ಲು ರಚನೆಗಳ ಸಂಖ್ಯೆ | ಸಂಖ್ಯೆ | | | | | | | | |
| **1ಸಿ ನೈರ್ಮಲ್ಯ ಸೌಲಭ್ಯಗಳು** | | | | | | | | | |
| 1ಸಿ.1 ಗ್ರಾಮದಲ್ಲಿ ಶೌಚಾಲಯಗಳನ್ನು ಹೊಂದಿರುವ ಮನೆಗಳ ಸಂಖ್ಯೆ | ಸಂಖ್ಯೆ | | | | | | | | |

| | ವಿವರಗಳು | ಗ್ರಾಮ 1 | | | | ಗ್ರಾಮ 2 | | | |
|---|---|---|---|---|---|---|---|---|---|
| 1ಸಿ.3 ಗ್ರಾಮದಲ್ಲಿ ಬಳಕೆಗೆ ಯೋಗ್ಯವಾಗಿರುವ ಸಮುದಾಯ ಶೌಚಾಲಯಗಳ ಸಂಖ್ಯೆ | ಸಂಖ್ಯೆ | | | | | | | | |
| 1ಸಿ.4 ವಿಕಲಚೇತನರಿಗಾಗಿ ಗ್ರಾಮದಲ್ಲಿ ನಿರ್ಮಿಸಿರುವ ಬಳಕೆಗೆ ಯೋಗ್ಯವಾಗಿರುವ ಸಮುದಾಯ ಶೌಚಾಲಯಗಳ | ಸಂಖ್ಯೆ | | | | | | | | |
| 1ಸಿ.5 ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಬಳಕೆಗೆ ಯೋಗ್ಯವಾಗಿರುವ ಪುರುಷರು ಮತ್ತು ಮಹಿಳೆಯರ ಶೌಚಾಲಯಗಳು | ಹೌದು/ಇಲ್ಲ | | | | | | | | |
| **ದತ್ತಾಂಶದ ಮೂಲ–ಗ್ರಾಮ ಪಂಚಾಯಿತಿ ದಾಖಲೆಗಳು/ ಘನ ದ್ರವ ತ್ಯಾಜ್ಯ ನಿರ್ವಹಣಾ (ಎಸ್‌ಎಲ್‌ಡಬ್ಲ್ಯೂಎಂ) ಪೋರ್ಟಲ್** | | | | | | | | | |
| **1ಡಿ ಕಸ ಸಂಗ್ರಹಣೆ** | | | | | | | | | |
| 1ಡಿ.1 ಗ್ರಾಮದಲ್ಲಿ ಘನ ತ್ಯಾಜ್ಯ ಸಂಗ್ರಹಿಸಲಾಗುತ್ತಿದ್ದ ದಿನಗಳ ಸಂಖ್ಯೆ (ಪ್ರತಿದಿನ) | ಸಂಖ್ಯೆ | | | | | | | | |
| 1ಡಿ.2 ಕಸ ಸಂಗ್ರಹ ಸಮಯದಲ್ಲಿ ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸಿ ಕೊಡುವ ಮನೆಗಳ ಸಂಖ್ಯೆ | ಸಂಖ್ಯೆ | | | | | | | | |
| **2. ಶಾಲಾ ದಾಖಲಾತಿ ಮತ್ತು ಬಾಲ್ಯ ವಿವಾಹ (ಶಾಲೆಯ ಮುಖ್ಯೋಪಾಧ್ಯಾಯರು ಒದಗಿಸುವುದು) ದತ್ತಾಂಶದ ಮೂಲ–ಬಿಇಒ ಕಚೇರಿ** | | | | | | | | | |
| **2.1 ಶಾಲೆ ಸ್ಥಿತಿ** | | | | | | | | | |
| 2.1.ಎ ಗ್ರಾಮದ ಕಂದಾಯ ವ್ಯಾಪ್ತಿಯಲ್ಲಿ ಬರುವ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ | ಸಂಖ್ಯೆ | | | | | | | | |
| 2.1.ಬಿ ವಿದ್ಯುತ್/ಕುಡಿಯುವ ನೀರು/ಪ್ರತ್ಯೇಕ ಹೆಣ್ಣುಮಕ್ಕಳ ಶೌಚಾಲಯ ಹೊಂದಿರುವ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ | ಸಂಖ್ಯೆ | | | | | | | | |
| 2.1.ಸಿ ವಿದ್ಯುತ್/ಕುಡಿಯುವ ನೀರು/ಪ್ರತ್ಯೇಕ ಹೆಣ್ಣುಮಕ್ಕಳ ಶೌಚಾಲಯ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ | ಸಂಖ್ಯೆ | | | | | | | | |
| 2.1.ಡಿ ಕಳೆದ ತಿಂಗಳು ಬೋಧನೆ ಶಿಕ್ಷಕರು ಲಭ್ಯವಿದ್ದ ಶಾಲೆಗಳ ಸಂಖ್ಯೆ | ಸಂಖ್ಯೆ | | | | | | | | |
| 2.1.ಇ ಪ್ರಸ್ತುತ ಗ್ರಾಮದ ಶಾಲೆಗೆ ದಾಖಲಾಗಿರುವ ಬಾಲಕರ (6–17 ವರ್ಷಗಳು) ಸಂಖ್ಯೆ | ಸಂಖ್ಯೆ | | | | | | | | |
| 2.1.ಎಫ್ ಪ್ರಸ್ತುತ ಗ್ರಾಮದ ಶಾಲೆಗೆ ದಾಖಲಾಗಿರುವ ಬಾಲಕಿಯರ (6–17 ವರ್ಷಗಳು) ಸಂಖ್ಯೆ | ಸಂಖ್ಯೆ | | | | | | | | |

| | ವಿವರಗಳು | ಗ್ರಾಮ 1 | | | | ಗ್ರಾಮ 2 | | | |
|---|---|---|---|---|---|---|---|---|---|
| **ದತ್ತಾಂಶದ ಮೂಲ – ಸಿ.ಡಿ.ಪಿ.ಒ./ಎ.ಡಬ್ಲ್ಯೂ.ಡಬ್ಲ್ಯೂ.** | | | | | | | | | |
| **2.2 ಹೆಣ್ಣುಮಕ್ಕಳ ಬಾಲ್ಯ ವಿವಾಹ** | | | | | | | | | |
| 2.2.ಎ ವರದಿಯಾಗಿರುವ ಆರಂಭಿಕ ಬಾಲ್ಯ ವಿವಾಹ ಪ್ರಕರಣಗಳ ಸಂಖ್ಯೆ | ಸಂಖ್ಯೆ | | | | | | | | |
| 2.2.ಬಿ ತಡೆಹಿಡಿಯಲಾದ ಬಾಲ್ಯ ವಿವಾಹ ಪ್ರಕರಣಗಳ ಸಂಖ್ಯೆ | ಸಂಖ್ಯೆ | | | | | | | | |
| **3. ತಾಯಂದಿರ ಆರೋಗ್ಯ ದತ್ತಾಂಶದ ಮೂಲ – ಆಶಾ/ ಎ.ಡಬ್ಲ್ಯೂ.ಡಬ್ಲ್ಯೂ.** | | | | | | | | | |
| **3.1 ಗರ್ಭಧಾರಣೆ ಮತ್ತು ಹೆರಿಗೆ ಸಮಯದ ಆರೈಕೆ** | | | | | | | | | |
| 3.1.ಎ. ಗ್ರಾಮದ ಗರ್ಭಿಣಿಯರು ಸಂಖ್ಯೆ | ಸಂಖ್ಯೆ | | | | | | | | |
| 3.1.ಬಿ. 18 ವರ್ಷಗಳೊಳಗಿನ ಗ್ರಾಮದ ಗರ್ಭಿಣಿಯರ ಸಂಖ್ಯೆ | ಸಂಖ್ಯೆ | | | | | | | | |
| 3.1.ಸಿ ಗರ್ಭಿಣಿಯಾದ ಮೊದಲ 3 ತಿಂಗಳೊಳಗೆ ನೋಂದಣಿ ಮಾಡಿಸಿದ ಗರ್ಭಿಣಿ ಮಹಿಳೆಯರ ಸಂಖ್ಯೆ | ಸಂಖ್ಯೆ | | | | | | | | |
| 3.1.ಡಿ ನಿಗದಿತ ತಿಂಗಳಿನೊಳಗೆ ಎಎನ್‌ಸಿ ಪೂರ್ಣಗೊಳಿಸಿದ ಗರ್ಭಿಣಿ ಮಹಿಳೆಯರು ಸಂಖ್ಯೆ | ಸಂಖ್ಯೆ | | | | | | | | |
| 3.1.ಇ ಗ್ರಾಮದಲ್ಲಿ ಕಳೆದ ತಿಂಗಳು ಶಿಶುಗಳಿಗೆ ಜನ್ಮ ನೀಡಿದ ಮಹಿಳೆಯರ ಸಂಖ್ಯೆ | ಸಂಖ್ಯೆ | | | | | | | | |
| 3.1.ಎಫ್ ಕಳೆದ ತಿಂಗಳು ಮೃತಪಟ್ಟ ಶಿಶುಗಳ ಸಂಖ್ಯೆ | ಸಂಖ್ಯೆ | | | | | | | | |
| 3.1.ಜಿ ಕಳೆದ ತಿಂಗಳು ಜನಿಸಿದ ಕಡಿಮೆ ತೂಕದ ಶಿಶುಗಳು ಸಂಖ್ಯೆ | ಸಂಖ್ಯೆ | | | | | | | | |
| 3.1.ಹೆಚ್. ಕಳೆದ ತಿಂಗಳು ಮೃತಪಟ್ಟ ನವಜಾತ ಶಿಶುಗಳ ಸಂಖ್ಯೆ | ಸಂಖ್ಯೆ | | | | | | | | |
| 3.1.ಐ ಕಳೆದ ತಿಂಗಳು ಪ್ರಧಾನ್ ಮಂತ್ರಿ ಮಾತೃ ವಂದನಾ ಯೋಜನೆಯ ಪ್ರಯೋಜನ ಪಡೆದ ಅರ್ಹ ಗರ್ಭಿಣಿ ತಾಯಂದಿರ ಸಂಖ್ಯೆ | ಸಂಖ್ಯೆ | | | | | | | | |
| 3.1ಜೆ ಜನನಿ ಸುರಕ್ಷಾ ಯೋಜನೆ (ಜೆಎಸ್‌ವೈ) ಪ್ರಯೋಜನ ಪಡೆದ ಅರ್ಹ ಫಲಾನುಭವಿಗಳ ಸಂಖ್ಯೆ | ಸಂಖ್ಯೆ | | | | | | | | |
| 3.1.ಕೆ ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (ಜೆಎಸ್‌ಎಸ್‌ಕೆ) ಉಚಿತ ಮತ್ತು ನಗದುರಹಿತ ಸೇವೆಗಳನ್ನು ಪಡೆದ ತಾಯಂದಿರ ಸಂಖ್ಯೆ (ಸಾರಿಗೆ, ಔಷಧ, ರೋಗನಿರ್ಣಯ, ಪಥ್ಯ ಆಹಾರ ಮತ್ತು ಆಸ್ಪತ್ರೆ ಪ್ರವೇಶ) | ಸಂಖ್ಯೆ | | | | | | | | |

| | ವಿವರಗಳು | ಗ್ರಾಮ 1 | | | | ಗ್ರಾಮ 2 | | | |
|---|---|---|---|---|---|---|---|---|---|
| 3.1.ಎಲ್ ಅಂಗನವಾಡಿ ಕೇಂದ್ರಗಳಿಂದ ಪಡಿತರವನ್ನು ಪಡೆದ ಗರ್ಭಿಣಿ ತಾಯಂದಿರ ಸಂಖ್ಯೆ | ಸಂಖ್ಯೆ | | | | | | | | |
| **ದತ್ತಾಂಶದ ಮೂಲ– ಆಶಾ/ಎ.ಡಬ್ಲ್ಯೂ.ಡಬ್ಲ್ಯೂ.** | | | | | | | | | |
| **3.2 ಪ್ರಸವ ಪೂರ್ವ ಆರೈಕೆ** | | | | | | | | | |
| 3.2.ಎ ಪ್ರಸವಪೂರ್ವದಲ್ಲಿ ಆಶಾ ಕಾರ್ಯಕರ್ತೆಯರ ಭೇಟಿಗಳು ಭೇಟಿಯ ಪ್ರಯೋಜನ ಪಡೆದ ತಾಯಂದಿರ ಸಂಖ್ಯೆ | ಸಂಖ್ಯೆ | | | | | | | | |
| **3.3 ಮಗು ರೋಗನಿರೋಧಕ ಲಸಿಕೆ** | | | | | | | | | |
| 3.3 ಎ ಗ್ರಾಮದಲ್ಲಿನ 0–3 ವರ್ಷ ವಯಸ್ಸಿನ ಮಕ್ಕಳ ಸಂಖ್ಯೆ | ಸಂಖ್ಯೆ | | | | | | | | |
| 3.3 ಬಿ ಗ್ರಾಮದಲ್ಲಿನ 3–6 ವರ್ಷ ವಯಸ್ಸಿನ ಮಕ್ಕಳ ಸಂಖ್ಯೆ | ಸಂಖ್ಯೆ | | | | | | | | |
| 3.3 ಸಿ ವಯಸ್ಸಿಗೆ ಅನುಗುಣವಾಗಿ ನಿಗದಿತ ಸಮಯದಲ್ಲಿ ಲಸಿಕೆ ಪಡೆದ 0–6 ವರ್ಷಗಳ ಮಕ್ಕಳ ಸಂಖ್ಯೆ | ಸಂಖ್ಯೆ | | | | | | | | |
| 0–3 ವರ್ಷಗಳು | ಸಂಖ್ಯೆ | | | | | | | | |
| 3–6 ವರ್ಷಗಳು | ಸಂಖ್ಯೆ | | | | | | | | |
| **ದತ್ತಾಂಶದ ಮೂಲ– ಆಶಾ/ಎ.ಡಬ್ಲ್ಯೂ.ಡಬ್ಲ್ಯೂ.** | | | | | | | | | |
| **3.4 ಶಿಶು ಮತ್ತು ಮಗು ಪೋಷಣೆ** | | | | | | | | | |
| 3.4.ಎ ಇನ್ನೂ ಪೂರಕ ಆಹಾರ ಆರಂಭಿಸದ 6–9 ತಿಂಗಳು ವಯಸ್ಸಾದ ಮಕ್ಕಳ ಸಂಖ್ಯೆ | ಸಂಖ್ಯೆ | | | | | | | | |
| 3.4.ಬಿ ಅಂಗನವಾಡಿ ಕೇಂದ್ರಕ್ಕೆ ದಾಖಲಾದ 3–6 ವರ್ಷಗಳ ಮಕ್ಕಳ ಸಂಖ್ಯೆ | ಸಂಖ್ಯೆ | | | | | | | | |
| 3.4.ಸಿ ಕೂಸಿನ ಮನೆಗೆ ದಾಖಲಾದ 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಸಂಖ್ಯೆ | ಸಂಖ್ಯೆ | | | | | | | | |
| 3.4.ಡಿ ಕಳೆದ ತಿಂಗಳು ಅಂಗನವಾಡಿ ಕೇಂದ್ರದಲ್ಲಿ ತೂಕ ಅಳತೆ/ಬೆಳವಣಿಗೆ ಮೇಲ್ವಿಚಾರಣೆಗೆ ಒಳಪಟ್ಟ ಮಕ್ಕಳ ಸಂಖ್ಯೆ | ಸಂಖ್ಯೆ | | | | | | | | |
| 0–3 ವರ್ಷಗಳು | ಸಂಖ್ಯೆ | | | | | | | | |
| 3–6 ವರ್ಷಗಳು | ಸಂಖ್ಯೆ | | | | | | | | |
| ಶಿಶು ಮರಣಗಳು | ಸಂಖ್ಯೆ | | | | | | | | |
| ಮಕ್ಕಳ ಮರಣಗಳು | ಸಂಖ್ಯೆ | | | | | | | | |

| | ವಿವರಗಳು | ಗ್ರಾಮ 1 | | | | ಗ್ರಾಮ 2 | | | |
|---|---|---|---|---|---|---|---|---|---|
| **4. ಅಸಾಂಕ್ರಾಮಿಕ ರೋಗಗಳು** | | | | | | | | | |
| **4.1 ಎನ್.ಸಿ.ಡಿ. ತಪಾಸಣೆ** | | | | | | | | | |
| **ದತ್ತಾಂಶದ ಮೂಲ– ಹೆಚ್.ಡಬ್ಲ್ಯೂ.ಸಿ/ಎನ್.ಸಿ.ಡಿ. ಪೋರ್ಟಲ್** | | | | | | | | | |
| 4.1.ಎ ಗ್ರಾಮದಲ್ಲಿ ನಡೆದ ಆರೋಗ್ಯ ತಪಾಸಣಾ ಶಿಬಿರ | ಹೌದು/ಇಲ್ಲ | | | | | | | | |
| 4.1.ಬಿ ಹೆಚ್.ಡಬ್ಲ್ಯೂ.ಸಿ. ಸಿಬ್ಬಂದಿಯಿಂದ ತಪಾಸಣೆಗೆ ಒಳಗಾದ 30 ವರ್ಷ ಮೇಲ್ಪಟ್ಟ ಪುರುಷರು | ಸಂಖ್ಯೆ | | | | | | | | |
| ಮಧುಮೇಹ | ಸಂಖ್ಯೆ | | | | | | | | |
| ಅಧಿಕ ರಕ್ತದೊತ್ತಡ | ಸಂಖ್ಯೆ | | | | | | | | |
| 4.1.ಬಿ ಹೆಚ್.ಡಬ್ಲ್ಯೂ.ಸಿ. ಸಿಬ್ಬಂದಿಯಿಂದ ತಪಾಸಣೆಗೆ ಒಳಗಾದ 30 ವರ್ಷ ಮೇಲ್ಪಟ್ಟ ಮಹಿಳೆಯರು | | | | | | | | | |
| ಮಧುಮೇಹ | ಸಂಖ್ಯೆ | | | | | | | | |
| ಅಧಿಕ ರಕ್ತದೊತ್ತಡ | ಸಂಖ್ಯೆ | | | | | | | | |
| **ದತ್ತಾಂಶದ ಮೂಲ– ಹೆಚ್.ಡಬ್ಲ್ಯೂ.ಸಿ./ಎನ್.ಸಿ.ಡಿ. ಪೋರ್ಟಲ್** | | | | | | | | | |
| **4.2 ಎನ್.ಸಿ.ಡಿ ರೋಗ ತಪಾಸಣೆ** | | | | | | | | | |
| 4.2.ಎ ಆರೋಗ್ಯ ತಪಾಸಣೆಗೆ ಒಳಗಾದ 30 ವರ್ಷ ಮೇಲ್ಪಟ್ಟ ಪುರುಷರು | | | | | | | | | |
| ಮಧುಮೇಹ | ಸಂಖ್ಯೆ | | | | | | | | |
| ಅಧಿಕ ರಕ್ತದೊತ್ತಡ | ಸಂಖ್ಯೆ | | | | | | | | |
| 4.2.ಬಿ ತಪಾಸಣೆಗೆ ಒಳಗಾದ 30 ವರ್ಷ ಮೇಲ್ಪಟ್ಟ ಮಹಿಳೆಯರು | | | | | | | | | |
| ಮಧುಮೇಹ | ಸಂಖ್ಯೆ | | | | | | | | |
| ಅಧಿಕ ರಕ್ತದೊತ್ತಡ | ಸಂಖ್ಯೆ | | | | | | | | |
| **ದತ್ತಾಂಶದ ಮೂಲ– ಹೆಚ್.ಡಬ್ಲ್ಯೂ.ಸಿ./ಎನ್.ಸಿ.ಡಿ. ಪೋರ್ಟಲ್** | | | | | | | | | |
| **4.3 ಎನ್.ಸಿ.ಡಿ. ಚಿಕಿತ್ಸೆ** | | | | | | | | | |
| 4.3 ಎ ತಪಾಸಣೆಗೆ ಒಳಗಾಗಿ ಮತ್ತು ಚಿಕಿತ್ಸೆ ಪಡೆಯುತ್ತಿರುವ 30 ವರ್ಷ ಮೇಲ್ಪಟ್ಟ ಪುರುಷರು | | | | | | | | | |
| ಮಧುಮೇಹ | ಸಂಖ್ಯೆ | | | | | | | | |

| | ವಿವರಗಳು | ಗ್ರಾಮ 1 | | | | ಗ್ರಾಮ 2 | | | |
|---|---|---|---|---|---|---|---|---|---|
| ಅಧಿಕ ರಕ್ತದೊತ್ತಡ | ಸಂಖ್ಯೆ | | | | | | | | |
| 4.3 ಬಿ ತಪಾಸಣೆಗೆ ಒಳಗಾಗಿ ಮತ್ತು ಚಿಕಿತ್ಸೆ ಪಡೆಯುತ್ತಿರುವ 30 ವರ್ಷ ಮೇಲ್ಪಟ್ಟ ಮಹಿಳೆಯರು | | | | | | | | | |
| ಮಧುಮೇಹ | ಸಂಖ್ಯೆ | | | | | | | | |
| ಅಧಿಕ ರಕ್ತದೊತ್ತಡ | ಸಂಖ್ಯೆ | | | | | | | | |
| **ದತ್ತಾಂಶದ ಮೂಲ–ಹೆಚ್.ಡಬ್ಲ್ಯೂ.ಸಿ./ಎನ್.ಸಿ.ಡಿ. ಪೋರ್ಟಲ್** | | | | | | | | | |
| **4.4 ಉಚಿತ ಔಷಧಿಗಳು** | | | | | | | | | |
| 4.4 ಎ ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಚಿಕಿತ್ಸೆ ಪಡೆಯುತ್ತಿದ್ದು, ಸರ್ಕಾರದ ಆರೋಗ್ಯ ಸೌಲಭ್ಯಗಳ ಅಡಿಯಲ್ಲಿ ಕನಿಷ್ಠ ಒಂದು ಉಚಿತ ಔಷಧಿಯನ್ನು ಪಡೆದಿರುವ 30 ವರ್ಷ ಮೇಲ್ಪಟ್ಟ ಪುರುಷರು | ಸಂಖ್ಯೆ | | | | | | | | |
| 4.4 ಬಿ ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಚಿಕಿತ್ಸೆ ಪಡೆಯುತ್ತಿದ್ದು, ಸರ್ಕಾರದ ಆರೋಗ್ಯ ಸೌಲಭ್ಯಗಳ ಅಡಿಯಲ್ಲಿ ಕನಿಷ್ಠ ಒಂದು ಉಚಿತ ಔಷಧಿಯನ್ನು ಪಡೆದಿರುವ 30 ವರ್ಷ ಮೇಲ್ಪಟ್ಟ ಮಹಿಳೆಯರು | ಸಂಖ್ಯೆ | | | | | | | | |
| **5 ಕಾರ್ಯನಿರ್ವಹಿಸುತ್ತಿರುವ ಹೆಚ್.ಡಬ್ಲ್ಯೂ.ಸಿ.** | | | | | | | | | |
| **ದತ್ತಾಂಶದ ಮೂಲ– ಹೆಚ್.ಡಬ್ಲ್ಯೂ.ಸಿ./ಎನ್.ಸಿ.ಡಿ. ಪೋರ್ಟಲ್** | | | | | | | | | |
| **5.1 ಕಾರ್ಯನಿರ್ವಹಿಸುತ್ತಿರುವ ಎಸ್.ಸಿ.– ಹೆಚ್.ಡಬ್ಲ್ಯೂ.ಸಿ** | | | | | | | | | |
| 5.1.ಎ ಕೇಂದ್ರವು ನಿರಂತರ ನೀರು/ವಿದ್ಯುತ್ ಸೌಲಭ್ಯ ಹೊಂದಿದೆ | ಹೌದು/ಇಲ್ಲ | | | | | | | | |
| 5.1.ಬಿ ಸಾಕಷ್ಟು ಸಿಬ್ಬಂದಿ – ಕನಿಷ್ಠ 1 CHO, 1 PHCO ಮತ್ತು ಐದು ಆಶಾ ಕಾರ್ಯಕರ್ತೆಯರು | ಹೌದು/ಇಲ್ಲ | | | | | | | | |
| 5.1.ಸಿ ತೆರೆದಿರುವ ಸಮಯ– 9–4 PM | ಹೌದು/ಇಲ್ಲ | | | | | | | | |
| 5.1 ಡಿ ಇ.ಡಿ.ಎಲ್. ನಿಯಮದಂತೆ ಔಷಧಿಗಳ ಲಭ್ಯತೆ | ಹೌದು/ಇಲ್ಲ | | | | | | | | |
| 5.1. ಇ ಮಾರ್ಗಸೂಚಿಗಳಂತೆ ತಪಾಸಣೆಯ ಲಭ್ಯತೆ | ಹೌದು/ಇಲ್ಲ | | | | | | | | |

| | ವಿವರಗಳು | ಗ್ರಾಮ 1 | | | | ಗ್ರಾಮ 2 | | | |
|---|---|---|---|---|---|---|---|---|---|
| **ದತ್ತಾಂಶದ ಮೂಲ–ಹೆಚ್.ಡಬ್ಲ್ಯೂ.ಸಿ./ಎನ್.ಸಿ.ಡಿ. ಪೋರ್ಟಲ್** | | | | | | | | | |
| **5.2 ಕಾರ್ಯನಿರ್ವಹಿಸುತ್ತಿದೆ ನ ಪಿ.ಹೆಚ್.ಸಿ–ಹೆಚ್.ಡಬ್ಲ್ಯೂ.ಸಿ** | | | | | | | | | |
| 5.2.ಎ ಕೇಂದ್ರವು ನಿರಂತರ ನೀರು/ವಿದ್ಯುತ್ ಸೌಲಭ್ಯ ಹೊಂದಿದೆ | ಹೌದು/ಇಲ್ಲ | | | | | | | | |
| 5.2.ಬಿ ಸಾಕಷ್ಟು ಸಿಬ್ಬಂದಿ –ಕನಿಷ್ಠ ಒಬ್ಬರು ವೈದ್ಯಕೀಯ ಅಧಿಕಾರಿ, ಸಿಬ್ಬಂದಿ ನರ್ಸ್, ಪ್ರಯೋಗಾಲಯ ತಂತ್ರಜ್ಞ, ಔಷಧಿಕಾರ, ಎಲ್. ಹೆಚ್.ವಿ./ಪಿ.ಹೆಚ್.ಸಿ.ಒ. | ಹೌದು/ಇಲ್ಲ | | | | | | | | |
| 5.2.ಸಿ ತೆರೆದಿರುವ ಸಮಯ –9–5:30 PM | ಹೌದು/ಇಲ್ಲ | | | | | | | | |
| 5.2 ಡಿ ಇ.ಡಿ.ಎಲ್. ನಿಯಮದಂತೆ ಔಷಧಿಗಳ ಲಭ್ಯತೆ | ಹೌದು/ಇಲ್ಲ | | | | | | | | |
| 5.2. ಇ ಮಾರ್ಗಸೂಚಿಗಳ ಪ್ರಕಾರ ರೋಗನಿರ್ಣಯದ ಲಭ್ಯತೆ | ಹೌದು/ಇಲ್ಲ | | | | | | | | |
| **6 ಕ್ಷಯರೋಗ** | | | | | | | | | |
| **ದತ್ತಾಂಶದ ಮೂಲ–ನಿಕ್ಷಯ್ ಪೋರ್ಟಲ್** | | | | | | | | | |
| 6.1.ಎ ಟಿಬಿ ವ್ಯಕ್ತಿಗಳೆಂದು ಊಹಿಸಿ ಪರೀಕ್ಷಿಸಿದವರ ಸಂಖ್ಯೆ | ಸಂಖ್ಯೆ | | | | | | | | |
| 6.1.ಬಿ ಕಂಡುಬಂದ ಕ್ಷಯರೋಗ ಪ್ರಕರಣಗಳ (ಡಿ.ಎಸ್. ಮತ್ತು ಡಿ.ಆರ್.) ಸಂಖ್ಯೆ | ಸಂಖ್ಯೆ | | | | | | | | |
| 6.1.ಸಿ ಕಂಡುಬಂದ ಕ್ಷಯರೋಗ ರೋಗಿಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ | ಸಂಖ್ಯೆ | | | | | | | | |
| 6.1ಡಿ ನಿಕ್ಷಯ್ ಪೋಷಣ್ ಯೋಜನೆ ಅಡಿಯಲ್ಲಿ ಕನಿಷ್ಠ ಒಂದು ಕಂತು ಪಾವತಿಸಲಾಗಿರುವ ಕ್ಷಯರೋಗ ಫಲಾನುಭವಿಗಳ ಸಂಖ್ಯೆ | ಸಂಖ್ಯೆ | | | | | | | | |
| **7 ಇತರೆ ಆದ್ಯತೆಯ ವಲಯಗಳು** | | | | | | | | | |
| **ದತ್ತಾಂಶದ ಮೂಲ–ಗ್ರಾಮ ಪಂಚಾಯಿತಿ ದಾಖಲೆಗಳು /ಎ.ಡಬ್ಲ್ಯೂ.ಡಬ್ಲ್ಯೂ./ಆಶಾ** | | | | | | | | | |
| **7.1 ಆರೋಗ್ಯ ಅರ್ಹತೆಗಳು & ಆರ್ಥಿಕ ಭದ್ರತೆ** | | | | | | | | | |
| 7.1.ಎ ಪಿ.ಎಂ.ಜೆ.ಎ.ವೈ.–ಸಿ. ಎಂ. ಆರೋಗ್ಯ ಕರ್ನಾಟಕ ಯೋಜನೆಯಡಿ ವಿತರಿಸಲಾದ ಆಯುಷ್ಮಾನ್ ಕಾರ್ಡ್ ಫಲಾನುಭವಿಗಳ ಸಂಖ್ಯೆ | ಸಂಖ್ಯೆ | | | | | | | | |
| 7.1.ಬಿ ಕಾವಲು ಸಮಿತಿ ಕಾರ್ಯನಿರ್ವಹಿಸುತ್ತಿದೆಯೇ? | ಹೌದು/ಇಲ್ಲ | | | | | | | | |
| 7.1.ಸಿ VHSNC ರಚಿಸಲಾಗಿದೆ | ಹೌದು/ಇಲ್ಲ | | | | | | | | |

| | ವಿವರಗಳು | ಗ್ರಾಮ 1 | | | | ಗ್ರಾಮ 2 | | | |
|---|---|---|---|---|---|---|---|---|---|
| 7.1.ಡಿ VHSNC ಹಿಂದಿನ ಸಭೆಯ | ದಿನಾಂಕ | | | | | | | | |
| 7.1.ಇ VHSNC ಹಿಂದಿನ ಸಭೆಯ ಪ್ರಮುಖ ಚರ್ಚಾಂಶಗಳು | | | | | | | | | |
| 7.1.ಎಫ್ ಎಸ್.ಡಿ.ಎಂ.ಸಿ. ಹಿಂದಿನ ಸಭೆಯ ದಿನಾಂಕ | ದಿನಾಂಕ | | | | | | | | |
| 7.1.ಜಿ ಎಸ್.ಡಿ.ಎಂ.ಸಿ. ಹಿಂದಿನ ಸಭೆಯ ಪ್ರಮುಖ ಚರ್ಚಾಂಶಗಳು | | | | | | | | | |
| 7.1.ಹೆಚ್ ಬಾಲ ವಿಕಾಸ ಸಮಿತಿಯ ಹಿಂದಿನ ಸಭೆಯ ದಿನಾಂಕ | ದಿನಾಂಕ | | | | | | | | |
| 7.1.ಐ ಬಾಲ ವಿಕಾಸ ಸಮಿತಿಯ ಹಿಂದಿನ ಸಭೆಯ ಪ್ರಮುಖ ಚರ್ಚಾಂಶಗಳು | | | | | | | | | |
| 7.1.ಜೆ ಕೂಸಿನ ಮನೆ ಸಮಿತಿಯ ಹಿಂದಿನ ಸಭೆಯ ದಿನಾಂಕ | ದಿನಾಂಕ | | | | | | | | |
| 7.1.ಕೆ ಕೂಸಿನ ಮನೆ ಸಮಿತಿಯ ಹಿಂದಿನ ಸಭೆಯ ಪ್ರಮುಖ ಚರ್ಚಾಂಶಗಳು | | | | | | | | | |

## ಭಾಗ 2 – ಆರೋಗ್ಯ ಸಂಗಮ ಕ್ರಿಯಾಯೋಜನೆ ಪರಿಕರಗಳು

### 2.1 ಆದ್ಯತೆಗಳ ನಕ್ಷೆ

| ಆದ್ಯತೆ ಮಾನದಂಡಗಳು | ಸ್ಕೋರ್ (1/2) | ಕಾರಣ–1 | ಕಾರಣ–2 | ಕಾರಣ–3 |
|---|---|---|---|---|
| | | | | |
| | | | | |
| | | | | |

### 2.2 ಯೋಜನೆ ಮ್ಯಾಟ್ರಿಕ್ಸ್

| ಕ್ರ. ಸಂ. | ಸಮಸ್ಯೆ ಇರುವ ಪ್ರದೇಶ ಆದ್ಯತೆ | ಸಮಸ್ಯೆ ಪರಿಹಾರಕ್ಕೆ ಅಗತ್ಯ ಕ್ರಮ | ಅದನ್ನು ಯಾರು ಮುನ್ನಡೆಸುತ್ತಾರೆ (ವ್ಯಕ್ತಿ/ಸಂಸ್ಥೆ) | ಯಾರು ನೆರವು ನೀಡುತ್ತಾರೆ (ವ್ಯಕ್ತಿ/ಸಂಸ್ಥೆ) | ಅಗತ್ಯವಿರುವ ಸಂಪನ್ಮೂಲಗಳ ಪೂರ್ಣಗೊಳಿಸಲು ಕ್ರಮ (ಅನುದಾನ ಅಥವಾ ಇತರೆ) | ಪೂರ್ಣಗೊಂಡ ದಿನಾಂಕ (ವಾಸ್ತವಿಕವಾಗಿ) | ಕ್ರಿಯೆಯ ಮೇಲ್ವಿಚಾರಣೆ ಮತ್ತು ಪೂರ್ಣ ಗೊಂಡಿರುವುದನ್ನು ಯಾರು ಖಚಿತಪಡಿಸುತ್ತಾರೆ |
|---|---|---|---|---|---|---|---|
| | | | | | | | |
| | | | | | | | |
| | | | | | | | |

## ಭಾಗ 3 – ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಪರಿಶೀಲನೆ ಮತ್ತು ಅಳವಡಿಕೆ

| ಹಂತಗಳು | ಪ್ರಮುಖ ಪ್ರಶ್ನೆ | ಕ್ರಮಗಳು |
|---|---|---|
| ನಿಮ್ಮ ಪ್ರಗತಿ ಗಮನಿಸಿ | ಈ ತಿಂಗಳು ಸಾಧನೆ ಏನು? | ಪ್ರಸ್ತುತ ತಿಂಗಳಿನ ಗ್ರಾಮ ಪಂಚಾಯಿತಿ ಕಾರ್ಯಪಡೆ ಪ್ರಗತಿ ಗುರುತಿಸುವ ಎಲ್ಲಾ ಸೂಚಕಗಳ ವಿಮರ್ಶೆ |
| ಕಾರ್ಯಕ್ಷಮತೆಯ ಹೋಲಿಕೆ | ಕಳೆದ ತಿಂಗಳಿಗೆ ಹೋಲಿಸಿದರೆ ಈ ತಿಂಗಳ ಸಾಧನೆ ಹೇಗಿದೆ? | ಗ್ರಾಮ ಪಂಚಾಯಿತಿ ಕಾರ್ಯಪಡೆ ಪ್ರಗತಿ ಗುರುತಿಸುವ ಎಲಾ ಸೂಚಕಗಳಿಗೆ ಅನುಗುಣವಾಗಿ ಪ್ರಗತಿ ಹೆಚ್ಚಾಗಿದೆಯೇ, ಕಡಿಮೆಯಾಗಿದೆಯೇ ಅಥವಾ ನಿಶ್ಚಲವಾಗಿದೆಯೇ ಎಂಬುದನ್ನು ಗುರುತಿಸುವುದು |
| ಪ್ರಯತ್ನಗಳ ಮುಂದುವರಿಕೆ | ಸುಧಾರಣೆ ಆಗಿದೆಯೇ? | ಗ್ರಾಮ ಪಂಚಾಯಿತಿ ಕಾರ್ಯಪಡೆ ಪ್ರಗತಿ ಗುರುತಿಸುವ ಎಲಾ ಸೂಚಕಗಳಿಗೆ ಅನುಗುಣವಾಗಿ ಸುಧಾರಣೆಗಳ ಪಟ್ಟಿ ಮಾಡುವುದು |
| ದಾಖಲೆ (ಡಾಕ್ಯುಮೆಂಟ್) ಏನು ಕೆಲಸ ಮಾಡಿದೆ | ಯಶಸ್ಸಿಗೆ ನಿರ್ದಿಷ್ಟವಾಗಿ ಏನು ಕೊಡುಗೆ ನೀಡಿದೆ? | ಯಶಸ್ವಿ ಕ್ರಿಯೆಗಳ ಸುಧಾರಣೆಗಳಿಗೆ ದಾಖಲೆಗಳೂ ಹೇಗೆ ಕಾರಣವಾಗಿದೆ |
| ಸುಧಾರಣೆಯ ಕೊರತೆಯನ್ನು ಪರಿಹರಿಸುವಿಕೆ | ಏನು ಕೆಲಸ ಆಗಿರುವುದಿಲ್ಲ? | ಪ್ರಗತಿಯ ಕುಸಿತ/ನಿಶ್ಚಲತೆಗೆ ಕಾರಣವಾದ ಅಂತರಗಳು ಅಥವಾ ಅಡೆತಡೆಗಳನ್ನು ಗುರುತಿಸುವುದು |
| **3.2 ಪರಿಶೀಲನೆ ಮತ್ತು ಅಳವಡಿಕೆ ನಿಮ್ಮ ತಂತ್ರ** | | |
| ತಂತ್ರ ಅಳವಡಿಕೆ | ಕ್ರಿಯಾ ಯೋಜನೆ ಜಾರಿಗೆ ಯಾವ ಹೊಂದಾಣಿಕೆಗಳ ಅಗತ್ಯತೆ ಇದೆ? | ವಿಶ್ಲೇಷಣಾ ಪ್ರವೃತ್ತಿಗಳು |
| ಸಂಪನ್ಮೂಲಗಳ ಮರು ಹಂಚಿಕೆ | ಬದಲಾದ ತಂತ್ರಕ್ಕೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೆಚ್ಚು ಪರಿಣಾಮಕಾರಿ ಹಂಚಿಕೆ ಮಾಡುವುದು ಹೇಗೆ? | ಕಾಲಸೂಚಿ ಅಥವಾ ಸಂಪನ್ಮೂಲ ಹಂಚಿಕೆ ಪರಿಶೀಲನೆ (ಅನುದಾನ ಮತ್ತು ಮಾನವ ಸಂಪನ್ಮೂಲ) |

## ಅನುಬಂಧ 3: ಆರೋಗ್ಯ ಸಂಗಮ ಕಾರ್ಯಕ್ರಮಕ್ಕಾಗಿ ವಿವರಣಾತ್ಮಕ ಆಯವ್ಯಯ

| ತಾಲೂಕು ಪಂಚಾಯಿತಿ ಹಂತ | | | | |
|---|---|---|---|---|
| ಕ್ರ.ಸಂ | ವಿವರಗಳು | ಘಟಕಗಳ ಸಂಖ್ಯೆ | ಪ್ರತಿ ಘಟಕದ ವೆಚ್ಚ | ಒಟ್ಟು ವೆಚ್ಚ |
| **1** | **ಆರೋಗ್ಯ ಸಂಗಮ ಸುಗಮಗಾರರ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರ 3 ದಿನಗಳು** | | | |
| 1.1 | ಕಾರ್ಯಾಗಾರ ಸಮಯದ ಚಹಾ, ತಿಂಡಿ ಮತ್ತು ನೀರಿನ ವೆಚ್ಚ | 40 ಮಂದಿ ಭಾಗವಹಿಸುವವರು | 200 | 24000 |
| 1.2 | ಕಾರ್ಯಾಗಾರದ ಮುದ್ರಣ & ಲೇಖನ ಸಾಮಗ್ರಿಗಳು ವೆಚ್ಚಗಳು | 40 ಮಂದಿ ಭಾಗವಹಿಸುವವರು | 100 | 4000 |
| 1.3 | ಸಂಪನ್ಮೂಲ ವ್ಯಕ್ತಿಗಳ ಪ್ರಯಾಣ ವೆಚ್ಚ | 2 ಸಂಪನ್ಮೂಲ ವ್ಯಕ್ತಿಗಳು | 4000 | 24000 |
| 1.4 | ಸಂಪನ್ಮೂಲ ವ್ಯಕ್ತಿಗಳ ಮೂರು ದಿನಗಳ ವಸತಿ ವೆಚ್ಚ | 2 ಸಂಪನ್ಮೂಲ ವ್ಯಕ್ತಿಗಳು | 1000 | 6000 |
| | ಒಂದು ಕಾರ್ಯಾಗಾರದ ಉಪಮೊತ್ತ | | | **58000** |
| **2** | **ಕಾರ್ಯಕ್ರಮದ ರೂಪುರೇಷೆ ತಯಾರಿಕೆ ಮತ್ತು ತರಬೇತಿ ಕಾರ್ಯಾಗಾರ – ಒಂದು ದಿನ** | | | |
| 2.1 | ಆರೋಗ್ಯ ಸಂಗಮ ಸುಗಮಗಾರರ ಪ್ರಯಾಣ ಭತ್ಯೆ ಮತ್ತು ಗೌರವಧನ | ಇಬ್ಬರು ಆರೋಗ್ಯ ಸಂಗಮ ತರಬೇತಿದಾರರು | 1000 | 2000 |
| 2.2 | ಬಾಹ್ಯ ಸಂಪನ್ಮೂಲ ವ್ಯಕ್ತಿಗಳ ಪ್ರಯಾಣ ವೆಚ್ಚ | ಒಬ್ಬ ಸಂಪನ್ಮೂಲ ವ್ಯಕ್ತಿ | 4000 | 4000 |
| 2.3 | ಬಾಹ್ಯ ಸಂಪನ್ಮೂಲ ವ್ಯಕ್ತಿಗಳ ವಸತಿ ವೆಚ್ಚ | ಒಬ್ಬ ಸಂಪನ್ಮೂಲ ವ್ಯಕ್ತಿ | 1000 | 1000 |
| 2.4 | ಸಂಪನ್ಮೂಲ ವ್ಯಕ್ತಿಗಳ ಗೌರವಧನ | 3 ಮಂದಿ ಸಂಪನ್ಮೂಲ ವ್ಯಕ್ತಿಗಳು | 2000 | 6000 |
| 2.5 | ಕಾರ್ಯಾಗಾರದ ಮುದ್ರಣ & ಲೇಖನ ಸಾಮಗ್ರಿಗಳು ವೆಚ್ಚಗಳು | 40 ಮಂದಿ ಭಾಗವಹಿಸುವವರು | 100 | 4000 |
| 2.6 | ಕಾರ್ಯಾಗಾರದ ಸಮಯದ ಚಹಾ, ತಿಂಡಿ ಮತ್ತು ನೀರಿನ ವೆಚ್ಚ | 40 ಮಂದಿ ಭಾಗವಹಿಸುವವರು | 100 | 4000 |
| | ಒಂದು ರೂಪುರೇಷೆ ತಯಾರಿಕೆ ಕಾರ್ಯಾಗಾರದ ಉಪಮೊತ್ತ | | | 21000 |
| | ಮೂರು ರೂಪುರೇಷೆ ತಯಾರಿಕೆ ಕಾರ್ಯಾಗಾರದ ಒಟ್ಟು ಮೊತ್ತ | | | **63000** |
| **3** | **ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಗ್ರಾಮ ಪಂಚಾಯಿತಿಗಳ ಪ್ರಶಸ್ತಿ** | | | **10000** |
| **4** | **ಆರೋಗ್ಯ ಸಂಗಮ ಸುಗಮಗಾರರ ಪ್ರಯಾಣ ಭತ್ಯೆ ಮತ್ತು ಗೌರವಧನ** | | | |

| | | | | |
|---|---|---|---|---|
| 4.1 | ಇಬ್ಬರು ಆರೋಗ್ಯ ಸಂಗಮ ಸುಗಮಗಾರರ ಪ್ರಯಾಣ ಭತ್ಯೆ ಮತ್ತು ಗೌರವಧನ– ತ್ರೈಮಾಸಿಕಆರೋಗ್ಯ ಸಂಗಮ ಸಭೆಗಳನ್ನು ನಿರ್ವಹಿಸಲು | ಒಂದು ದಿನ/ ತ್ರೈಮಾಸಿಕ | 1000 | 8000 |
| 4.2 | ಇಬ್ಬರು ಆರೋಗ್ಯ ಸಂಗಮ ಸುಗಮಗಾರರ ಪ್ರಯಾಣ ಭತ್ಯೆ ಮತ್ತು ಗೌರವಧನ– ಆರೋಗ್ಯ ಸಂಗಮ ಗ್ರಾಮ ಪಂಚಾಯಿತಿ ಕಾರ್ಯಪಡೆಗಳಿಂದ ಕ್ರಿಯಾಯೋಜನೆ ಅನುಷ್ಠಾನದ ಪರಿವೀಕ್ಷಣೆ ಮಾಡಲು | 3 ದಿನಗಳು/ತಿಂಗಳು | 500 | 36000 |
| | ಆರೋಗ್ಯ ಸಂಗಮ ಸುಗಮಗಾರರ ಪ್ರಯಾಣ ಭತ್ಯೆ ಮತ್ತು ಗೌರವಧನದ ಉಪಮೊತ್ತ | | | **44000** |
| | **ತಾಲ್ಲೂಕು ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಒಟ್ಟು ಮೊತ್ತ** | | | **175000** |
| **ಗ್ರಾಮ ಪಂಚಾಯಿತಿ ಹಂತ** | | | | |
| **1** | **ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಬಗ್ಗೆ ಸಮುದಾಯಕ್ಕೆ ಅರಿವು ಮೂಡಿಸುವ ವೆಚ್ಚ** | | | **6000** |
| **2** | **ಆರೋಗ್ಯ ಸಂಗಮಕ್ಕಾಗಿ ಗ್ರಾಮ ಪಂಚಾಯಿತಿ ಕಾರ್ಯಪಡೆ ಸಭೆಗಳು – ಒಂದು ದಿನದ ಸಭೆ** | | | |
| 2.1 | ಸಭೆ ಸಮಯದ ಮುದ್ರಣ & ಲೇಖನ ಸಾಮಗ್ರಿಗಳು ವೆಚ್ಚಗಳು | 40 ಮಂದಿ ಭಾಗವಹಿಸುವವರು | 100 | 4000 |
| 2.2 | ಸಭೆ ಸಮಯದ ಚಹಾ, ತಿಂಡಿ ಮತ್ತು ನೀರಿನ ವೆಚ್ಚ | 40 ಮಂದಿ ಭಾಗವಹಿಸುವವರು | 100 | 4000 |
| | ಗ್ರಾಮ ಪಂಚಾಯಿತಿ ಕಾರ್ಯಪಡೆ ಒಂದು ಸಭೆಯ ಉಪಮೊತ್ತ | | | 8000 |
| | ಗ್ರಾಮ ಪಂಚಾಯಿತಿ ಕಾರ್ಯಪಡೆ ನಾಲ್ಕು ಸಭೆಗಳ ಒಟ್ಟು ಮೊತ್ತ | | | 32000 |
| **3** | **ಗ್ರಾಮ ಪಂಚಾಯಿತಿಗಳಿಂದ ಕ್ರಿಯಾ ಯೋಜನೆಯ** | **ಅನುಷ್ಠಾನ** | | |
| | ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಒಟ್ಟು ಮೊತ್ತ | | | 75000 |
| | ಪ್ರತಿ ವರ್ಷ ಪ್ರತಿ ಗ್ರಾಮ ಪಂಚಾಯಿತಿಯ ಒಟ್ಟು ಮೊತ್ತ | | | 250000 |

## ಅನುಬಂಧ 4: ಆರೋಗ್ಯ ಸಂಗಮ ಕಾರ್ಯಕ್ರಮದ ವಿವಿಧ ಹಂತಗಳ ತರಬೇತಿ

| ತರಬೇತಿ ಹಂತ | ತರಬೇತಿ ವಿವರ | ಭಾಗವಹಿಸುವವರ ವಿವರ | ಭಾಗವಹಿಸುವವರ ಸಂಖ್ಯೆ | ಸ್ಥಳ | ತರಬೇತಿ ಅವಧಿ | ತರಬೇತಿಯ ಸಂಖ್ಯೆ | ಸಂಪನ್ಮೂಲ ವ್ಯಕ್ತಿಗಳು |
|---|---|---|---|---|---|---|---|
| ಹಂತ–1 | ಆರೋಗ್ಯ ಸಂಗಮ ಸುಗಮಗಾರರ ಸಾಮರ್ಥ್ಯ ಅಭಿವೃದ್ಧಿ | ಆರೋಗ್ಯ ಸುಗಮಗಾರರು | 30 ಭಾಗವಹಿಸುವವರು (15 ಗ್ರಾಮ ಪಂಚಾಯಿತಿಗಳಿಗೆ ಇಬ್ಬರು ತರಬೇತಿದಾರರು) | ತಾಲ್ಲೂಕು ಪಂಚಾಯಿತಿ ಕಚೇರಿ | 3 ದಿನಗಳ ಕಾರ್ಯಾಗಾರ | ವರ್ಷದಲ್ಲಿ ಒಮ್ಮೆ | ಕೆಹೆಚ್‌ಪಿಟಿ ತಜ್ಞರು, ಕೆಹೆಚ್‌ಪಿಟಿ ಗುರುತಿಸಿದ ಬಾಹ್ಯ ಸಂಪನ್ಮೂಲ ವ್ಯಕ್ತಿಗಳು |
| ಹಂತ–2 | ಕಾರ್ಯಕ್ರಮದ ರೂಪುರೇಷೆ ತಯಾರಿಕೆ & ತರಬೇತಿ ಕಾರ್ಯಾಗಾರ | ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರು | ಪ್ರತಿ ಗ್ರಾಮ ಪಂಚಾಯತಿಯಿಂದ 30 ಮಂದಿ ಭಾಗವಹಿಸುವವರು | ತಾಲ್ಲೂಕು ಪಂಚಾಯಿತಿ ಕಚೇರಿ | 1 ದಿನದ ಕಾರ್ಯಾಗಾರ | ವರ್ಷದಲ್ಲಿ 3 ಬಾರಿ | ಆರೋಗ್ಯ ಸಂಗಮ ಸುಗಮಗಾರರು, ಕೆಹೆಚ್‌ಪಿಟಿ ತಜ್ಞರು, ಕೆಹೆಚ್‌ಪಿಟಿ ಗುರುತಿಸಿದ ಬಾಹ್ಯ ಸಂಪನ್ಮೂಲ ವ್ಯಕ್ತಿಗಳು |
| ಹಂತ–3 | ಗ್ರಾಮ ಪಂಚಾಯಿತಿ ಕಾರ್ಯಪಡೆ ಸಭೆ–ಗ್ರಾಮ ಪಂಚಾಯಿತಿ ಕಾರ್ಯಪಡೆಗಳ ಕಾರ್ಯನಿರ್ವಹಣಾ ಅವಧಿಯ ತರಬೇತಿ ಮತ್ತು ಕಲಿಕೆ ಪ್ರಕ್ರಿಯೆ | ಗ್ರಾಮ ಪಂಚಾಯಿತಿ ಕಾರ್ಯಪಡೆ ಸದಸ್ಯರು | ಪ್ರತಿ ಗ್ರಾಮ ಪಂಚಾಯತಿಯಿಂದ 30 ಮಂದಿ ಭಾಗವಹಿಸುವವರು | ತಾಲ್ಲೂಕು ಪಂಚಾಯಿತಿ ಕಚೇರಿ | 1 ದಿನದ ಸಭೆ | ಪ್ರತಿ ತ್ರೈಮಾಸಿಕ ದಲ್ಲಿ ಒಮ್ಮೆ | ಆರೋಗ್ಯ ಸಂಗಮ ಸುಗಮಗಾರರು |



ಕರ್ನಾಟಕ ಸರ್ಕಾರ
ಮಧುವನಹಳ್ಳಿ ಗ್ರಾಮ ಪಂಚಾಯಿತಿ
ಕಾರ್ಯಾಲಯ.
ಮಧುವನ ಹಳ್ಳಿ,
ಕೊಳ್ಳೇಗಾಲ ತಾ॥, ಚಾಮರಾಜನಗರ ಜಿಲ್ಲೆ.

**KHPT**
IT Park, 5th Floor,
1-4, Rajajinagar Industrial Area,
Behind KSSIDC Admin office, Rajajinagar,
Bengaluru, Karnataka - 560 044

Ph: + 91 80 4040 0200
Fax: + 91 80 4040 0300
Email: khptblr@khpt.org
Website: www.khpt.org

Scan Here